ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 4 ಬುಧವಾರ 2023

ಸಂಪುಟ: 44 | ಸಂಚಿಕೆ: 169 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೋಮುಗಲಭೆ ಮಾಡುವವರ ವಿರುದ್ಧ ಕಠಿಣ ಕ್ರಮ



ಬೆಂಗಳೂರು, ಅ.3(ಕೆಎಂಶಿ)–ನಮ್ಮ ಸರ್ಕಾರ ಕೋಮು ಗಲಭೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು, ಸಮಾಜದಲ್ಲಿ ಕೋಮು ಸೌಹಾರ್ದತೆಗೆ ಭಂಗ ತರುವ ಪ್ರಕರಣಗಳನ್ನು ನಿಯಂತ್ರಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದ ಮೇಲೆ ಕೋಮು ಗಲಭೆ ಹೆಚ್ಚಾಗಿದೆ ಎಂದು ಬಿಜೆಪಿಯವರು ಆರೋಪ ಮಾಡುತ್ತಿರುವುದಕ್ಕೆ ಪ್ರತಿಕ್ರಿಯೆ ನೀಡಿ, ಬಿಜೆಪಿಯವರಿಗೆ ಆರೋಪ ಮಾಡುವುದೇ ಕೆಲಸವಾಗಿದೆ ಎಂದರು. ಆರೋಪ ಮಾಡುವುದೆಲ್ಲ ಸತ್ಯವಲ್ಲ. ಶಿವಮೊಗ್ಗದ ಪ್ರಕರಣದಲ್ಲಿ ಕಲ್ಲು ಹೊಡೆದ ದುಷ್ಕರ್ಮಿಗಳನ್ನು ಬಂಧಿಸಲಾಗಿದ್ದು, ▶ 9ನೇ ಪುಟಕ್ಕೆ

ಈ ಬಾರಿ ಪ್ರಾಯೋಜಕತ್ವ ದಸರಾ

● ಸರ್ಕಾರ ನೀಡುವ ಅನುದಾನ ಬಳಕೆ ಕಡಿತ ಮಾಡಲು ನಿರ್ಧಾರ ● ಸಾಂಪ್ರದಾಯಿಕ ದಸರಾ ಆದರೂ ದೇಶವೇ ಮೈಸೂರತ್ತ ನೋಡುವಂತ ಕಾರ್ಯಕ್ರಮ ಆಯೋಜನೆ ● ಮೈಸೂರು ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ ● ದಸರಾ ಸಾಂಸ್ಕೃತಿಕ ಉಪ ಸಮಿತಿಯ ಪೋಸ್ಟರ್ ಬಿಡುಗಡೆ; ವೆಬ್‌ಸೈಟ್‌ಗೆ ಚಾಲನೆ





ಮೈಸೂರು, ಅ.3(ಎಂಟಿವೈ)–ಈ ಬಾರಿ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸುವ ಆಶಯ ಇತ್ತು. ಆದರೆ, ತೀವ್ರ ಬರದ ಹಿನ್ನೆಲೆಯಲ್ಲಿ ಬರೀ ಸಾಂಪ್ರದಾಯಿಕ ದಸರಾ ಆಚರಿಸಲಾಗುತ್ತಿದೆ. ಆದರೂ ಇಡೀ ದೇಶವೇ ಮೈಸೂರಿನತ್ತ ನೋಡುವಂತೆ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರು ಅರಮನೆಯ ಮಂಡಳಿ ಸಭಾಂಗಣದಲ್ಲಿ ಮಂಗಳವಾರ ದಸರಾ ಸಾಂಸ್ಕೃತಿಕ ಉಪ ಸಮಿತಿಯ ಪೋಸ್ಟರ್ ಬಿಡುಗಡೆ ಮಾಡಿ, ದಸರಾ ವೆಬ್‌ಸೈಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲ ಎದುರಾಗಿರುವ ಹಿನ್ನೆಲೆಯಲ್ಲಿ ಈ ಬಾರಿ ಸಾಂಪ್ರದಾಯಿಕ ದಸರಾ ಆಚರಿಸಲು ತೀರ್ಮಾನಿಸಲಾಗಿದೆ. ಹಾಗಾಗಿ ಸರ್ಕಾರದಿಂದ ಮಾಡುವ ವೆಚ್ಚದ ಪ್ರಮಾಣ ತಗ್ಗಿಸಿ, ಖಾಸಗಿ ಕಂಪನಿಗಳಿಂದ ಪ್ರಾಯೋಜಕತ್ವ ಪಡೆಯಲು ತೀರ್ಮಾನಿಸಲಾಗಿದೆ. ಈಗಾಗಲೇ ವಿವಿಧ ಕಂಪನಿಗಳ ಆಡಳಿತ ಮಂಡಳಿಯೊಂದಿಗೆ ಚರ್ಚಿಸಲಾಗಿದೆ ಆದೂ ವಿಶಿಷ್ಟ ಕಾರ್ಯಕ್ರಮಗಳಿಂದ ಇಡೀ ದೇಶವೇ ಮೈಸೂರಿನತ್ತ ನೋಡುವ ಹಾಗೆ ಉತ್ತಮ ರೀತಿಯಲ್ಲಿ ದಸರಾ ಮಹೋತ್ಸವ ಆಚರಿಸಲಾಗುವುದು ಎಂದರು. ದಸರಾ ಉತ್ಸವಕ್ಕೆ ಸರ್ಕಾರದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 15 ಕೋಟಿ ರೂ. ಬಿಡುಗಡೆಯಾಗಿದೆ. ಆದರೆ, ಈ ವೆಚ್ಚವನ್ನು ತಗ್ಗಿಸಲು ಪ್ರಯತ್ನಿಸಲಾಗುವುದು. ಈ ಬಾರಿ ಎಲ್ಲ ಕಾರ್ಯಕ್ರಮಗಳೂ ಇರಲಿವೆ. ಏರ್‌ಶೋ ವಿಚಾರವಾಗಿ ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಲಾಗಿದ್ದು, ಇದುವರೆಗೆ ಅನುಮತಿ ದೊರೆತಿಲ್ಲ. ಯುವ ದಸರಾ, ಫಲಪುಷ್ಪ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು ಇರಲಿವೆ. ಈ ಬಾರಿಯ ಯುವ ದಸರಾದಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸುವ ಕಲಾತಂಡಗಳ ಆಯ್ಕೆ ಸಂಬಂಧ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಈ ಬಾರಿಯೂ ದೀಪಾಲಂಕಾರದಿಂದ ಮೈಸೂರು ಜಗಮಗಿಸಲಿದೆ ಎಂದು ತಿಳಿಸಿದರು.

18 ಸಮಿತಿ ರಚನೆ: ದಸರಾ ಆಚರಣೆ ಸಂಬಂಧ ಇದುವರೆಗೆ 10 ಸಭೆಗಳನ್ನು ಮಾಡಿದ್ದೇನೆ. 18 ಸಮಿತಿಗಳನ್ನು ರಚಿಸಲಾಗಿದೆ. ಆ ಸಮಿತಿಗಳಿಗೆ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡಲಾಗುವುದು. ಯುವ ಸಮುದಾಯವನ್ನು ಆಕರ್ಷಿಸಲು ಯುವ ಸಂಭ್ರಮ, ಯುವ ದಸರಾ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಅ.15ರಂದು ದಸರಾ ಚಾಲನೆ: ಈ ಸಾಲಿನ ದಸರಾ ಮಹೋತ್ಸವವನ್ನು ಅ.15 ರಂದು ಚಾಮುಂಡಿಬೆಟ್ಟದಲ್ಲಿ ಸಂಗೀತ ನಿರ್ದೇಶಕ ಡಾ.ಹಂಸಲೇಖ ವಿದ್ಯುಕ್ತವಾಗಿ ಉದ್ಘಾಟಿಸಲಿದ್ದಾರೆ. ಅದೇ ದಿನ ಫಲಪುಷ್ಪ ಪ್ರದರ್ಶನ, ವಸ್ತುಪ್ರದರ್ಶನ, ಕುಸ್ತಿ, ದಸರಾ ಚಲನಚಿತ್ರೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ದಸರಾ ಮಹೋತ್ಸವದ ಅಂತಿಮ ಹಂತದ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ▶ 9ನೇ ಪುಟಕ್ಕೆ

ವೈವಿಧ್ಯಮಯ ಆಹಾರ ಮೇಳ



ಈ ಬಾರಿ ದಸರಾ ಮಹೋತ್ಸವದಲ್ಲಿ ಒಂದೇ ಸ್ಥಳದಲ್ಲಿ ಆಹಾರ ಮೇಳ ನಡೆಸಲು ಉದ್ದೇಶಿಸಲಾಗಿದೆ. ಇಲ್ಲಿ ಒಂದೇ ಬಗೆಯ ಆಹಾರ ಮಳಿಗೆಗಳ ಸಂಖ್ಯೆ ಕಡಿಮೆ ಮಾಡಿ, ವೈವಿಧ್ಯತೆಗೆ ಆದ್ಯತೆ ನೀಡಲು ನಿರ್ಧರಿಸಲಾಗಿದೆ ಎಂದರು. ಕಳೆದ ಬಾರಿ ಎರಡು ಕಡೆ ಆಹಾರ ಮೇಳವಿತ್ತು. ಹೆಚ್ಚು ಜನರನ್ನು ಆಕರ್ಷಿಸಿತ್ತು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಮತ್ತೊಂದು ಕಡೆಯೂ ಆಹಾರ ಮೇಳ ಆಯೋಜಿಸುವ ಸಂಬಂಧ ಆಲೋಚಿಸುವುದಾಗಿ ಹೇಳಿದರು.

ಮೈಸೂರು ಅರಮನೆ ಆವರಣದಲ್ಲಿ ಫಿರಂಗಿಗಳಿಗೆ ಪೂಜೆ

■ ಆನೆ ಬಾಗಿಲು ಬಳಿ 11 ಫಿರಂಗಿಗಳಿಗೂ ಶಾಸ್ತ್ರೋಕ್ತ ಪೂಜೆ ■ ಕುಶಾಲತೋಪು ಸಿಡಿಸಲು 7 ಫಿರಂಗಿ ಬಳಕೆ



ಮೈಸೂರು, ಅ.3(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ದಿನ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ವೇಳೆ ಸಿಡಿಮದ್ದು ಸಿಡಿಸುವ ಫಿರಂಗಿಗಳಿಗೆ ಮಂಗಳವಾರ ಅರಮನೆ ಆವರಣದಲ್ಲಿ ಪೂಜೆ ಸಲ್ಲಿಸಲಾಯಿತು.

ಅರಮನೆಯ ಆನೆ ಬಾಗಿಲು ಬಳಿ ಎಲ್ಲಾ 11 ಫಿರಂಗಿಗಳಿಗೂ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೊತ್ ಪೂಜೆ ಸಲ್ಲಿಸಿದರು. ಅರ್ಚಕ ಎಸ್.ವಿ.ಪ್ರಹ್ಲಾದ್ ರಾವ್ ನೇತೃತ್ವದಲ್ಲಿ ಎಲ್ಲಾ ಫಿರಂಗಿಗಳಿಗೂ ಅರಿಶಿನ–ಕುಂಕುಮ ಹಚ್ಚಿ, ಸೇವಂತಿಗೆ ಹೂವಿಂದ ಅಲಂಕರಿಸಿ ಬಳಿಕ ವಿಜಯಗಣಪತಿ ಪೂಜೆ, ಕಳಸದಲ್ಲಿ ಮೃತ್ಯುಂಜಯ ಅವಗಾಹನೆ ಮಾಡಿ, ಚಾಮುಂಡೇಶ್ವರಿ ಪೂಜೆ ಮಾಡಲಾಯಿತು. ಬಳಿಕ ಫಿರಂಗಿ ದಳಕ್ಕೆ ನಿಯೋಜನೆಗೊಂಡಿರುವ ಎಲ್ಲಾ ಸಿಬ್ಬಂದಿ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಿಂದ ಮೃತ್ಯುಂಜಯ ಜಪ ಮಾಡಿಸಿ, ಈಶ್ವರನ ಸ್ಮರಿಸಿ, ಪೂಜೆ ಸಲ್ಲಿಸಲಾಯಿತು.

ಒಣ ತಾಲೀಮಿಗೆ ಸಿದ್ಧತೆ: ನಾಡಹಬ್ಬ ದಸರಾ ಮಹೋತ್ಸವಕ್ಕೆ ಕೇವಲ 12 ದಿನ ವಿದ್ದು, ಈಗ ಫಿರಂಗಿ ದಳವನ್ನು ರಚಿಸಲಾಗಿದೆ. ನಗರ ಸಶಸ್ತ್ರ ಮೀಸಲು ನುರಿತ, ಅನುಭವಿ ಸಿಬ್ಬಂದಿಗಳನ್ನೊಳಗೊಂಡ ತಂಡ ರಚಿಸಲಾಗಿದೆ. ಇಂದು ಫಿರಂಗಿ ಪೂಜೆ ನೆರವೇರಿದ ▶ 9ನೇ ಪುಟಕ್ಕೆ

ಮಾ.17ಕ್ಕೆ ಶ್ರೀನಿವಾಸಪ್ರಸಾದ್ ರಾಜಕೀಯ ನಿವೃತ್ತಿ



ಚಾಮರಾಜನಗರ, ಅ.3–ನಾನು ರಾಜಕೀಯ ಕ್ಷೇತ್ರಕ್ಕೆ ಬಂದು ಮುಂಬರುವ 2024ರ ಮಾ.17ಕ್ಕೆ 50 ವರ್ಷ ಪೂರ್ಣವಾಗಲಿದ್ದು, ಅಂದೇ ನಾನು ರಾಜಕೀಯಕ್ಕೆ ನಿವೃತ್ತಿ ಘೋಷಿಸುತ್ತೇನೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಇಷ್ಟು ವರ್ಷದ ರಾಜಕಾರಣ ನನಗೆ ತೃಪ್ತಿ ತಂದಿದೆ. ಇನ್ನು ಮುಂದೆ ರಾಜಕೀಯದ ಬಗ್ಗೆ ಮಾತನಾಡುವುದಿಲ್ಲ. ಯಾವ ರಾಜಕೀಯ ಪಕ್ಷದ ಪರವೂ ಚುನಾವಣಾ ಪ್ರಚಾರ ಮಾಡುವುದಿಲ್ಲ. ಮುಂದಿನ ಚುನಾವಣೆಗೆ ನಮ್ಮ ಕುಟುಂಬದಿಂದ ಯಾರ ಹೆಸರನ್ನು ಪ್ರಸ್ತಾಪ ಮಾಡುವುದಿಲ್ಲ ಎಂದರು. ಬಿಜೆಪಿ– ಜೆಡಿಎಸ್ ಮೈತ್ರಿ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮೈತ್ರಿ ಕುರಿತು ಬೊಬ್ಬೆ ಹಾಕುವುದು ಸರಿಯಲ್ಲ. 'ಇಂಡಿಯಾ' ಎಂದು ಮೈತ್ರಿಯಾಗಿದೆ. ಕಾಂಗ್ರೆಸ್ ಪಕ್ಷವನ್ನು ಕಟುವಾಗಿ ವಿರೋಧಿಸುವ 30 ಪಕ್ಷಗಳು 'ಇಂಡಿಯಾ' ಹೆಸರಿನಲ್ಲಿ ಒಂದಾಗಬಹುದು, ಇವರಿಬ್ಬರು ಒಂದಾಗಬಾರದಾ? ಜೆಡಿಎಸ್–ಬಿಜೆಪಿ ಮೈತ್ರಿ ಜನಾದೇಶಕ್ಕೆ ಬಿಟ್ಟದ್ದು ಎಂದು ತಿಳಿಸಿದರು. ▶ 9ನೇ ಪುಟಕ್ಕೆ

ಸಿದ್ದರಾಮಯ್ಯರ ಸರ್ಕಾರ ಬಸವ ತತ್ವದ ಮೇಲೆ ನಡೆಯುತ್ತಿದೆ ಜಾತಿ ತತ್ವದ ಮೇಲಲ್ಲ...


● ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಆಡಳಿತ ಪಕ್ಷದ ಶಾಸಕರ ವಕಾಲತ್ತು ● ಕಾಂಗ್ರೆಸ್ ಲಿಂಗಾಯತ ಸಮುದಾಯದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿಕೆಗೆ ಅದೇ ಸಮುದಾಯದ ಶಾಸಕರಿಂದ ಕೌಂಟರ್ ● ಸಿದ್ದರಾಮಯ್ಯ ಲಿಂಗಾಯತ ವಿರೋಧಿ ಅಲ್ಲ; ಬಸವ ತತ್ವದ ಪರಿಪಾಲಕರು

ಬೆಂಗಳೂರು, ಅ.3(ಕೆಎಂಶಿ)–ವೀರಶೈವ ಸಮುದಾಯಕ್ಕೆ ಸೇರಿದ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಗಳಲ್ಲಿ ನಿಯೋಜಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಆಡಳಿತ ಪಕ್ಷದ ಶಾಸಕರು ವಕಾಲತ್ತು ವಹಿಸಿದ್ದಾರೆ.

ಪಕ್ಷದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಬಸವ ತತ್ವದ ಮೇಲೆ ನಡೆಯುತ್ತಿದೆಯೇ ಹೊರತು ಜಾತಿ ತತ್ವದ ಮೇಲಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಮುಖ್ಯಮಂತ್ರಿಯವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಹಾಲಿ ಶಾಸಕ ಮತ್ತು ಮಾಜಿ ಸಚಿವ ಬಸವರಾಜ ರಾಯರೆಡ್ಡಿ ಅವರು ತಮ್ಮ ಸಮಾಜದ ಅಧಿಕಾರಿಗಳ ನಿಯೋಜನೆಯ ಅಂಕಿ–ಅಂಶಗಳನ್ನು ಸುದ್ದಿಗೋಷ್ಠಿಯಲ್ಲಿ ಮುಂದಿಟ್ಟು ನಮ್ಮ ಸರ್ಕಾರದಲ್ಲಿ ಯಾವುದೇ ಸಮುದಾಯಕ್ಕೆ ಅನ್ಯಾಯವಾಗಿಲ್ಲ ಎಂದರು. ▶ 9ನೇ ಪುಟಕ್ಕೆ

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಇಲ್ಲವೇ ಭಾರತದ ರಾಷ್ಟ್ರಪತಿಗಳಿಂದ ಮಾತ್ರ ಕಾವೇರಿ ವಿವಾದಕ್ಕೆ ಪರಿಹಾರ


■ ಪತ್ರಿಕಾ ಸಂವಾದದಲ್ಲಿ ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್ ಅಭಿಮತ
■ ನಮ್ಮವರೇ ಅಡಿಗಡಿಗೆ ಮಾಡಿದ ಲೋಪಗಳಿಂದ ನಮಗೀಗ ಘೋರ ಅನ್ಯಾಯವಾಗಿದೆ
■ ಕಾನೂನಾತ್ಮಕ ಹಾಗೂ ರಾಜಕೀಯ ಇಚ್ಛಾಶಕ್ತಿ ಕೊರತೆಯೇ ಕಾವೇರಿ ಸಂಕಷ್ಟಕ್ಕೆ ಕಾರಣ



ಪತ್ರಿಕಾಗೋಷ್ಠಿಯಲ್ಲಿ ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್

ಮೈಸೂರು, ಅ.3(ಬಿಎಲ್‌ಯು)– ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಥವಾ ರಾಷ್ಟ್ರಪತಿ ಅವರಿಂದ ಮಾತ್ರ ಶತಮಾನದ ಕಾಲದ ಕಾವೇರಿ ವಿವಾದಕ್ಕೆ ಪರಿಹಾರ ಸಾಧ್ಯ. ಆಗ ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ನ್ಯಾಯ ಸಿಗಬಹುದು ಎಂದು ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ಸಂವಾದದಲ್ಲಿ ಮಾತನಾಡಿದ ಅವರು, ಸಂವಿಧಾನದ ಪರಿಚ್ಛೇದ 261ರ ಪ್ರಕಾರ ಕಾವೇರಿ ನದಿ ನೀರು ವಿವಾದವನ್ನು ಬಗೆಹರಿಸಲು ಸಾಧ್ಯವಿದೆ ಎಂದು ಹೇಳಿದರು. ▶ 4ನೇ ಪುಟಕ್ಕೆ



ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಲು ನಾವೇ ಕಾರಣ

ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗಲು ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದ ಪರ ಸಮರ್ಥ ವಾದ ಮಂಡನೆ ಆಗದೇ ಇರುವುದೇ ಮೂಲ ಕಾರಣ ಎಂದು ಅರ್ಜುನಹಳ್ಳಿ ಪ್ರಸನ್ನಕುಮಾರ್ ದೂರಿದರು.

ಕಾವೇರಿ ವಿಚಾರವಾಗಿ ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ ಪ್ರತಿ ಬಾರಿಯೂ ನಮ್ಮವರು ತಪ್ಪು ಎಸಗಿದ್ದಾರೆ. ಇದರಿಂದಲೇ ಸುಪ್ರೀಂ ಕೋರ್ಟ್‌ನ ಪ್ರತಿಯೊಂದು ಆದೇಶದ ಸಂದರ್ಭದಲ್ಲೂ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ದೂರಿದರು. ಈ ಪ್ರಕರಣ ನಿರ್ವಹಣೆ ಮಾಡುತ್ತಿರುವ ನಮ್ಮವರು ಸರಿಯಾಗಿಲ್ಲ. ಇನ್ನು ಸುಪ್ರೀಂಕೋರ್ಟ್ ಅಥವಾ ಕಾವೇರಿ ನ್ಯಾಯಾಧೀಕರಣ ದೂಷಿಸಿದರೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು. ಸಂವಿಧಾನದ ಪರಿಚ್ಛೇದ 261ರ ಪ್ರಕಾರ ನದಿ ವಿವಾದ ಪರಿಹರಿಸುವ ಅಧಿಕಾರ ನ್ಯಾಯಾಲಯಕ್ಕೆ ಇಲ್ಲ ಎಂದು ನಮ್ಮವರು ಎಂದೂ ಹೇಳಲಿಲ್ಲ. ಕಾವೇರಿ ನ್ಯಾಯಾಧೀಕರಣ ಸ್ಥಾಪನೆ ಅಸಂವಿಧಾನಿಕ ಎಂದು ಒಂದು ದಿನವೂ ವಾದ ಮಾಡಲಿಲ್ಲ. ▶ 4ನೇ ಪುಟಕ್ಕೆ

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಅಪರಾಧಿಗಳು

ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದ್ದು, ಈ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಅಪರಾಧಿಗಳಾಗಿವೆ ಎಂದು ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್ ಆರೋಪಿಸಿದರು.

ಕಾವೇರಿ ವಿಚಾರವಾಗಿ ಕರ್ನಾಟಕಕ್ಕೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಯಾವ ಪಕ್ಷಕ್ಕೂ ಬದ್ಧತೆ ಇಲ್ಲ. ರಾಜಕೀಯ ಲಾಭಕ್ಕಾಗಿ ಹೇಳಿಕೆ ಕೊಡುತ್ತಾರೆಯೇ ಹೊರತು, ಕರ್ನಾಟಕಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮೂರು ಪಕ್ಷಗಳು ಕಿಂಚಿತ್ತೂ ಆಸಕ್ತಿ ತೋರಲಿಲ್ಲ ಎಂದರು.

ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಅಧಿಕಾರದಲ್ಲಿದ್ದಾಗ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಆದೇಶಗಳಾಗಿವೆ. ಈ ಸಂದರ್ಭದಲ್ಲಿ ನಮ್ಮ ವಕೀಲರು ಏನು ವಾದ ಮಾಡಬೇಕು, ನಮ್ಮ ಕಾರ್ಯತಂತ್ರಗಳೇನು, ಕರ್ನಾಟಕಕ್ಕೆ ಅನ್ಯಾಯವಾಗದಂತೆ ಏನು ಮಾಡಬೇಕು ಎಂದು ಯಾವ ▶ 4ನೇ ಪುಟಕ್ಕೆ

ಜಾತಿಗಣತಿ ವರದಿ ಸರ್ಕಾರಕ್ಕೆ ಸಲ್ಲಿಸಲು ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ

■ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ■ ಆಯೋಗ ವರದಿ ಪರಿಶೀಲಿಸುವ ಭರವಸೆ



ಬೆಂಗಳೂರು. ಅ. 3(ಕೆಎಂಶಿ)–ಜಾತಿಗಣತಿ ವರದಿ ಸರ್ಕಾರಕ್ಕೆ ಸಲ್ಲಿಸಲು ಹಿಂದುಳಿದ ವರ್ಗಗಳ ಆಯೋಗಕ್ಕೆ ತಿಳಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯೋಗವು ವರದಿ ಸಲ್ಲಿಸಿದರೆ ಪರಿಶೀಲಿಸಲಾಗುವುದು. ಹೆಚ್.ಡಿ ಕುಮಾರಸ್ವಾಮಿ ಅವರು ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದ ಮುಖ್ಯಮಂತ್ರಿಯಾಗಿದ್ದಾಗ ಕಾಂತರಾಜು ಅವರು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದರು. ಆಗ ಆಯೋಗ ವರದಿ ತಯಾರು ಮಾಡಿತ್ತು. ವರದಿ ಸಲ್ಲಿಸಲು ಕಾಂತರಾಜು ಹೋದಾಗ ಅದನ್ನು ಅವರು ಸ್ವೀಕರಿಸಲಿಲ್ಲ. ಆಗಿನ ಕಾರ್ಯದರ್ಶಿಗಳು ವರದಿಗೆ ಸಹಿ ಮಾಡಿಲ್ಲ. ಈಗಿನ ಕಾರ್ಯದರ್ಶಿಗಳ ಬಳಿ ಸಹಿ ಮಾಡಿಸಿ ಅವರು ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಜಾತಿ ಗಣತಿ ಹಾಗೂ ಸಾಮಾಜಿಕ, ಆರ್ಥಿಕ ಸಮೀಕ್ಷೆ ಮಾಡಬೇಕೆಂದು ನಾನೇ ಹಿಂದೆ ಆದೇಶ ಮಾಡಿದ್ದು, ಆಗ ಕಾಂತರಾಜು ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದರು. ನಮ್ಮ ಸರ್ಕಾರದ ಅವಧಿಯಲ್ಲಿ ವರದಿ ಪೂರ್ಣವಾಗಿರಲಿಲ್ಲ ನಂತರ ಸಮ್ಮಿಶ್ರ ಸರ್ಕಾರ ಇರುವಾಗ ಅಂದಿನ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ▶ 9ನೇ ಪುಟಕ್ಕೆ

ಮೈಸೂರು ಮಿತ್ರ

ಬುಧವಾರ 4 ಅಕ್ಟೋಬರ್ 2023

ಮೃಗಾಲಯದ ವತಿಯಿಂದ 69ನೇ ವನ್ಯಜೀವಿ ಸಪ್ತಾಹ: ವಿವಿಧ ಕಾರ್ಯಕ್ರಮ



ಮೈಸೂರು, ಅ. 3–ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಅ.8ರವರೆಗೆ 69ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಮೃಗಾಲಯದ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅ.4ರಂದು ವಿಶ್ವದ ಎಲ್ಲಾ ಮೃಗಾಲಯಗಳು ಅಂತರರಾಷ್ಟ್ರೀಯ ಮೃಗಾಲಯ ಪ್ರಾಣಿ ಪಾಲಕರ ದಿನಾಚರಣೆ ಆಚರಿಸಲಿದ್ದು, ಇದರ ಅಂಗವಾಗಿ ಮೈಸೂರು ಮೃಗಾಲಯವು ಮೃಗಾಲಯ ಪ್ರಾಣಿ ಪಾಲಕರಿಗೆ ಆಟೋಟ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಹಾಗೂ ಎಲ್ಲಾ ಪ್ರಾಣಿ ಪಾಲಕರು ರಂಗನತಿಟ್ಟು ಪಕ್ಷಿಧಾಮಕ್ಕೆ ಭೇಟಿ ನೀಡಲಿದ್ದಾರೆ.

ಅ.5 ಮತ್ತು 6ರಂದು (2 ದಿನ) ಬೆಳಗ್ಗೆ 7ರಿಂದ 8.30ರವರೆಗೆ ಕಾರಂಜಿ ಪ್ರಕೃತಿ ಉದ್ಯಾನವನದಲ್ಲಿ ಪ್ರಕೃತಿ ನಡಿಗೆ ಹಾಗೂ ಜೀವವೈವಿಧ್ಯತೆಯನ್ನು ತಿಳಿದುಕೊಳ್ಳುವ ಚಟುವಟಿಕೆಯನ್ನು ಆಯೋಜಿಸಲಾಗಿದೆ. ಆಸಕ್ತರು https://form. le/56U McedJ LNDUzs Wl7 ಲಿಂಕ್‌ನಲ್ಲಿ ಗೂಗಲ್ ಫಾರಂ ಭರ್ತಿ ಮಾಡಿ ಅ.4 ಸಂಜೆ 5.30ರೊಳಗೆ ಸಲ್ಲಿಸಬಹುದು.

ಅ.7ರಂದು ಬೆಳಗ್ಗೆ 10ರಿಂದ 12ರವರೆಗೆ 8ರಿಂದ 12ನೇ ತರಗತಿಯ ಶಾಲಾ–ಕಾಲೇಜು ಮಕ್ಕಳಿಗೆ ಹವಾಮಾನ ಬದಲಾವಣೆ ಹಾಗೂ ವನ್ಯಜೀವಿಗಳ ಮೇಲೆ ಅದರ ಪ್ರಭಾವ ಎಂಬುವ ವಿಚಾರಗಳ ಕುರಿತು ಪ್ರಬಂಧ ಹಾಗೂ ಭಾಷಣ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತರು https://form.le/56UMcedJLNDUzsWl7 ಲಿಂಕ್‌ನಲ್ಲಿ ಗೂಗಲ್ ಫಾರಂ ಭರ್ತಿ ಮಾಡಿ ಅ.6 ಸಂಜೆ 5.30ರೊಳಗೆ ಸಲ್ಲಿಸಬಹುದು. ಸ್ಪರ್ಧೆಯಲ್ಲಿನ ವಿಜೇತರಿಗೆ ಅ.8ರಂದು ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾರಂಭವನ್ನು ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಂಗಳವಾರ ಶಾಸಕ ತನ್ವೀರ್ ಸೇಠ್ ಅವರಿಗೆ ಭಾರೀ ಮೋಸಂಬಿ ಹಾರ ಹಾಕಿ ಅವರ ಅಭಿಮಾನಿಗಳು ಅಭಿನಂದಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರೂ ಆದ ಮಾಜಿ ಕಾರ್ಪೊರೇಟರ್, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎನ್.ಧೃವರಾಜ್, ಮೈಸೂರು ನಗರ ಯುವ ಕಾಂಗ್ರೆಸ್ ಕಾರ್ಯದರ್ಶಿ ಕಾರ್ತಿಕ್, ಅರವಿಂದ್, ಮನು, ನರಸಿಂಹ, ಮಂಜು, ಟೈಗರ್ ಚಿನ್ನು ಇನ್ನಿತರರಿದ್ದರು.



ಮೈಸೂರಿನ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಕೃಷ್ಣಮೂರ್ತಿ ವರ್ಲ್ಡ್ ಸ್ಕೂಲ್ ಅನ್ನು ಬೆಂಗಳೂರಿನ ಸ್ಟಡಿ ವ್ಯಾಲಿ ಸೆಂಟರ್‌ನ ಚೀಫ್ ಆಫೀಸರ್ ಗುರುವಿಂದರ್ ಸಿಂಗ್ ಉದ್ಘಾಟಿಸಿದರು. ಕೃಷ್ಣಮೂರ್ತಿ ಸ್ಕೂಲ್‌ನ ಅಧ್ಯಕ್ಷ ರವಿ ಸಾಧನಾ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ(ಪ್ರಭಾರ) ಪ್ರೊ.ಜಗದೀಶ್ ಪ್ರಕಾಶ್, ಶಿಕ್ಷಣ ತಜ್ಞೆ ಇಂಗ್ರಿಡ್ ಪೆರೇರಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಅ.3–ಹಿಂದುಳಿದ ವರ್ಗಗಳ ಪ್ರವರ್ಗ–3ಎ ನಲ್ಲಿ ಬರುವ ಒಕ್ಕಲಿಗ ಸಮುದಾಯಗಳಿಗೆ ಸೇರಿದ ಕ್ರಮಸಂಖ್ಯೆ 1ರ (ಎ ಇಂದ ಟಿ)ವರೆಗೆ ನಮೂದಾಗಿರುವ ಒಕ್ಕಲಿಗ, ವಕ್ಕಲಿಗ, ಸರ್ಪ ಒಕ್ಕಲಿಗ, ಹಳ್ಳಿಕಾರ್ ಒಕ್ಕಲಿಗ, ನಾಮಧಾರಿ ಒಕ್ಕಲಿಗ, ಗಂಗಾಡ್‌ಕಾರ್ ಒಕ್ಕಲಿಗ, ದಾಸ್ ಒಕ್ಕಲಿಗ, ರೆಡ್ಡಿ ಒಕ್ಕಲಿಗ, ಮರಸು ಒಕ್ಕಲಿಗ, ಗೌಡ, ಹಳ್ಳಿಕಾರ್, ಕೊಂಚಟಿಗ, ಗೌಡ, ಕಾಪು, ಹೆಗ್ಗಡೆ, ಕಮ್ಮ, ರಡ್ಡಿ, ಗೌಂಡರ್, ನಾಮಧಾರಿಗೌಡ, ಉಪ್ಪಿನ ಕೊಳಗ ಉತ್ತಮ ಕೊಳಗ ಸಮುದಾಯಕ್ಕೆ ಸೇರಿದ ಜನರ ಅಭಿವೃದ್ಧಿಗಾಗಿ 2023–24ನೇ ಸಾಲಿನಲ್ಲಿ ಅನುಷ್ಠಾನಗೊಂಡಿರುವ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಶೈಕ್ಷಣಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಸ್ವತಂತ್ರ ಮಹೋತ್ಸವದ ಅಮೃತ ಮುನ್ನಡೆ ಯೋಜನೆಯ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.30 ಕೊನೆಯ ದಿನ. ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಶೈಕ್ಷಣಿಕ ಸಾಲ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಯಾವುದೇ ಕೊನೆಯ ದಿನಾಂಕ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲತಾಣ https://kvcdc.Karnataka.govt.in ಅಥವಾ ದೂ.ಸಂಖ್ಯೆ: 0821–2341194 ಸಂಪರ್ಕಿಸಬಹುದೆಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ನಾಳೆಯಿಂದ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ

ಮೈಸೂರು,ಅ.3–ರಾಷ್ಟ್ರೀಯ ಮಹಿಳಾ ಆಯೋಗ, ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ರಾಜ್ಯ ನಗರಾಭಿವೃದ್ಧಿ ಸಂಸ್ಥೆ ವತಿಯಿಂದ 'ಬದಲಾವಣೆ ಅವಳಿಂದ' ಧ್ಯೇಯ ವಾಕ್ಯದೊಂದಿಗೆ ನಗರ ಸ್ಥಳೀಯ ಸಂಸ್ಥೆಗಳ ಮಹಿಳಾ ಚುನಾಯಿತ ಪ್ರತಿನಿಧಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಅ.5ರಿಂದ 7ರವರೆಗೆ ಆಡಳಿತ ತರಬೇತಿ ಸಂಸ್ಥೆಯ ನೇತ್ರಾವತಿ ವಸತಿ ನಿಲಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ನಗರ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಸದಾಶಿವ

ಮೈಸೂರು, ಅ.3– ಮೈಸೂರಿನ ಸೌತ್ ಆಫ್ ಕುಂಬಾರಕೊಪ್ಪಲು ಗೋಕುಲಂ 3ನೇ ಕ್ರಾಸ್ ನಿವಾಸಿಯಾದ ಸದಾಶಿವ(72) ಮಂಗಳವಾರ ನಿಧನರಾದರು. ಮೃತರು ಪುತ್ರರಾದ ಸುಧೀರ್, ಲೋಕೇಶ್, ಪುತ್ರಿ ಸುಮತಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಸಂಜೆ 5 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಂಟ್ರಾಕ್ಟರ್ ಕರಿಯಪ್ಪ



ಮೈಸೂರು ತಾಲೂಕಿನ ಹಿನಕಲ್ ಗ್ರಾಮದ ನಿವಾಸಿ ಕಂಟ್ರಾಕ್ಟರ್ ಕರಿಯಪ್ಪ(58) ಮಂಗಳವಾರ ಸಂಜೆ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನರಾದರು. ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರ ಸೋದರ ಸಂಬಂಧಿಯಾದ ದಿವಂಗತರು ಪತ್ನಿ ಜಯಮ್ಮ, ಪುತ್ರರಾದ ಸತೀಶ್, ಸಂತೋಷ್ ಮತ್ತು ಮನು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ (ಅ.4) ಬೆಳಗ್ಗೆ 11 ಗಂಟೆಗೆ ಹಿನಕಲ್ ಗ್ರಾಮದ ಚಿಕ್ಕಮ್ಮಾ ಶಾಲೆ ಬಳಿಯಿರುವ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ತಬ್ಧಚಿತ್ರಗಳು ಸಾಮಾಜಿಕ ಸೌಹಾರ್ದತೆ ಸಂದೇಶ ಸಾರಬೇಕು





ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಂಗಳವಾರ ಅಧಿಕಾರಿಗಳು, ವಿವಿಧ ಜಿಲ್ಲೆಗಳ ನೋಡಲ್ ಅಧಿಕಾರಿಗಳು ಹಾಗೂ ಕಲಾವಿದರೊಂದಿಗೆ ಸಭೆ ನಡೆಸಿ, ದಸರಾ ಸಿದ್ಧತೆಗಳ ಬಗ್ಗೆ ಚರ್ಚಿಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಒ ಕೆ.ಎಂ.ಗಾಯಿತ್ರಿ, ಉಪ ಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.3(ಎಂಟಿವೈ)– ಜಂಬೂಸವಾರಿಯಲ್ಲಿ ಸಾಗುವ ಸ್ತಬ್ಧಚಿತ್ರಗಳು ಜನಾಕರ್ಷಣೆಯೊಂದಿಗೆ ಸಮಾಜಕ್ಕೆ ಸೌಹಾರ್ದತೆ ಸಂದೇಶ ಸಾರುವಂತಿರಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಲಹೆ ನೀಡಿದ್ದಾರೆ.

ದಸರಾ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಜಿ.ಪಂ. ಸಭಾಂಗಣದಲ್ಲಿ ಅಧಿಕಾರಿಗಳು, ವಿವಿಧ ಜಿಲ್ಲೆಗಳ ನೋಡಲ್ ಅಧಿಕಾರಿಗಳು, ಹಾಗೂ ಕಲಾವಿದರೊಂದಿಗೆ ಸಭೆ ನಡೆಸಿ, ದಸರಾ ಸಿದ್ಧತೆಗಳ ಬಗ್ಗೆ ಚರ್ಚಿಸಿದ ಅವರು, ಪ್ರಸಕ್ತ ಸಾಲಿನ ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗುವ ಸ್ತಬ್ಧಚಿತ್ರಗಳು ಜನರ ಗಮನ ಸೆಳೆಯುವುದರೊಂದಿಗೆ ಉತ್ತಮ ಸಂದೇಶ ನೀಡುವಂತಿರಬೇಕು. ಸ್ತಬ್ಧಚಿತ್ರಗಳು ಸಮಾಜದಲ್ಲಿ ಸಾಮರಸ್ಯ, ಸೌಹಾರ್ದತೆ ಸಂದೇಶ ಸಾರುವುದರೊಂದಿಗೆ ಸಾಂವಿಧಾನಿಕ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿ ಮೂಡಿಸುವಂತಿರಬೇಕು. ಸಾಮಾಜಿಕ ಸಂದೇಶ ಹಾಗೂ ಸಮಾಜದ ಪರಿವರ್ತನೆಗೆ ಸಹಕಾರಿಯಾಗುವ ಪರಿಕಲ್ಪನೆಯಲ್ಲಿ ಸ್ತಬ್ಧಚಿತ್ರಗಳನ್ನು ರೂಪಿಸುವಂತೆ ಸೂಚಿಸಿದರು.

ಸೃಜನಶೀಲ ಕ್ರಿಯೆಯಾಗಿರುವ ಕಲೆ ಜನರ ಮನಸ್ಸಿಗೆ ಮುದ ನೀಡುತ್ತದೆ. ಕಲೆಯು ಜನರಲ್ಲಿ ಚೈತನ್ಯ ತುಂಬುವ ಶಕ್ತಿ ಹೊಂದಿದೆ. ಜಂಬೂ ಸವಾರಿಯಲ್ಲಿ ಕಲಾವಿದರು ಸ್ತಬ್ಧಚಿತ್ರಗಳ ಮೂಲಕ ಐತಿಹಾಸಿಕ ಚರಿತ್ರೆ, ಸ್ವಾತಂತ್ರ್ಯ ಹೋರಾಟ, ಸಾಂಸ್ಕೃತಿಕ ಬದುಕು, ಸಂಗೀತ, ಸಾಹಿತ್ಯ ಸೇರಿದಂತೆ ಸಾಮಾಜಿಕ ಸಂದೇಶ ನೀಡುವಂತೆ ಮಾಡಬೇಕು. ನಾರಾಯಣ ಗುರು ಸಮಾನತೆಗಾಗಿ ಶ್ರಮಿಸಿದರು. ದೇಶದಲ್ಲೇ ಮೊದಲು ಮಹಿಳೆಯರಿಗೆ ಶಿಕ್ಷಣವನ್ನು ಸಾವಿತ್ರಿ ಬಾಯಿ ಫುಲೆ ನೀಡಿದರು. ಸಮೃದ್ಧ ಭಾರತ ನಿರ್ಮಾಣಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣ, ನೀರಾವರಿ, ಕೃಷಿ ಕ್ಷೇತ್ರಕ್ಕೆ ಕೊಡುಗೆ ನೀಡಿ, ಸಾಮಾಜಿಕ ನ್ಯಾಯದ ಪರ ಆಡಳಿತ ನಡೆಸಿದರು. ದೇಶದ ಹಲವಾರು ಮಹಾನ್ ಸಮಾಜ ಸುಧಾರಕರ ಬದುಕು, ಹೋರಾಟವನ್ನು ತಿಳಿಸಿಕೊಡುವ ಕೆಲಸ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿರುವ ಒಂದೊಂದು ಜಿಲ್ಲೆಗೂ ತನ್ನದೇ ಆದ ಐತಿಹಾಸಿಕ ಕುರುಹು ಹಾಗೂ ಘಟನೆಗಳಿರುತ್ತವೆ. ವಿಭಿನ್ನ ಆಚಾರ, ವಿಚಾರಗಳು, ಕಲೆ, ಸಂಸ್ಕೃತಿಗಳನ್ನು ಒಳಗೊಂಡಿರುತ್ತವೆ. ಜಿಲ್ಲೆಗಳ ಐತಿಹಾಸಿಕ ಮಾಹಿತಿಯೊಂದಿಗೆ ಜೀವಂತವಾಗಿ ನಡೆದಿರುವಂತೆ ಘಟನೆಗಳನ್ನು ಬಿಂಬಿಸುವ ಶಿಸ್ತುಬದ್ಧ, ನೋಡುಗರ ಕಣ್ಮನ ಸೆಳೆಯುವ ಕಲಾಕೃತಿ ಒಳಗೊಂಡಿರಬೇಕು. ಕಲಾವಿದರು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ಸೃಜನಶೀಲತೆಯಿಂದ ಉತ್ತಮವಾದ ಸ್ತಬ್ಧಚಿತ್ರಗಳನ್ನು ಸಿದ್ಧಪಡಿಸಲು ಗಮನಹರಿಸಬೇಕು. ಸ್ತಬ್ಧಚಿತ್ರ ರಚನೆಗೆ ಬೇಕಾದ ಸೌಲಭ್ಯ ಒದಗಿಸಲಾಗುತ್ತದೆ. ಅತ್ಯುತ್ತಮ ಸ್ತಬ್ಧಚಿತ್ರಕ್ಕೆ ವಿಭಾಗೀಯ ಮಟ್ಟದಲ್ಲಿ ಪ್ರಶಸ್ತಿ ಪತ್ರ ನೀಡಲಾಗುತ್ತದೆ. ಅಲ್ಲದೆ, ಕಲಾವಿದರಿಗೂ ಪ್ರತ್ಯೇಕ ಪ್ರಶಸ್ತಿ ನೀಡಲು ಆಲೋಚಿಸಲಾಗಿದೆ ಎಂದು ಹೇಳಿದರು.

ಮೆರವಣಿಗೆಯಲ್ಲಿ ಸ್ತಬ್ಧಚಿತ್ರದೊಂದಿಗೆ ಆಯಾ ಜಿಲ್ಲೆಯ ಕಲಾತಂಡಗಳನ್ನು ನಿಯೋಜಿಸುವುದು ಸೂಕ್ತ. ಮೆರವಣಿಗೆಯಲ್ಲಿ ಸ್ತಬ್ಧಚಿತ್ರ ಹಾಗೂ ಕಲಾತಂಡಗಳ ಅಕ್ಕಪಕ್ಕದಲ್ಲಿ ಸಂಬಂಧಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ಹೊರತುಪಡಿಸಿ ಬೇರೆ ಯಾರಿಗೂ ಅವಕಾಶ ನೀಡಬಾರದು. ಅಲ್ಲದೆ, ಒಂದೊಂದು ಜಿಲ್ಲೆಯ ಸ್ತಬ್ಧಚಿತ್ರ ಒಂದೊಂದು ಅಳತೆಯಲ್ಲಿರಬಾರದು. ಎಲ್ಲಾ ಜಿಲ್ಲೆಗಳ ಸ್ತಬ್ಧಚಿತ್ರಗಳ ಅಳತೆಯಲ್ಲಿ ಒಂದೇ ಮಾದರಿ ಇರಬೇಕು. ಸ್ತಬ್ಧಚಿತ್ರಗಳಿಗೆ ಅಗಲ, ಎತ್ತರ, ಉದ್ದ ಮಿತಿಯನ್ನು ಜಿಲ್ಲಾಡಳಿತ ನಿಗದಿಪಡಿಸಲಿದ್ದು, ಅದನ್ನು ಮೀರದಂತೆ ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದರು. ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿ.ಪಂ. ಸಿಇಒ ಕೆ.ಎಂ.ಗಾಯಿತ್ರಿ, ಉಪ ಕಾರ್ಯದರ್ಶಿ ಡಾ.ಎಂ. ಕೃಷ್ಣರಾಜು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಅ.6ರಿಂದ 12ರವರೆಗೆ ಗೀತಾ ಜ್ಞಾನಯಜ್ಞ



ಮೈಸೂರು,ಅ.3–ಮೈಸೂರು ಚಿನ್ಮಯ ಮಿಷನ್ ವತಿಯಿಂದ ಅ.6ರಿಂದ 12ರವರೆಗೆ ಸ್ವಾಮಿ ದತ್ತಪಾದಾನಂದರಿಂದ ಭಗವದ್ಗೀತೆಯ 5ನೇ ಅಧ್ಯಾಯವಾದ ಕರ್ಮ ಸಂನ್ಯಾಸಯೋಗದ ಬಗ್ಗೆ ಸಂಜೆ 6.30ರಿಂದ 8ರವರೆಗೆ ಗೀತಾ ಜ್ಞಾನಯಜ್ಞವನ್ನು ವಿದ್ಯಾರಣ್ಯಪುರಂನ ಸಾರ್ವಜನಿಕ ಹಾಸ್ಟೆಲ್ ರಸ್ತೆಯ 5ನೇ ಮುಖ್ಯರಸ್ತೆಯಲ್ಲಿರುವ ಚಿನ್ಮಯ ಮಿಷನ್ನಿನ ಶ್ರೀ ರಾಮಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ದತ್ತಪಾದಾನಂದಜೀಯವರು ಪ್ರಸ್ತುತ ಚೊಕ್ಕಹಳ್ಳಿ ಚಿನ್ಮಯ ಮಿಷನ್ನಿನಲ್ಲಿ ಕಾರ್ಯನಿರತರಾಗಿದ್ದು, ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ವಿವಿಧ ವಿಷಯಗಳಲ್ಲಿ ಜ್ಞಾನ ಯಜ್ಞಗಳನ್ನು ನಡೆಸಿಕೊಟ್ಟಿರುತ್ತಾರೆ. ಇವರು ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಯ ಹಲವಾರು ಕೃತಿಗಳನ್ನು ಅಭ್ಯಸಿಸಿ ಅವುಗಳ ರಸವತ್ತಾದ ಅಂಶಗಳನ್ನು ಸರಳ ಸುಂದರವಾಗಿ ತಮ್ಮ ಪ್ರವಚನದಲ್ಲಿ ಉಲ್ಲೇಖಿಸುತ್ತಾರೆ. ಇದು ಶ್ರೋತೃಗಳನ್ನು ಆಕರ್ಷಿಸುವಲ್ಲಿ ಸಫಲವಾಗಿವೆ. ಅ.7ರಿಂದ ಪ್ರತಿದಿನ ಸಂಜೆ 6ರಿಂದ 6.30ರವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ಇರುತ್ತದೆ. ಮೈಸೂರಿನ ಅಧ್ಯಾತ್ಮಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ಹೆಬ್ಬಾಳು 1ನೇ ಹಂತದಲ್ಲಿರುವ ಕನ್ನಿಕಾ ಕಾವೇರಿ ಶಿಕ್ಷಣ ಸಂಸ್ಥೆಯಲ್ಲಿ ಸೋಮವಾರ ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.



ಅಖಿಲ ಭಾರತೀಯ ಗ್ರಾಹಕ ಪಂಚಾಯತ್ 50ನೇ ಸುವರ್ಣ ಮಹೋತ್ಸವದ ಪೂರ್ವಭಾವಿ ಸಭೆ

ಮೈಸೂರು: ಅಖಿಲ ಭಾರತೀಯ ಗ್ರಾಹಕ ಪಂಚಾಯತ್ 50ನೇ ವರ್ಷದ ಸುವರ್ಣ ಮಹೋತ್ಸವ ಅ.8ರಂದು ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕೇಶವ ಶಿಲ್ಪ ಸಭಾಂಗಣದಲ್ಲಿ ನಡೆಯಲಿದೆ. ಅದರ ಸಲುವಾಗಿ ಜೆಎಲ್‌ಬಿ ರಸ್ತೆಯಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಮೈಸೂರು ಪ್ರಾಂತ್ಯದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಭೆ ನಡೆಸಿ ಮೈಸೂರಿಂದ ಅತೀ ಹೆಚ್ಚು ಸದಸ್ಯರು ಭಾಗಿಯಾಗಲು ಮೈಸೂರು ಪ್ರಾಂತ್ಯದ ಅಧ್ಯಕ್ಷ ಚಂದ್ರಶೇಖರ್ ಮನವಿ ಮಾಡಿದರು.



ಇದೇ ಸಂದರ್ಭದಲ್ಲಿ ಗ್ರಾಹಕರ ಸಮಸ್ಯೆಗಳ ಬಗ್ಗೆ ಮೈಸೂರಿನ ಮಹಿಳಾ ಪ್ರಾಂತ್ಯದ ಸಂಚಾಲಕಿ ನಾಗಮಣಿ, ಗ್ರಾಹಕರ ಸಮಸ್ಯೆಗಳ ಬಗ್ಗೆ ಅಣುಕು ಪ್ರದರ್ಶನದ ಮೂಲಕ ಜಾಗೃತಿ ಮೂಡಿಸಲಾಗುವುದು. ಹಾಗೆಯೇ ಮುಂದಿನ ದಿನಗಳಲ್ಲಿ ಮೈಸೂರಿನ ಪ್ರಮುಖ ವೃತ್ತಗಳಲ್ಲಿ ನಾಟಕದ ಮೂಲಕ ಜಾಗೃತಿ ಮೂಡಿಸಲಾಗುವುದು. ಪ್ರತಿಯೊಂದು ಕಾಲೇಜಿನಲ್ಲಿ ಗ್ರಾಹಕ ಕ್ಲಬ್ ತೆರೆಯುವುದು, ಇತರ ವಿಚಾರಗಳನ್ನು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಹಕ ಪಂಚಾಯತ್‌ನ ಕರ್ನಾಟಕ ರಾಜ್ಯ ಪ್ರಾಂತೀಯ ಶಿಕ್ಷಣ ಸಂಚಾಲಕರಾದ ರವಿಶಂಕರ್, ರಾಘವೇಂದ್ರ, ಸಂಘಟನಾ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಉಪಾಧ್ಯಕ್ಷರಾದ ಜಯಕುಮಾರ್, ಡಿ.ಪಿ.ದರ್ಶನ್, ಮಿರ್ಲೆ ಪನಿಶ್, ಸುರೇಶ್, ಕುಮುದ, ಡಿ.ಕೆ.ನಾಗಭೂಷಣ್ ಇನ್ನಿತರರು ಉಪಸ್ಥಿತರಿದ್ದರು.

ಆರ್.ರಮ್ಯಾ ಬಿ.ಕಾಂನಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಅ.3– ಮೈಸೂರಿನ ಜಯಲಕ್ಷ್ಮೀಪುರಂನ ಸಂತ ಜೋಸೆಫ್ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಆರ್.ರಮ್ಯಾ ಭಾರದ್ವಾಜ್, ಅಂತಿಮ ಬಿ.ಕಾಂನಲ್ಲಿ 600 ಅಂಕಗಳಿಗೆ 563 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಕುವೆಂಪುನಗರ ನಿವಾಸಿ, ಪತ್ರಿಕಾ ವಿತರಕ ಎನ್.ರವಿ ಅವರ ಪುತ್ರಿ.

ಗಾಂಧಿ ಜಯಂತಿ ಅಂಗವಾಗಿ ಸೈಕ್ಲಿಂಗ್ ತಂಡದಿಂದ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತೆ



ಮೈಸೂರು, ಅ.3(ಬಿಎಲ್‌ಯು)– ಗಾಂಧಿ ಜಯಂತಿ ಅಂಗವಾಗಿ ಮೈಸೂರು ಸೈಕ್ಲಿಂಗ್ ತಂಡದವರು ನಗರದಲ್ಲಿ ಸ್ವಚ್ಛತಾ ರೈಡ್ ನಡೆಸಿದರು.

ನಗರದ ಗಾಂಧಿ ವೃತ್ತದಿಂದ ಸೈಕಲ್ ಜಾಥಾ ಆರಂಭಿಸಿದ ಸೈಕ್ಲಿಂಗ್ ತಂಡದವರು ಚಾಮುಂಡಿಬೆಟ್ಟದ ಪ್ರವೇಶ ದ್ವಾರದಿಂದ ಸ್ವಚ್ಛತಾ ಅಭಿಯಾನ ಆರಂಭಿಸಿದರು.


ಚಾಮುಂಡಿಬೆಟ್ಟ ರಸ್ತೆಯಲ್ಲಿ ಪ್ಲಾಸ್ಟಿಕ್ ಸೇರಿದಂತೆ ಇತರೆ ತ್ಯಾಜ್ಯಗಳನ್ನು ಸಂಗ್ರಹಿಸಿದರು. ಚಾಮುಂಡೇಶ್ವರಿ ದೇವಸ್ಥಾನದವರೆಗೂ ತ್ಯಾಜ್ಯ ಸಂಗ್ರಹಿಸಿ ಜನರಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿದರು. ಸ್ವಚ್ಛತಾ ಕಾರ್ಯ ಕೈಗೊಂಡ ತಂಡದ ಕಾರ್ಯವನ್ನು ತಂಡದ ಸಂಚಾಲಕರಾದ ಮನುಗೌಡ ಹಾಗೂ ಶ್ರೀಕಾಂತ್ ಅಭಿನಂದಿಸಿದರು.

ಸ್ವಚ್ಛತೆ ಪ್ರತಿಯೊಬ್ಬರ ಕರ್ತವ್ಯ. ಈ ಹಿನ್ನೆಲೆಯಲ್ಲಿ ಯಾರೂ ಕೂಡ ತ್ಯಾಜ್ಯಗಳನ್ನು ರಸ್ತೆಯಲ್ಲಿ ಎಸೆಯಬಾರದು. ಕಸ ಸಂಗ್ರಹಣಾ ಸ್ಥಳದಲ್ಲಿ ಹಾಕಬೇಕು ಎಂದು ಸಲಹೆ ನೀಡಿದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 99.54 ಅಡಿ	ಇಂದಿನ ಮಟ್ಟ 2,275.70 ಅಡಿ	ಇಂದಿನ ಮಟ್ಟ 2,855.16 ಅಡಿ
ಹಿಂದಿನ ವರ್ಷದ ಮಟ್ಟ 123.56 ಅಡಿ	ಹಿಂದಿನ ವರ್ಷದ ಮಟ್ಟ 2,282.58 ಅಡಿ	ಹಿಂದಿನ ವರ್ಷದ ಮಟ್ಟ 2,855.37 ಅಡಿ
ನಿನ್ನೆಯ ಮಟ್ಟ 98.40 ಅಡಿ	ನಿನ್ನೆಯ ಮಟ್ಟ 2,275 ಅಡಿ	ನಿನ್ನೆಯ ಮಟ್ಟ 2,854.88 ಅಡಿ
ಇಂದಿನ ಒಳಹರಿವು 11,800 ಕ್ಯೂಸೆಕ್	ಇಂದಿನ ಒಳಹರಿವು 5,481 ಕ್ಯೂಸೆಕ್	ಇಂದಿನ ಒಳಹರಿವು 2,529 ಕ್ಯೂಸೆಕ್
ಇಂದಿನ ಹೊರಹರಿವು 1,592 ಕ್ಯೂಸೆಕ್	ಇಂದಿನ ಹೊರಹರಿವು 1,000 ಕ್ಯೂಸೆಕ್	ಇಂದಿನ ಹೊರಹರಿವು 1,400 ಕ್ಯೂಸೆಕ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.10.2023 ಬುಧವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,
ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆಯಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಶ್ರೀ ರಾಘವೇಂದ್ರ ಸ್ವಾಮಿಗಳ ಮಠ :** ಪಂಡಿತ್ ಶ್ರೀ ಬಾದರಾಯಣಾಚಾರ್ಯ ಅವರಿಂದ 'ಭಗವದ್ಗೀತೆ 11ನೇ ಅಧ್ಯಾಯನ'ದ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.
- **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಪರಿಷತ್ತಿನ ಯುವ ಘಟಕ, ಶೇಷಾದ್ರಿಪುರಂ ಪದವಿ ಕಾಲೇಜು, ಆಂತರಿಕ ಗುಣಮಟ್ಟ ಭರವಸೆ ಕೋಶ, ಕನ್ನಡ ವಿಭಾಗ ಮತ್ತು ಬಸವ ಅಧ್ಯಯನ ಕೇಂದ್ರ :** ದತ್ತಿ ಕಾರ್ಯಕ್ರಮ, ಅಂತರ ಕಾಲೇಜು ವಿದ್ಯಾರ್ಥಿಗಳಿಂದ ವಚನ ವಾಚನ ಮತ್ತು ವ್ಯಾಖ್ಯಾನ, ಉದ್ಘಾಟನೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ವಿದ್ಯಾರ್ಥಿಗಳಿಂದ ವಚನ ವಾಚನ ಮತ್ತು ವ್ಯಾಖ್ಯಾನ, ಬಹುಮಾನ ವಿತರಣೆ : ಶೇಷಾದ್ರಿಪುರಂ ಪದವಿ ಕಾಲೇಜು ಪ್ರಾಂಶುಪಾಲರಾದ ಪ್ರೊ. ಕೆ. ಸೌಮ್ಯ ಈರಪ್ಪ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಶೇಷಾದ್ರಿಪುರಂ ಪದವಿ ಕಾಲೇಜು ಸಭಾಂಗಣ, ಹೆಬ್ಬಾಳು, ಬೆಳಗ್ಗೆ 10.30ಕ್ಕೆ.
- **ಬಾಸುದೇವ ಸೋಮಾನಿ ಕಾಲೇಜು:** ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ವಿಷಯ: ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ಜನತೆ, ಉದ್ಘಾಟನೆ: ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಮುಖ್ಯ ಭಾಷಣಕಾರರು: ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಕುಬೇರ್ ಪಿ.ಗೌಡ, ಅಧ್ಯಕ್ಷತೆ: ವಾಸುದೇವ ಸೋಮಾನಿ ಕಾಲೇಜು ಪ್ರಾಂಶುಪಾಲ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಜಿಎಸ್‌ಎಸ್ ಯೋಗದ ಮಾತು, ಪ್ರಸ್ತುತಿ–ಡಿ.ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಹೆಚ್.ವಿ.ನಾಗರಾಜರಾವ್, 7.15 ಭಾವಗೀತೆಗಳು–ರತ್ನಮಾಲಾ ಪ್ರಕಾಶ್, 9.00 ಮನೋನಂದನ–ದೈನಂದಿನ ಸವಾಲುಗಳನ್ನು ಎದುರಿಸಲು ಮಕ್ಕಳನ್ನು ಮಾನಸಿಕವಾಗಿ ಸದೃಢಗೊಳಿಸುವ ಅಗತ್ಯ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಸಂಗೀತ–ಪಂಡಿತ್ ಹರಿಪ್ರಸಾದ್ ಚೌರಾಸಿಯಾ–ಬಾನ್ಸುರಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಪುತ್ತೂರು ನರಸಿಂಹನಾಯಕ್, ಅರ್ಚನಾ ಉಡುಪ, 1.20 ಭಾವಗೀತೆಗಳು–ಸ್ಟ್ಯಾನ್ಲೀ ಪಾರ್ಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಮಹಿಳಾರಂಗ–ಸ್ತ್ರೀ ಚೇತನ, ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಡಾ.ಮಾಧವಿ ಭಂಡಾರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಸಾವಯವ ಕೃಷಿಕರ ಯಶೋಗಾಥೆಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಡಾ.ಕೆ.ರಾಜು ಹಾಗೂ ಪಿ.ರಮೇಶ್, 9.30 ಚೀನಾದಲ್ಲಿ ನಡೆಯುತ್ತಿರುವ 19ನೇ ಏಷ್ಯನ್ ಕ್ರೀಡಾಕೂಟದ ದಿನದಾಟದ ವರದಿ, 10.30 ಸವಿನೆನಪು

ಜಾತಿ ರಾಜಕಾರಣ ಮಾಡಲ್ಲ; ಸಾಮಾಜಿಕ ನ್ಯಾಯ ನನ್ನ ಉಸಿರು

ಬೆಳಗಾವಿಯಲ್ಲಿ ನಡೆದ ಕುರುಬ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ





ಬೆಳಗಾವಿ, ಅ.3–ಸಮಾಜದ ಎಲ್ಲಾ ಜಾತಿ–ವರ್ಗದ ಜನಗಳು ಸಂಘಟಿತರಾಗಿ ಸಂವಿಧಾನಬದ್ಧ ಹಕ್ಕುಗಳನ್ನು ಪಡೆದುಕೊಳ್ಳಬೇಕು. ನಾನು ಯಾವತ್ತೂ ಜಾತೀಯತೆ ಮಾಡುವವನಲ್ಲ. ಸಾಮಾಜಿಕ ನ್ಯಾಯ ನನ್ನ ಉಸಿರು. ಅವಕಾಶ ವಂಚಿತ ಜಾತಿಗಳ ಜನ ತಮ್ಮ ಸಂವಿಧಾನಬದ್ಧ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘಟಿತ ಸಮಾವೇಶ ನಡೆಸುವುದು ತಪ್ಪಲ್ಲ ಎಂದು ಸಮಾಜವಾದಿ ನಾಯಕ ರಾಮ ಮನೋಹರ ಲೋಹಿಯಾ ಹೇಳಿದ್ದರು. ಅದರಂತೆ ಈ ಸಮಾವೇಶ ನಡೆಯುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಬೆಳಗಾವಿಯಲ್ಲಿ ಮಂಗಳವಾರ ನಡೆದ ಕುರುಬ ಸಮಾವೇಶದಲ್ಲಿ ಮಾತನಾಡಿದ ಅವರು, ನಾನು ಈ ಜಾತಿ ವ್ಯವಸ್ಥೆಗೆ ಯಾವತ್ತಿದ್ದರೂ ವಿರುದ್ಧ. ಆದರೆ, ಅಶಕ್ತ ಜನ ಸಮುದಾಯಗಳು ತಮ್ಮ ಸಂವಿಧಾನಬದ್ಧ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘಟಿತರಾಗುವುದು ತಪ್ಪಲ್ಲ ಎಂದು ನಂಬಿದ್ದೇನೆ. ಅಶಕ್ತ ಸಮುದಾಯಗಳು ಸಂಘಟಿತರಾಗದೇ ಇರುವುದರಿಂದ ಮತ್ತು ತಮ್ಮಲ್ಲಿ ನಾಯಕತ್ವ ಬೆಳೆಸಿಕೊಳ್ಳದೇ ಇರುವುದರಿಂದ ಅವರ ಪಾಲಿನ ಹಕ್ಕುಗಳು ಮತ್ತು ರಾಜಕೀಯ ಅಧಿಕಾರದಿಂದ ವಂಚಿತವಾಗಿವೆ ಎಂದು ವಿವರಿಸಿದರು.

ನಮ್ಮ ಸಮುದಾಯಕ್ಕೆ ರಾಜಕೀಯ ಇತಿಹಾಸ ಇದೆ. ಸಾಂಸ್ಕೃತಿಕ ಭವ್ಯತೆ ಇದೆ. ಹಕ್ಕಬುಕ್ಕರಿಂದ ಹಿಡಿದು ಅಹಲ್ಯಾಬಾಯಿ ಹೋಳ್ಕರ್‌ವರೆಗೂ ನಮಗೊಂದು ಚರಿತ್ರೆ ಇದೆ. ಆದರೆ, ಸಂಘಟನೆ ಇಲ್ಲದಿದ್ದರಿಂದ ನಮಗೆ ಸಲ್ಲಬೇಕಾಗಿದ್ದು ಸಲ್ಲುತ್ತಿರಲಿಲ್ಲ. ಸಂಘಟನೆ ಇಲ್ಲದಿದ್ದರೆ ಕಾಗಿನೆಲೆ ಗುರುಪೀಠ, ಸಂಸ್ಥಾನ ಆಗುತ್ತಿರಲಿಲ್ಲ. ಕಾಗಿನೆಲೆ ಪೀಠ ಒಂದು ಜಾತಿಯ ಮಠ ಅಲ್ಲ. ಎಲ್ಲಾ ಶೋಷಿತ ಸಮುದಾಯಗಳಿಗೆ ಸೇರಿದ್ದು ಕಾಗಿನೆಲೆ ಪೀಠ ಎಂದು ಸಿದ್ದರಾಮಯ್ಯ ಹೇಳಿದರು.

ಪ್ರತಿ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಬೆಳೆದರೆ ಮಾತ್ರ ಸಮಸಮಾಜದ ನಿರ್ಮಾಣ ಸಾಧ್ಯ. ಎಲ್ಲರಿಗೂ ಅವರವರ ಪಾಲಿನ ಅಧಿಕಾರ, ಅವಕಾಶ ಸಿಗಬೇಕು. ಈ ಸಾಮಾನ್ಯ ಜ್ಞಾನ ನಮ್ಮನ್ನು ಟೀಕಿಸುವವರಿಗೆ ಇಲ್ಲವಾಗಿದೆ ಎಂದರು.

ನಮ್ಮದು ಹೇಳಿ ಕೇಳಿ ಜಾತಿ ಮತ್ತು ತಾರತಮ್ಯದಿಂದ ಕೂಡಿರುವ ಸಮಾಜ. ಹೀಗಾಗಿ ಅವಕಾಶಗಳ ಹಂಚಿಕೆಯಲ್ಲೂ ತಾರತಮ್ಯ ಇರುತ್ತದೆ. ಇವನ್ನೆಲ್ಲಾ ಸರಿದೂಗಿಸಬೇಕಾದರೆ ಸಂಘಟನೆ, ಸಮಾವೇಶಗಳು ಅಗತ್ಯ ಎಂದ ಅವರು, ನಾನು ರೂಪಿಸಿದ ಐದು ಗ್ಯಾರಂಟಿ ಯೋಜನೆಗಳು ಒಂದು ಸಮಾಜಕ್ಕೆ ಒಂದು ಧರ್ಮಕ್ಕೆ ಒಂದು ಜಾತಿಗೆ ಸೀಮಿತವಾದವುಗಳಲ್ಲ. ಸರ್ವ ಜಾತಿ ಜನಗಳ ಬದುಕಿಗೆ ಅನುಕೂಲ ಕಲ್ಪಿಸುತ್ತಿವೆ ಎಂದು ಮುಖ್ಯಮಂತ್ರಿಗಳು ಉದಾಹರಿಸಿದರು.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಸಿದ್ದರಾಮಾನಂದಪುರಿ ಸ್ವಾಮೀಜಿ ಹಾಗೂ ಅರ್ಜುನಾಭಾಯಿಪುರಿ ಸ್ವಾಮೀಜಿಯವರುಗಳ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಿತು.

ಹರಿಯಾಣದ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಉದ್ಘಾಟಿಸಿದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ ಮಾಜಿ ಮಂತ್ರಿ ಎಚ್.ವಿಶ್ವನಾಥ್ ಅವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿಯ ರಾಜ್ಯ ಸಚಿವ ಫಗ್ಗಾನ್ ಸಿಂಗ್ ಕುಲಾಸ್ತೆ, ರಾಜ್ಯ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಮಹಿಳಾ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಗೋವಾ ರಾಜ್ಯದ ಮಾಜಿ ಉಪ ಮುಖ್ಯಮಂತ್ರಿ ಚಂದ್ರಕಾಂತ್ ಬಾಬು ಕಾವಲೇಕರ್, ಮಹಾರಾಷ್ಟ್ರ ರಾಜ್ಯದ ಮಾಜಿ ಸಚಿವ ಮಹದೇವ್ ಜನಕಾರ್, ದತ್ತಾತ್ರೇಯ ಭರ್ನೆ, ರಾಮಶಂಕರ್ ಶಿಂದೆ, ಶೆಫರ್ಡ್ ಇಂಟರ್‌ನ್ಯಾಷನಲ್ ಉಪಾಧ್ಯಕ್ಷ ಎಚ್.ಎಂ.ರೇವಣ್ಣ, ಮಾಜಿ ಸಚಿವ ಬಂಡೆಪ್ಪ ಕಾಶಂಪುರ್, ಆಂಧ್ರಪ್ರದೇಶ ರಾಜ್ಯದ ಸಚಿವೆ ಕೆ.ವಿ.ಉಷಾಶ್ರೀ ಚರಣ್, ಮಾತಾ ಅಹಿಲ್ಯಾಬಾಯಿ ಹೋಳ್ಕರ್ ಅವರ ಮೊಮ್ಮಗ ಭೂಷಣ್ ರಾಜೆ ಹೋಳ್ಕರ್, ಗುಜರಾತ್ ರಾಜ್ಯದ ಮುಖಂಡರಾದ ಸಾಗರ್ ರಾಯ್ಕ ಸೇರಿ 60ಕ್ಕೂ ಹೆಚ್ಚು ಮಂದಿ ನಾನಾ ರಾಜ್ಯಗಳ ಕುರುಬ ಮತ್ತು ಗೋಪಾಲಕ ಸಮುದಾಯಗಳ ಮುಖಂಡರು, ಇನ್ನಿತರರು ಭಾಗವಹಿಸಿದ್ದರು.

ಸಮಾವೇಶದಲ್ಲಿ ಸರ್ಕಾರಕ್ಕೆ ಏಳು ಬೇಡಿಕೆಗಳು

- ಜಾತಿವಾರು ಜನಗಣತಿ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು.
- ರಾಷ್ಟ್ರ ಮಟ್ಟದಲ್ಲಿ ಕುರುಬರ ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಬೇಕು.
- ರಾಷ್ಟ್ರದಲ್ಲಿ ಇರುವ ಎಲ್ಲಾ ಕುರುಬರನ್ನು ಎಸ್‌ಟಿ ಸಮಾಜಕ್ಕೆ ಸೇರಿಸಬೇಕು.
- ಕೇಂದ್ರ ಮಹಿಳಾ ಮೀಸಲಾತಿಗೆ ಸ್ವಾಗತ. ಹಿಂದುಳಿದ ಮಹಿಳೆಯರಿಗೆ ಒಳ ಮೀಸಲಾತಿ ನೀಡಬೇಕು.
- ಸಂಗೊಳ್ಳಿ ರಾಯಣ್ಣ ಗಲ್ಲಿಗೇರಿಸಿದ ನಂದಗಡ ಗ್ರಾಮವನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಣೆ ಮಾಡಬೇಕು.
- ಕುರಿ ಮೇಯಿಸಲು ಕಂದಾಯ ಭೂಮಿಯನ್ನು ಕಾಯ್ದಿರಿಸಬೇಕು. ಸಂಚಾರಿ ಆಸ್ಪತ್ರೆ, ಸಂಚಾರಿ ಶಾಲೆಗಳನ್ನು ಆರಂಭಿಸಬೇಕು. ಹಾನಿಗೆ ಒಳಗಾದ ಕುರಿಗಳಿಗೆ ಪರಿಹಾರ ನೀಡಬೇಕು.
- ಕುರಿ, ಮೇಕೆ ಮಹಾ ಮಂಡಳಕ್ಕೆ 100 ಕೋಟಿ ರೂ.ಕೊಡಬೇಕು.

ಬೃಹತ್ ಕುರುಬ ಸಮಾವೇಶದ ಮೂಲಕ ಸಿದ್ದರಾಮಯ್ಯ ಮತ್ತೊಮ್ಮೆ ಶಕ್ತಿ ಪ್ರದರ್ಶನ

ಬೆಳಗಾವಿ, ಅ.3– ಕಾಂಗ್ರೆಸ್‌ನಲ್ಲಿ ಲಿಂಗಾಯತ ಮುಖ್ಯಮಂತ್ರಿ ಮತ್ತು ಮೂವರು ಉಪಮುಖ್ಯಮಂತ್ರಿಗಳನ್ನು ಮಾಡಬೇಕು ಎಂಬ ಕೂಗು ಎದ್ದಿರುವ ಹೊತ್ತಿನಲ್ಲಿ ಸಿದ್ದರಾಮೋತ್ಸವ ಮಾದರಿಯಲ್ಲಿ ಬೃಹತ್ ಕುರುಬ ಸಮಾವೇಶ ನಡೆಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೊಮ್ಮೆ ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದಾರೆ.

ಪಕ್ಷದಲ್ಲಿ ಒಳಬೇಗುದಿಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಪ್ರಮುಖ ಕುರುಬ ನಾಯಕರಾಗಿರುವ ಸಿದ್ದರಾಮಯ್ಯ ಅವರ ರಾಜಕೀಯ ವಿರೋಧಿಗಳಿಗೆ ನೇರ ಸಂದೇಶ ರವಾನಿಸುವ ರೀತಿಯಲ್ಲಿ ಇಲ್ಲಿನ ನೆಹರೂ ನಗರದ ಜಿಲ್ಲಾ ಕ್ರೀಡಾ ಮೈದಾನದಲ್ಲಿ ಮಂಗಳವಾರ ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್‌ನ 9ನೇ ರಾಷ್ಟ್ರೀಯ ಸಮಾವೇಶ ಆಯೋಜಿಸಲಾಗಿತ್ತು. ಇದರಲ್ಲಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಕುರುಬ ನಾಯಕರು, ಸ್ವಾಮೀಜಿಗಳು ಸೇರಿ ಸಾವಿರಾರು ಮಂದಿ ಭಾಗಿಯಾಗಿದ್ದರು. ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗಣ್ಯರು ಸನ್ಮಾನ ಮಾಡಿದರು. ಕುರುಬ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ಹೆಚ್ಚಳದ ಬೇಡಿಕೆ ಸಮಾವೇಶದ ಪ್ರಮುಖ ಉದ್ದೇಶವಾಗಿತ್ತು. ಇನ್ನು ಸಮಾವೇಶದಲ್ಲಿ ಮಾಜಿ ಸಚಿವ ಎಚ್.ಎಂ. ರೇವಣ್ಣ ಅವರು ಸಮುದಾಯದ ಬೇಡಿಕೆಗಳನ್ನು ಈಡೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ದಸರಾ ಹಿನ್ನೆಲೆ; ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲು ಶಾಸಕ ಶ್ರೀವತ್ಸ ಸ್ಥಳ ಪರಿಶೀಲನೆ

ಸಂಚಾರ ಎಸಿಪಿ ಪರಶುರಾಮಪ್ಪ ಸೇರಿ ಅಧಿಕಾರಿಗಳು ಭಾಗಿ



ಮೈಸೂರು,ಅ.3(ಪಿಎಂ)– ವಿಶ್ವವಿಖ್ಯಾತ ಮೈಸೂರು ದಸರಾ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪ್ರವಾಸಿಗರು ಮತ್ತು ಮೈಸೂರಿನ ಜನರ ಸುಗಮ ಸಂಚಾರಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಮಂಗಳವಾರ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ನಗರದ ಆಯಕಟ್ಟಿನ ಸ್ಥಳಗಳಲ್ಲಿ ಪರಿಶೀಲನೆ ನಡೆಸಿದರು.

ದಸರಾ ಮಹೋತ್ಸವದ ಸಂದರ್ಭದಲ್ಲಿ ಪ್ರವಾಸಿಗರು ಆಗಮಿಸುವ ಹಿನ್ನೆಲೆಯಲ್ಲಿ ಜನ ಮತ್ತು ವಾಹನ ದಟ್ಟಣೆ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವ ಸಂಬಂಧ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಇನ್ಸ್‌ಪೆಕ್ಟರ್ ಯೋಗೀಶ್ ಅವರೊಂದಿಗೆ ಹೆಚ್ಚು ಅಪಘಾತವಾಗುವ ಆಯಕಟ್ಟಿನ ಸ್ಥಳಗಳನ್ನು ಪರಿಶೀಲಿಸಿದರು. ಇದೇ ವೇಳೆ ಮಾತನಾಡಿದ ಟಿ.ಎಸ್.ಶ್ರೀವತ್ಸ, ಮೈಸೂರು ದಸರಾ ಸಂದರ್ಭದಲ್ಲಿ ಪ್ರವಾಸಿಗರು ಮತ್ತು ಮೈಸೂರಿನ ಜನರಿಗೆ ತೊಂದರೆ ಆಗದ ರೀತಿ ಸೂಕ್ತ ಕ್ರಮ ವಹಿಸಬೇಕಿದೆ. ಈ ನಿಟ್ಟಿನಲ್ಲಿ ಇಂದು ಕೆಲ ಆಯಕಟ್ಟಿನ ಸ್ಥಳಗಳನ್ನು ಎಸಿಪಿ ಅವರಿಗೆ ತೋರಿಸಿದ್ದೇನೆ ಎಂದು ಹೇಳಿದರು.

ಎಲ್ಲೆಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ, ಎಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತವೆ, ಯಾವ ಕಡೆ ಹಂಪ್ಸ್‌ಗಳನ್ನು ಹಾಕಬೇಕೆಂಬ ಬಗ್ಗೆ ಸ್ಥಳ ಪರಿಶೀಲನೆ ಮಾಡಲಾಗಿದೆ. ಇಂದು ಮಾನಂದವಾಡಿ ಜಂಕ್ಷನ್, ಸೆಂಚುರಿ ಪಾರ್ಕ್, ನಜರ್‌ಬಾದ್ ಠಾಣೆ ಬಳಿ, ಹಳೆ ರಿಜೆನ್ಸಿ ಥಿಯೇಟರ್ ಬಳಿ, ಜಿಂಜರ್ ಹೋಟೆಲ್ ತಿರುವು ಸ್ಥಳಗಳಲ್ಲಿ ಪರಿಶೀಲನೆ ಮಾಡಲಾಗಿದೆ ಎಂದು ತಿಳಿಸಿದರು.

ಜನ ಇನ್ನು ಹಲವು ಸಮಸ್ಯೆಗಳನ್ನು ತಿಳಿಸಿದ್ದಾರೆ. ಮೈಸೂರು ದಕ್ಷಿಣ ಭಾಗದಲ್ಲಿ ಸಮಸ್ಯೆ ಇದೆ. ಜಾಕಿ ಫ್ಯಾಕ್ಟರಿ, ನಾಡನಹಳ್ಳಿಪಾಳ್ಯ, ಹೆಚ್‌ಡಿ ಕೋಟೆ ರಸ್ತೆಯಲ್ಲಿ ಹಂಪ್ಸ್‌ಗಳನ್ನು ಹಾಕಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

ನಗರ ಪಾಲಿಕೆ ಸದಸ್ಯೆ ಛಾಯಾದೇವಿ, ನಗರ ಬಿಜೆಪಿ ಹಿಂದುಳಿದ ವರ್ಗ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಬಿಜೆಪಿ ಮುಖಂಡರಾದ ಗೋಕುಲ್ ಗೋವರ್ಧನ್, ಪ್ರದೀಪ್ ಕುಮಾರ್, ಜೈರಾಮ್, ಜಗದೀಶ್, ಕೆ.ಎಂ.ನಿಶಾಂತ್, ಮನೋಜ್, ಪ್ರಸನ್ನ, ಕಿಶೋರ ಕಂಡೇಶ್, ಚೇತನ್ ಮತ್ತಿತರರು ಹಾಜರಿದ್ದರು.

ಲಖೀಂಪುರ ಪ್ರಕರಣದಲ್ಲಿ ಕೇಂದ್ರ ಸಚಿವರ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ




ಮೈಸೂರು, ಅ.3(ಜಿಎ)–ಎರಡು ವರ್ಷಗಳ ಹಿಂದೆ ಕೇಂದ್ರ ಸಚಿವರ ಪುತ್ರ, ಉತ್ತರ ಪ್ರದೇಶದ ಲಖೀಂಪುರ ಖೇರಿಯಲ್ಲಿ ಹೋರಾಟನಿರತ ರೈತರ ಮೇಲೆ ವಾಹನ ಹರಿಸಿ ಅಮಾಯಕರ ಹತ್ಯೆ ಮಾಡಿದ್ದನ್ನು ಖಂಡಿಸಿ, ಸಚಿವರನ್ನು ಸಂಪುಟದಿಂದ ಕೈ ಬಿಡಬೇಕೆಂದು ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಮೈಸೂರು ಸಮಿತಿ ವತಿಯಿಂದ ನಗರದ ರಾಮಸ್ವಾಮಿ ವೃತ್ತದ ಬಳಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರ್ಕಾರ ರೈತ ವಿರೋಧಿ ಮಸೂದೆ ವಾಪಸ್ ಪಡೆಯಬೇಕೆಂದು ಆಗ್ರಹಿಸಿ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿ ಕೇಂದ್ರ ಸಚಿವರೊಬ್ಬರ ಮಗ ಹೋರಾಟ ನಿರತ ರೈತರ ಮೇಲೆ ವಾಹನ ಹರಿಸಿದ್ದು, ಎಂಟು ಮಂದಿ ರೈತರು ಸಾವಿಗೀಡಾಗಿದ್ದರು. ಆರೋಪಿ ವಿರುದ್ಧ ವಿಚಾರಣೆ ತೀವ್ರಗೊಳ್ಳಬೇಕು ಹಾಗೂ ಅಲ್ಲಿಯವರೆಗೆ ಆತನ ತಂದೆಯನ್ನು ಕೇಂದ್ರ ಸಚಿವ ಸಂಪುಟದಿಂದ ಕೈಬಿಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ಬಾಲಾಜಿರಾವ್, ಜಿ.ಜಯರಾಮು, ಅಣ್ಣಪ್ಪ, ಎಸ್.ಬಲರಾಮ್, ಶಿವಣ್ಣ ಮತ್ತು ಚಂದ್ರಶೇಖರ್ ಪಾಲ್ಗೊಂಡಿದ್ದರು.

ಭೌತವಿಜ್ಞಾನ: ಮೂವರು ವಿಜ್ಞಾನಿಗಳಿಗೆ ನೊಬೆಲ್


ಆಯನ್ ಲಿ ಹುಯಿಲಿಯರ್


ಫೆರೆಂಕ್ ಕ್ರೌಜ್


ಪಿಯರಿ ಅಗೊಸ್ಟಿನಿ

ಸ್ಟಾಕ್‌ಹೋಮ್: ಎಲೆಕ್ಟ್ರಾನ್‌ಗಳ ಚಲನೆ ಮತ್ತು ವರ್ತನೆ ಕುರಿತು ಹೊಸ ಒಳನೋಟ ಒದಗಿಸುವ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು ಈ ಬಾರಿಯ ಭೌತ ವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಸ್ವೀಡಿಶ್ ಅಕಾಡೆಮಿ ಘೋಷಿಸಿದೆ.

ಅಮೆರಿಕದ ಓಹಿಯೊ ಸ್ಟೇಟ್ ಯುನಿವರ್ಸಿಟಿಯ ಪಿಯರಿ ಅಗೊಸ್ಟಿನಿ, ಜರ್ಮನಿಯ ಮ್ಯುನಿಕ್‌ನ ಮ್ಯಾಕ್ಸ್ ಪ್ಲಾಂಕ್ ಇನ್ಸ್‌ಟಿಟ್ಯೂಟ್ ಆಫ್ ಕ್ವಾಂಟಮ್ ಆಪ್ಟಿಕ್ಸ್ ಅಂಡ್ ಲುಡ್ವಿಗ್ ಮ್ಯಾಕ್ಸ್ ಮಿಲಿಯನ್ ಯುನಿವರ್ಸಿಟಿಯ ಫೆರೆಂಕ್ ಕ್ರೌಜ್ ಹಾಗೂ ಸ್ವೀಡನ್ ಲುಂಡ್ ಯುನಿವರ್ಸಿಟಿಯ ಆಯನ್ ಲಿ ಹುಯಿಲಿಯರ್ ಈ ಪ್ರತಿಷ್ಠಿತ ಪುರಸ್ಕಾರಕ್ಕೆ ಭಾಜನರಾದ ವಿಜ್ಞಾನಿಗಳಾಗಿದ್ದಾರೆ. ಅಣುಗಳಲ್ಲಿ ಎಲೆಕ್ಟ್ರಾನ್‌ಗಳು ಹೇಗೆ ವರ್ತಿಸುತ್ತವೆ. ಕ್ಷಣಾರ್ಧದಲ್ಲಿ ಎಲೆಕ್ಟ್ರಾನ್‌ಗಳು ಚಲಿಸುವ ಬಗೆ ಹಾಗೂ ಈ ಪ್ರಕ್ರಿಯೆಯಲ್ಲಿ ಆಗುವ ಶಕ್ತಿಯ ಬದಲಾವಣೆ ಗುರುತಿಸಲು ಈ ವಿಜ್ಞಾನಿಗಳು ನಡೆಸಿದ ಸಂಶೋಧನೆ ನಮಗೆ ಹೊಸ ಅಳತೆಗೋಲನ್ನು ಒದಗಿಸಿದೆ ಎಂದು ಅಕಾಡೆಮಿ ಹೇಳಿದೆ. ಸೂಕ್ಷ್ಮಾತಿಸೂಕ್ಷ್ಮ ಕಣಗಳ ಅಧ್ಯಯನ ಒಳಗೊಂಡ ವಿಜ್ಞಾನದ ಈ ಶಾಖೆಯು ಬ್ರಹ್ಮಾಂಡವನ್ನು ಅರ್ಥ ಮಾಡಿಕೊಳ್ಳಲು ನೆರವಾಗಲಿದೆ. ಜೊತೆಗೆ, ಎಲೆಕ್ಟ್ರಾನಿಕ್ಸ್ ಕುರಿತು ಹೊಸ ಒಳನೋಟ ನೀಡುವ ಜೊತೆಗೆ ರೋಗ ಪತ್ತೆ ಕ್ಷೇತ್ರದಲ್ಲಿ ಈ ಸಂಶೋಧನೆ ಪ್ರಮುಖ ಪಾತ್ರ ವಹಿಸುವ ಭರವಸೆ ಇದೆ ಎಂದು ಅಕಾಡೆಮಿ ತಿಳಿಸಿದೆ.

ಆಯನ್ ಅವರು ನೊಬೆಲ್ ಪುರಸ್ಕಾರಕ್ಕೆ ಭಾಜನರಾಗಿರುವ ಐದನೇ ಮಹಿಳೆ ಎನಿಸಿದ್ದಾರೆ. ಪುರಸ್ಕಾರಕ್ಕೆ ಆಯ್ಕೆಯಾಗಿರುವುದು ಘೋಷಣೆಯಾದ ನಂತರ ಪ್ರತಿಕ್ರಿಯಿಸಿದ ಅವರು, 'ನನಗೆ ನಂಬಲು ಆಗುತ್ತಿಲ್ಲ. ಈ ಪ್ರತಿಷ್ಠಿತ ಪುರಸ್ಕಾರವನ್ನು ಪಡೆಯುತ್ತಿರುವುದಕ್ಕೆ ನನಗೆ ಅತೀವ ಸಂತೋಷವಾಗಿದೆ. ಈ ಪುರಸ್ಕಾರಕ್ಕೆ ಭಾಜನರಾದ ಮಹಿಳೆಯರ ಸಂಖ್ಯೆಯೂ ಕಡಿಮೆ. ಹೀಗಾಗಿ, ಪುರಸ್ಕಾರಕ್ಕೆ ಭಾಜನಳಾಗಿದ್ದು ವಿಶೇಷವೇ ಸರಿ' ಎಂದು ಹೇಳಿದ್ದಾರೆ.

ಹಳಿ ತಪ್ಪಿದ್ದ ಆರ್‌ಆರ್‌ವಿ ತೆರವು ಯಶಸ್ವಿ; ಹಸಿರು ಮಾರ್ಗದಲ್ಲಿ ಮೆಟ್ರೋ ರೈಲು ಪುನಾರಂಭ

ಬೆಂಗಳೂರು, ಅ.3– 'ನಮ್ಮ ಮೆಟ್ರೊ'ದ ಹಸಿರು ಮಾರ್ಗದಲ್ಲಿ ಹಳಿತಪ್ಪಿದ್ದ ರೀ ರೈಲ್ (ಆರ್‌ಆರ್‌ವಿ) ವಾಹನವನ್ನು ಮಂಗಳವಾರ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ತೆರವು ಮಾಡಲಾಗಿದೆ.

ಆ ಮೂಲಕ ಬೆಳಗ್ಗೆಯಿಂದ ಹಸಿರು ಮಾರ್ಗದಲ್ಲಿ ಸ್ಥಗಿತವಾಗಿದ್ದ ಮೆಟ್ರೋ ರೈಲು ಸಂಚಾರ ಮಧ್ಯಾಹ್ನ 3.40ರಿಂದ ಪುನಾರಂಭಗೊಂಡಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ನಮ್ಮ ಮೆಟ್ರೋ ಇಎ–ಪಿಪಿಆರ್ ಶ್ರೀವಾಸ್ ರಾಜಗೋಪಾಲನ್, ಇಂದು ಗ್ರೀನ್ ಲೈನ್‌ನಲ್ಲಿ ಮೆಟ್ರೋ ಸೇವೆಗಳ ಅಡಚಣೆಯ ಕುರಿತು ಮಾಧ್ಯಮ ಬಿಡುಗಡೆಯಾಗಿದೆ. ವಿವರಗಳು ಮಾಧ್ಯಮ ಪ್ರಕಟಣೆಯಲ್ಲಿವೆ. 15.40 ಗಂಟೆಯಿಂದ ಸಹಜ ಸ್ಥಿತಿಗೆ ಮರಳಿದೆ.

ಇಂದು ಬೆಳಗ್ಗೆ ಹಳಿ ದುರಸ್ತಿಗೆ ತೆರಳುತ್ತಿದ್ದ ವೇಳೆ, ಆರ್‌ಆರ್‌ವಿ ವಾಹನವು ಹಳಿ ತಪ್ಪಿತ್ತು. ಮೆಟ್ರೋ ರೈಲುಗಳಲ್ಲಿ ತಾಂತ್ರಿಕ ತೊಂದರೆಯಾದಾಗ ಸರಿಪಡಿಸಲು ಬಳಸುವ ರೀ ರೈಲ್ ರಾಜಾಜಿನಗರ ನಿಲ್ದಾಣದ ತಿರುವಿನಲ್ಲಿ ಹಳಿ ತಪ್ಪಿದ ಪರಿಣಾಮ ಈ ಸಮಸ್ಯೆ ಎದುರಾಗಿತ್ತು.

ಚೀನಾದಿಂದ ಅಕ್ರಮ ಧನಸಹಾಯ ನ್ಯೂಸ್‌ಕ್ಲಿಕ್ ವೆಬ್‌ಸೈಟ್ ಸಂಸ್ಥಾಪಕ ಪ್ರಬೀರ್ ಪುರ್ಕಾಯಸ್ಥ ಬಂಧನ



ನವದೆಹಲಿ, ಅ.3– ಡಿಜಿಟಲ್ ನ್ಯೂಸ್ ವೆಬ್‌ಸೈಟ್ ನ್ಯೂಸ್‌ಕ್ಲಿಕ್‌ನ ಸುದ್ದಿಗಳಿಗೂ ಚೀನಾಕ್ಕೂ ಲಿಂಕ್ ಇರುವ ವಿಚಾರಕ್ಕೆ ಸಂಬಂಧಿಸಿದಂತೆ, ದೆಹಲಿ ಪೊಲೀಸರು ಮಂಗಳವಾರ (ಅಕ್ಟೋಬರ್ 3) ಅದರ ಸಂಸ್ಥಾಪಕರಾದ ಪ್ರಬೀರ್ ಪುರ್ಕಾಯಸ್ಥ ಮತ್ತು ಅಮಿತ್ ಚಕ್ರವರ್ತಿ ಅವರನ್ನು ಬಂಧಿಸಿದ್ದಾರೆ. ವಿದೇಶಿ ನಿಧಿಯ ತನಿಖೆಗೆ ಸಂಬಂಧಿಸಿದಂತೆ ದಾಳಿ ನಡೆಸಿದ ನಂತರ ನ್ಯೂಸ್‌ಕ್ಲಿಕ್ ನ್ಯೂಸ್ ಪೋರ್ಟಲ್‌ನ ಕಚೇರಿಯನ್ನು ದೆಹಲಿ ಪೊಲೀಸ್‌ನ ಸ್ಪೆಷಲ್ ಸೆಲ್ ಸೀಜ್ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಪೆಷಲ್ ಸೆಲ್‌ನಲ್ಲಿ ದಾಖಲಾದ ಯುಎಪಿಎ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆಸಿದ ದಾಳಿ, ವಶಪಡಿಸಿಕೊಳ್ಳುವಿಕೆ ಮತ್ತು ಕಸ್ಟಡಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಇಬ್ಬರು ಆರೋಪಿಗಳಾದ ಪ್ರಬೀರ್ ಪುರ್ಕಾಯಸ್ಥ ಮತ್ತು ಅಮಿತ್ ಚಕ್ರವರ್ತಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಟ್ಟು 37 ಪುರುಷ ಶಂಕಿತರನ್ನು ವಿಚಾರಣೆಗೆ ಒಳಪಡಿಸಲಾಯಿತು ಮತ್ತು 9 ಮಹಿಳಾ ಶಂಕಿತರನ್ನು ಅವರ ನಿವಾಸದಲ್ಲಿ ವಿಚಾರಣೆ ನಡೆಸಲಾಯಿತು. ಈ ಅವಧಿಯಲ್ಲಿ, ಡಿಜಿಟಲ್ ಸಾಧನಗಳು ಮತ್ತು ದಾಖಲೆಗಳು ಇತ್ಯಾದಿಗಳನ್ನು ವಶಪಡಿಸಿಕೊಳ್ಳಲಾಗಿದೆ/ತನಿಖೆಗೆ ಸಂಗ್ರಹಿಸಲಾಗಿದೆ.

ಭಯೋತ್ಪಾದನಾ–ವಿರೋಧಿ ಕಾನೂನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ದಾಖಲಾದ ಪ್ರಕರಣದಲ್ಲಿ ನ್ಯೂಸ್‌ಕ್ಲಿಕ್ ಮತ್ತು ಅದರ ಪತ್ರಕರ್ತರಾದ ಅಭಿಸಾರ್ ಶರ್ಮಾ ಮತ್ತು ಊರ್ಮಿಳೇಶ್ ಮತ್ತು ಇತರರಿಗೆ ಸಂಬಂಧಿಸಿದ 30 ಆವರಣಗಳ ಮೇಲೆ ದೆಹಲಿ ಪೊಲೀಸರ ವಿಶೇಷ ಕೋಶ ದಾಳಿ ನಡೆಸಿತ್ತು. ಚೀನಾ ವನ್ನು ಬೆಂಬಲಿಸಿ ಪ್ರಚಾರ ಮಾಡಿದ್ದಕ್ಕಾಗಿ ಹಣ ಪಡೆದ ಆರೋಪದ ಹಿನ್ನೆಲೆಯಲ್ಲಿ ನ್ಯೂಸ್‌ಕ್ಲಿಕ್ ವಿರುದ್ಧ ಈ ಕ್ರಮ ಕೈಗೊಳ್ಳಲಾಗಿದೆ.

ಕಾರ್ಮಿಕರ ಕೆಲಸದ ಅವಧಿ ಹೆಚ್ಚಳಕ್ಕೆ ಸಿಐಟಿಯು ಆಕ್ಷೇಪ

● ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟದ 68ನೇ ಸಂಸ್ಥಾಪನಾ ದಿನಾಚರಣೆ ● ಕಾರ್ಮಿಕ ಸ್ವಾತಂತ್ರ್ಯ ನಿರ್ಬಂಧಿಸುವ ಪ್ರಯತ್ನಕ್ಕೆ ಖಂಡನೆ



ಮೈಸೂರು, ಅ.3(ಎಸ್‌ಬಿಡಿ)– ಕೇಂದ್ರ ಸರ್ಕಾರ ಕಾರ್ಮಿಕರ ಕೆಲಸದ ಅವಧಿಯನ್ನು ಹೆಚ್ಚಿಸಿರುವುದು ಆತಂಕಕಾರಿ ಸಂಗತಿ ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಜಯರಾಮ್ ಹೇಳಿದರು.

ಮೈಸೂರಿನ ಪುರಭವನ ಆವರಣದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಮಂಗಳವಾರ ನಡೆದ ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟದ 68ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕಾರ್ಮಿಕರ ದಿನವಹಿ ಕೆಲಸದ ಅವಧಿಯನ್ನು 8 ಗಂಟೆಯಿಂದ 12 ಗಂಟೆಗೆ ಹೆಚ್ಚಿಸಲಾಗಿದೆ. ಈ ಮೂಲಕ ಅವರ ಮೇಲೆ ಅಧಿಕ ಕಾರ್ಯದೊತ್ತಡ ಹೇರಲಾಗುತ್ತಿದೆ. ಹೀಗೆ ಶೋಷಣೆ ಮಾಡುವುದು ಖಂಡನೀಯ ಎಂದರು.

ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ ನಡೆಸಲಾಗುತ್ತಿದೆ. ವೇತನ ಹಾಗೂ ಇನ್ನಿತರ ಸಾಮೂಹಿಕ ಹಕ್ಕುಗಳನ್ನು ಚಲಾಯಿಸಲಾಗದ ಸ್ಥಿತಿ ನಿರ್ಮಾಣವಾಗಿದೆ. ಕಾರ್ಮಿಕ ಸಂಘಟನೆಗಳ ಸ್ವಾತಂತ್ರ್ಯಕ್ಕೂ ನಿರ್ಬಂಧಿಸುವ ಕೆಲಸವಾಗುತ್ತಿದೆ. ಸಂಘಟನೆ ಮಾಡುವ, ಸಾಮೂಹಿಕವಾಗಿ ಪ್ರತಿಭಟಿಸುವ ಹಾಗೂ ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟು ಪರಿಹಾರಕ್ಕೆ ಆಗ್ರಹಿಸುವ ಹಕ್ಕನ್ನು ಕುಗ್ಗಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರದ ಆಡಳಿತ ವ್ಯವಸ್ಥೆ ಕಠಿಣ ಕ್ರಮಕ್ಕೆ ಮುಂದಾಗಿದೆ. ಹಾಗಾಗಿ ಮುಷ್ಕರದ ಹಕ್ಕನ್ನು ದುರ್ಬಲಗೊಳಿಸುವ ಪ್ರಯತ್ನ ನಡೆದಿದೆ. ಒಟ್ಟಾರೆಯಾಗಿ ಪ್ರಜಾಪ್ರಭುತ್ವದ ಶಕ್ತಿ ಕುಂದಿಸಲಾಗುತ್ತಿದೆ ಎಂದು ಆರೋಪಿಸಿದರು.

ನ್ಯಾಯ ಪಡೆಯಬೇಕಾದರೆ ಹೋರಾಟ ಅನಿವಾರ್ಯ. ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗೆ ಸಂಘಟಿತರಾಗಬೇಕು. ಕಾರ್ಮಿಕ ಸಂಘಟನೆಗಳ ಐಕ್ಯ ಹೋರಾಟಕ್ಕೆ ಹೆಚ್ಚಿನ ಒತ್ತು ನೀಡಬೇಕು. ಕಾರ್ಮಿಕರು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಪರಿಹಾರ ದೊರಕಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಪರಿಣಾಮಕಾರಿಯಾದ ಹೋರಾಟದ ರೂಪುರೇಷೆ ಸಿದ್ಧಪಡಿಸಬೇಕು ಎಂದು ಅಭಿಪ್ರಾಯಿಸಿದರು.

ಜಿಲ್ಲಾ ಉಪ ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ಮಾತನಾಡಿ, ಜಗತ್ತಿನ ಎಲ್ಲಾ ಕಾರ್ಮಿಕ ಸಂಘಟನೆಗಳ ಒಗ್ಗೂಡಿಸುವ ಮೂಲ ಉದ್ದೇಶದೊಂದಿಗೆ 1945ರಲ್ಲಿ ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟ(ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್) ಪ್ರಾರಂಭವಾಯಿತು. ಸಂಘಟನೆ ಜೊತೆಗೆ ಹಲವು ಮಹತ್ತರ ಆಶಯಗಳೊಂದಿಗೆ ಬೆಳೆದುಬಂದಿದೆ. ಸಾಮ್ರಾಜ್ಯಶಾಹಿ, ವರ್ಣಭೇದ ನೀತಿ, ಬಡತನ, ಪರಿಸರ ನಾಶ, ದುಡಿಯುವ ವರ್ಗದ ಮೇಲಿನ ಶೋಷಣೆ ವಿರುದ್ಧ ನಿರಂತರವಾಗಿ ಹೋರಾಟ ನಡೆಸಿ, ಪರಿಹಾರ ಕಲ್ಪಿಸುವ ಗುರಿಯೊಂದಿಗೆ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಕಾರ್ಮಿಕರಿಗೆ ಸೇವಾ ಭದ್ರತೆ, ಆರೋಗ್ಯ ಸುರಕ್ಷತೆ ಅಗತ್ಯವಾಗಿ ಬೇಕಿದೆ. ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ತಡೆಯಬೇಕಿದೆ. ಮಹಿಳಾ ಕಾರ್ಮಿಕರು ಸುರಕ್ಷಿತವಾಗಿ ಕೆಲಸ ಮಾಡುವ ವಾತಾವರಣ ನಿರ್ಮಾಣವಾಗಬೇಕಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹಾಗೂ ಎಲ್ಲಾ ಕ್ಷೇತ್ರಗಳಲ್ಲಿನ ಅಸಮಾನತೆ ಅಳಿಯಬೇಕಿದೆ. ಈ ನಿಟ್ಟಿನಲ್ಲಿ ಸಮರ್ಪಕವಾಗಿ ಹೋರಾಟ ನಡೆಸಲು ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟ ಬೆಂಬಲವಾಗಲಿದೆ ಎಂದರು. ಕಾರ್ಯಕ್ರಮದಲ್ಲಿ ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಎಂ.ಎನ್.ಚೇತನಗೌಡ, ಕಾರ್ಮಿಕರ ಮುಖಂಡರಾದ ಬಾಲಾಜಿರಾವ್, ಬಲರಾಮ್, ಆನಂದರಾಜ್, ಎನ್.ಕೆ.ದೇವದಾಸ್, ನಾಗೇಶ್, ಕಾರ್ತಿಕ್ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಅ.3– ದಸರಾ ಫಲಪುಷ್ಪ ಪ್ರದರ್ಶನವನ್ನು ಅ.15ರಿಂದ 24ರವರೆಗೆ ನಿಶಾದ್ ಬಾಗ್ (ಕುಪ್ಪಣ್ಣ ಪಾರ್ಕ್)ನಲ್ಲಿ ನಡೆಸಲು ತೀರ್ಮಾನಿಸಿದ್ದು, ಜಿಲ್ಲೆಯಲ್ಲಿರುವ ವಿವಿಧ ಬೃಹತ್ ಕೈಗಾರಿಕಾ ಉದ್ಯಮದವರು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ಅ.5ರೊಳಗೆ ಜಿಲ್ಲಾ ತೋಟಗಾರಿಕೆ ಸಂಘದ ಕಚೇರಿಯಲ್ಲಿ ತಮ್ಮ ಹೆಸರು ನೋಂದಾಯಿಕೊಳ್ಳಬಹುದು.

ನಕ್ಕರೆ ಅದೇ ಸ್ವರ್ಗ

ಗುಂಡ : ನನಗೆ ಯಾರ ಶಾಪವೋ ಏನೋ?
ಮನು : ಯಾಕೆ? ಏನಾಯ್ತು?
ಗುಂಡ : ಇತ್ತೀಚೆಗೆ ಊಟ ಆದ ಮೇಲೆ ಯಾಕೋ ಹಸಿವೆಯೇ ಆಗ್ತಿಲ್ಲ ಮಾರಾಯ!!

ಮೈಸೂರು ಮಿತ್ರ
ಬುಧವಾರ, 4 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಹೇಳಕೂಡದ ಮಾತಾಗಿದ್ದರೆ, ಅದನ್ನು ಹೇಳದಿರುವುದೇ ಉತ್ತಮ –ನುಡಿಮುತ್ತು

ವೇದ ಸುಳ್ಳಾದರೂ { ತನ್ನ ಒಲವೇ ಬಲ
ಗಾದೆ ಸುಳ್ಳಾಗದು { ರಾಗಿ ಫಲವೇ ಫಲ

ನಿಮ್ಮ ಪತ್ರಗಳು

ಕಾವೇರಿ ಮತ್ತು ಕರ್ನಾಟಕ ಬಂದ್

ಮಾನ್ಯರೆ,

ಕಾವೇರಿ ನೀರಿನ ಹೋರಾಟದಲ್ಲಿ ನ್ಯಾಯಕ್ಕಾಗಿ ಮೊದಲು 'ಬೆಂಗಳೂರು', ಅದರ ಬೆನ್ನಲ್ಲೇ 'ಕರ್ನಾಟಕ ಬಂದ್'ಗೆ ಕರೆ ನೀಡಿ ಬಂದ್ ಯಶಸ್ವಿಯಾಯಿತು. ಆದರೆ ವಾಸ್ತವವಾಗಿ ಈ ರೀತಿಯ ಬಂದ್‌ಗಳಿಂದಾಗಿ ನಮ್ಮ ಕನ್ನಡ ಜನತೆಗೆ ಹೆಚ್ಚಿನ ಪೆಟ್ಟು ಎಂಬುದನ್ನು ಅರಿಯುವುದು ಸೂಕ್ತ. ರಸ್ತೆ ಬದಿಯಲ್ಲಿ ದಿನನಿತ್ಯದ ಜೀವನೋಪಾಯಕ್ಕಾಗಿ ಇರುವ ಅಂಗಡಿಗಳು, ದೈನಂದಿನ ಸಂಪಾದನೆಯನ್ನೇ ಅವಲಂಭಿಸಿರುವ ಆಟೋ, ಕ್ಯಾಬ್‌ಗಳು, ದಿನಗೂಲಿಯವರು ತತ್ತರಿಸಿ ಹೋದರು. ಬಸ್ಸು, ವಾಣಿಜ್ಯ ವಹಿವಾಟುಗಳಿಲ್ಲದೆ ರಾಜ್ಯದ ಬೊಕ್ಕಸಕ್ಕೆ ನಷ್ಟ ತರುವ ಬಂದ್‌ನಿಂದ ನ್ಯಾಯ ದೊರಕುತ್ತದೆಯೇ ಎಂಬುದು ಈಗಿನ ಪ್ರಶ್ನೆ. ಈ ರೀತಿಯ ಬಂದ್ ಮತ್ತು ಪ್ರತಿಭಟನೆಗಳು ಕೇವಲ ನಮ್ಮ ದನಿಯನ್ನು ಒಗ್ಗೂಡಿಸಿ ಬಲಪ್ರದರ್ಶನ ಮತ್ತು ಒಗ್ಗಟ್ಟು ತೋರ್ಪಡಿಸಬಹುದಷ್ಟೆ. ಬಂದ್‌ನಿಂದಾಗಿ, ಜನರು ಮನೆಯಲ್ಲೇ ಕುಳಿತು, ಟಿವಿಗಳನ್ನು, ಅಂತರ್ಜಾಲದ ಮೂಲಕ ಸಿನಿಮಾಗಳನ್ನು ನೋಡಿ ರಜೆಯ ಮಜಾ ಸವಿದರಷ್ಟೆ. ಇನ್ನು ಮುಂದಾದರೂ ಬಂದ್ ನಡೆದರೆ, ಟಿವಿಗಳನ್ನು ಬಂದ್ ಮಾಡಲಿ, ಅಂತರ್ಜಾಲ ಇಲ್ಲದಂತೆ ನೋಡಿಕೊಳ್ಳಲಿ, ನೀರೂ, ಕರೆಂಟು ಬಂದ್ ಮಾಡಲಿ, ಹೀಗಾಗಿ ಬಂದ್‌ನ ಸಂಪೂರ್ಣ ಬಿಸಿ ತಟ್ಟುವಂತೆ ಮಾಡಲಿ. ಇಲ್ಲದೇ ಹೋದಲ್ಲಿ ಪ್ರತಿಭಟನೆ ಮಾಡುವವರು ರಸ್ತೆಯಲ್ಲಿ ಬಾಯಿ ಬಡಿದುಕೊಂಡು ಪೊಲೀಸ್ ಠಾಣೆಗೆ ಹೋಗಿ ಕೇಸ್ ದಾಖಲಿಸಿಕೊಂಡರೆ, ಬಂದ್‌ನ ರಜೆ ಫಲಾನುಭವಿಗಳು ರಜೆಯ ಮಜಾ ಅನುಭವಿಸುವುದರ ಜೊತೆಗೆ ಅವರಿಗೆ ಜವಾಬ್ದಾರಿ ಅರಿವಾಗುವುದಿಲ್ಲ.

ಸರ್ಕಾರ ಕೂಡ ಸುಪ್ರೀಂನಲ್ಲಾಗಲೀ ನ್ಯಾಯಾಧೀಕರಣದ ಮುಂದಾಗಲಿ ಸ್ವತಃ ಮುಂಚಿತವಾಗಿಯೇ ಮಳೆ ಅಭಾವ ವಿವರಿಸಲಿ, ಜೊತೆಗೆ ತಮಿಳುನಾಡು ಮತ್ತು ಕೇರಳದಲ್ಲಿ ಸುಖಾಸುಮ್ಮನೆ ಸಾಗರ ಸೇರುತ್ತಿರುವ ಅಪಾರ ನೀರಿನ ವಿವರಗಳನ್ನೂ, ಅದನ್ನು ಹೇಗೆ ತಡೆದು ಹತ್ತಿರದ ಮತ್ತೊಂದು ಅಣೆಕಟ್ಟೆಗೆ ಸೇರ್ಪಡೆ ಮಾಡಬಹುದಾದ ವಿಷಯಗಳನ್ನು ವಾದ ಮಾಡಲಿ. ಹಾಗೆಯೇ ಪ್ರಸ್ತುತ ನಮ್ಮ ಬಳಕೆಯ ನೀರಿಗೆ ಇರುವ ಜನಸಂಖ್ಯೆ ಮತ್ತು ತಮಿಳುನಾಡು ಕೃಷಿ ಪ್ರದೇಶಗಳ ವಿವರಗಳನ್ನು ಮಂಡಿಸಿ, ಕಾವೇರಿ ನೀರು ಹಂಚಿಕೆಗೆ ಹೊಸ ಮಾರ್ಗದರ್ಶಿ ಜಾರಿ ಮಾಡಲು ಕೋರಲಿ. ಇಲ್ಲದೇ ಹೋದಲ್ಲಿ ಕಾವೇರಿ ನಮ್ಮ ರಾಜ್ಯದಲ್ಲೇ ಹುಟ್ಟಿದರೂ, ಹರಿದರೂ, ನಮ್ಮ ಜನರಿಗೆ ಉಪಯೋಗವಾಗಲಾರದು. ಬಂದ್ ಬದಲಿಗೆ ಸೂಕ್ತ ಸಾಕ್ಷ್ಯಗಳನ್ನು ಕಲೆಹಾಕಿ ನ್ಯಾಯ ದೊರಕಿಸಿಕೊಳ್ಳುವಂತಹ ಪ್ರಯತ್ನಗಳು ಇಂದಿನ ವರ್ತಮಾನಕ್ಕೆ ಪ್ರಸ್ತುತ ಹಾಗೂ ಅನಿವಾರ್ಯ ಕೂಡ.

–ವಿಜಯ್ ಹೆಮ್ಮಿಗೆ, ಮೈಸೂರು

ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣ ದರದಲ್ಲಿ ರಿಯಾಯ್ತಿ ಕಲ್ಪಿಸಲು ಮನವಿ

ಮಾನ್ಯರೆ,

ಕಳೆದ ಹತ್ತು ವರ್ಷಗಳ ಹಿಂದಿನಿಂದಲೂ, 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ರೈಲ್ವೆ ಇಲಾಖೆಯು ರೈಲ್ವೆ ಪ್ರಯಾಣದ ದರದಲ್ಲಿ ಶೇ.30ರಷ್ಟು ರಿಯಾಯಿತಿ ನೀಡುತ್ತಿತ್ತು. 60 ವರ್ಷ ಪೂರೈಸಿದ ಮಹಿಳೆಯರು ಸೇರಿದಂತೆ ಎಲ್ಲರಿಗೂ ಇದು ಅನ್ವಯವಾಗುತ್ತಿತ್ತು.

ಆದರೆ ಕಳೆದ ಮೂರು ವರ್ಷಗಳಿಂದ ಇತ್ತೀಚೆಗೆ ಅಂದರೆ ಕೋವಿಡ್ ಮಹಾಮಾರಿ ದೇಶದಲ್ಲಿ ವ್ಯಾಪಕವಾಗಿ ಹರಡಿದ ನಂತರ ಹಿರಿಯ ನಾಗರಿಕರು ಓಡಾಡುವುದನ್ನು ಸ್ವಲ್ಪ ಮಟ್ಟಿಗಾದರೂ ತಡೆಯಲು ಈ ರಿಯಾಯಿತಿಯನ್ನು ಕೇಂದ್ರ ಸರ್ಕಾರ ವಾಪಸ್ಸು ಪಡೆಯಿತು. ಅಥವಾ ರೈಲ್ವೆ ಇಲಾಖೆಗೆ ಬರುತ್ತಿದ್ದ ಆದಾಯ ಪ್ರಮಾಣವೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರಲೂ ಬಹುದು.

ಈಗ ದೇಶದಲ್ಲಿ ಕೋವಿಡ್ ಸೋಂಕು ಹೆಚ್ಚು ಕಡಿಮೆ ಮರೆಯಾಗುತ್ತಾ ಬಂದಿದೆ. ಹಾಗೂ ರೈಲ್ವೆ ಇಲಾಖೆಯು ಇತ್ತೀಚಿನ ವರ್ಷಗಳಲ್ಲಿ ಲಾಭದಾಯಕವಾಗಿಯೂ ನಡೆಯುತ್ತಿದೆ. ಮಾನ್ಯ ಕೇಂದ್ರ ರೈಲ್ವೆ ಸಚಿವರು ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣದ ದರದಲ್ಲಿ ಹಿಂದೆ ಇದ್ದ ಶೇ.30 ರಷ್ಟು ರಿಯಾಯಿತಿಯನ್ನು, ಶೇ.40ಕ್ಕೆ ಹೆಚ್ಚಿಸಿ, ಹಿರಿಯ ನಾಗರಿಕರು ರೈಲಿನಲ್ಲಿ ಸುರಕ್ಷಿತವಾಗಿ ಓಡಾಡುವಂತಾಗಲಿ. ಇದು ಮತ್ತೆ ಜಾರಿಗೆ ಬರುವುದರಿಂದ ಕೇಂದ್ರ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಹಾಗೂ ರೈಲ್ವೇ ಇಲಾಖೆಗೆ ನಷ್ಟವೂ ಆಗುವುದಿಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಮೈಸೂರಿಗೆ ಯಾವ ಮಾನದಂಡದಲ್ಲಿ ಸ್ವಚ್ಛ ನಗರಿ ಪಟ್ಟ?

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಮೇಯರ್ ಶಿವಕುಮಾರ್ ಅವರು ಸ್ವಚ್ಛ ಸರ್ವೇಕ್ಷಣೆ ಅಡಿಯಲ್ಲಿ ಮೈಸೂರಿಗೆ ಸ್ವಚ್ಛ ನಗರಿ ಪಟ್ಟ ಎಂದು ಪತ್ರಿಕಾ ಹೇಳಿಕೆ ನೀಡಿದ್ದರು. ಆದರೆ ಮೈಸೂರಿನ ಹೃದಯ ಭಾಗವಾದ ಮೈಸೂರು ನಗರ ಬಸ್ ನಿಲ್ದಾಣದ ಎದುರು, ಅದೂ ಮೈಸೂರು ನಗರ ಪಾಲಿಕೆಗೆ ಅನತಿ ದೂರದಲ್ಲಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಿಂಭಾಗ ಅನೈರ್ಮಲ್ಯ ತಾಂಡವವಾಡುತ್ತಿದೆ. ಪಾಪ ಸಾರ್ವಜನಿಕರು ಮೂಗು ಮುಚ್ಚಿಕೊಂಡು ತಿರುಗಾಡುವ ಸ್ಥಿತಿ ಬಂದೊದಗಿದೆ. ಇದನ್ನು ಹೀಗೆಯೇ ಬಿಟ್ಟರೆ ಪರಿಸ್ಥಿತಿ ಮಿತಿ ಮೀರಿ ಬಿಡುತ್ತದೆ. ಸ್ವಚ್ಛತೆ ಮಾಡಿಸಲು ಆಗದಿದ್ದರೆ ರಸ್ತೆ ಸಂಪೂರ್ಣ ಬಂದ್ ಮಾಡಿ. ಅಲ್ಲಲ್ಲೇ ಸಾರ್ವಜನಿಕ ಉಚಿತ ಶೌಚಾಲಯಗಳನ್ನು ನಿರ್ಮಿಸಲು ಮನವಿ.

– ನೊಂದ ವಿದ್ಯಾರ್ಥಿಗಳು, ಮೈಸೂರು.

ದಸರಾ ಸಂದರ್ಭದಲ್ಲಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ನಡೆಯಲಿ

ಮಾನ್ಯರೆ,

ವಿಶ್ವ ವಿಖ್ಯಾತ ಮೈಸೂರು ದಸರಾ ಎಂದರೆ ಸಾಕು ಎಲ್ಲೆಡೆ ಸಂಭ್ರಮ ನೆಲೆಸುತ್ತದೆ. ಈ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ಕಾರ್ಮಿಕರಿಗೆ ಹೆಚ್ಚಿನ ಕೆಲಸ ಹಾಗೂ ಜವಾಬ್ದಾರಿ ಜಾಸ್ತಿಯಾಗಿರುತ್ತದೆ. ಬಿಡುವಿಲ್ಲದ ಕೆಲಸದಿಂದ ಒತ್ತಡ ಹೆಚ್ಚಾಗಿರುತ್ತದೆ. ಪೌರಕಾರ್ಮಿಕರಿಗೆ ಬೆಳಗ್ಗೆ ಫಲಾಹಾರ ನೀಡುವ ವ್ಯವಸ್ಥೆ ಆಗಿರುತ್ತದೆ. ಇದು ಸಂತೋಷದ ವಿಷಯ. ಆದರೆ ಮಹಿಳಾ ಪೌರ ಕಾರ್ಮಿಕರು ಪೌಷ್ಟಿಕಾಂಶಯುಕ್ತ ಆಹಾರದ ಕೊರತೆಯಿಂದ ಬಳಲುತ್ತಿರಬಹುದು. ಗರ್ಭಿಣಿಯರಿರಬಹುದು. ಹಾಲುಣಿಸುವ ತಾಯಂದಿರಾಗಿರಬಹುದು. ಕೆಲ ಮಹಿಳೆಯರು 50ರ ಆಸುಪಾಸಿನವರಾಗಿರಬಹುದು. ಕೆಲ ಮಹಿಳೆಯರು ನಿಶ್ಶಕ್ತಿಯಿಂದ ಕೂಡಿರುತ್ತಾರೆ. ದಸರಾ ಸಂದರ್ಭದಲ್ಲಿ ಹೆಚ್ಚಿನ ಶ್ರಮದಾಯಕ ಕೆಲಸವಿರುತ್ತದೆ. ದಸರಾ ಸಂದರ್ಭದಲ್ಲಿ ಕೆಲಸದಲ್ಲಿ ಒತ್ತಡವಿರುವುದರಿಂದ ಇವರಿಗೆ ಆರೋಗ್ಯ ತಪಾಸಣೆ ಅಗತ್ಯವಾಗಿರುತ್ತದೆ. ದಸರಾ ಸಂದರ್ಭದಲ್ಲಿ ಒತ್ತಡದ ಕೆಲಸದಲ್ಲಿರುವ ಎಲ್ಲಾ ಇಲಾಖೆಯ ನೌಕರರಿಗೂ ಆರೋಗ್ಯ ತಪಾಸಣೆ ನಡೆಯಲಿ. ಇದರಿಂದ ಅವರಿಗೆ ರಕ್ಷಣೆ ನೀಡಿದಂತಾಗುತ್ತದೆ. ದೇಹದಲ್ಲಿ ಅನಾರೋಗ್ಯವಿದ್ದರೆ ಅರಿವಿಗೆ ಬಂದು ಜೀವ ರಕ್ಷಣೆಗೆ ಸಹಾಯವಾಗುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಡಾ.ಹೆಚ್.ವಿ.ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ನಾದ ವಿದ್ಯಾಲಯದ ಸಪ್ತ ತಾಂಡವ ವೈಭವ

ಸೆಪ್ಟೆಂಬರ್ ತಿಂಗಳಿನ ಇಪ್ಪತ್ತೊಂಭತ್ತನೆಯ ತಾರೀಖು ಸಂಜೆ ಮೈಸೂರಿನ ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ಅಪೂರ್ವವಾದ, ಅದ್ಭುತವಾದ ಒಂದು ನೃತ್ಯ ರೂಪಕವನ್ನು ನೋಡುವ ಸದವಕಾಶವು ನನಗೆ ಲಭಿಸಿತ್ತು. ಸುಮಾರು ಮೂರೂವರೆ ಘಂಟೆಗಳ ಕಾರ್ಯಕ್ರಮ ಎಷ್ಟು ಆಕರ್ಷಕವಾಗಿತ್ತೆಂದರೆ ಕೇವಲ ಮೂರೂವರೆ ನಿಮಿಷಗಳನ್ನೇ ಅಲ್ಲಿ ಕಳೆದೆವೇನೋ ಎನಿಸಿತು. ಕಾರ್ಯ ಕ್ರಮವನ್ನು ಏರ್ಪಡಿಸಿದ್ದವರು ನಾದ ವಿದ್ಯಾಲಯ (ಅಕ್ಯಾಡೆಮಿ ಆಫ್ ಮ್ಯೂಸಿಕ್ ಅಂಡ್ ಡಾನ್ಸ್), ಹೆಬ್ಬಾಳ್, ಮೈಸೂರು ಅವರು. ಇದು ಆ ಸಂಸ್ಥೆಯ ಹದಿನೇಳನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಏರ್ಪಟ್ಟಿತ್ತು. ಈ ಸಂಸ್ಥೆಯನ್ನು ನಡೆಸುತ್ತಿರುವವರು ವಿದ್ವಾನ್ ಎಂ.ಎನ್. ನವೀನ್ ಮತ್ತು ವಿದುಷಿ ಶ್ರೀಮತಿ ನವೀನ್ ಎಂಬ ದಂಪತಿಗಳು. ಕಾರ್ಯಕ್ರಮ ಎಷ್ಟು ಅಚ್ಚುಕಟ್ಟಾಗಿತ್ತೆಂದರೆ ಅಲ್ಲಿ ಕಳೆದ ಒಂದು ನಿಮಿಷವೂ ವ್ಯರ್ಥವಾಯಿತು ಎಂದೆನಿಸಲಿಲ್ಲ. ಎಂ.ಎನ್.ನವೀನ್ ಅವರದು ಕಂಚಿನ ಕಂಠ. ಅವರು ಆದಿಶಂಕರಾಚಾರ್ಯರ ಲಿಂಗಾಷ್ಟಕ ವನ್ನು ಹೇಳಲೀ, ಪುರಂದರದಾಸರ ದೇವ ನಾಮವನ್ನು ಹಾಡಲಿ, ಕೇಳುಗರನ್ನು ನಾದ ಲೋಕಕ್ಕೆ ಒಯ್ಯುತ್ತಾರೆ. ಎಲ್ಲ ನೃತ್ಯಗಳನ್ನು ನಾದವಿದ್ಯಾಲಯದ ವಿದ್ಯಾರ್ಥಿನಿಯರೇ ಪ್ರದರ್ಶಿಸಿದರು.

ಪುಟ್ಟ-ಪುಟ್ಟ ಬಾಲಿಕೆಯರು ಯಾವ ಸಭಾಕಂಪವಿಲ್ಲದೆ ನರ್ತಿಸುವುದನ್ನು ಕಂಡು ನಾನು ಆಶ್ಚರ್ಯಪಟ್ಟೆ, ಮುಂದೆ ಅವರೆಲ್ಲ ಉತ್ತಮ ಕಲಾವಿದರಾಗಿ ಮೈಸೂರಿನ ಕೀರ್ತಿಯನ್ನು ಜಗತ್ತಿನಲ್ಲಿ ಹರಡುವರೆಂದು ನನ್ನ ನಂಬಿಕೆ. ಪುಷ್ಪಾಂಜಲಿ, ಅಲರಿಪು ಇವುಗಳನ್ನೆಲ್ಲಾ ಕಿರಿಯ(ಜೂನಿಯರ್) ವಿದ್ಯಾರ್ಥಿನಿಯರು ಚೆನ್ನಾಗಿ ಪ್ರದರ್ಶಿಸಿದರು. ಕೃಷ್ಣನ ಬಾಲಲೀಲೆಗಳನ್ನು ಅವರು ನರ್ತನದಲ್ಲಿ ತೋರಿಸಿ ನೋಡುಗರ ಮನ ಸೆಳೆದರು. ಶ್ರೀಮತಿ ಮಿತ್ರಾ ಎಷ್ಟು ಶ್ರದ್ಧೆಯಿಂದ ತಮ್ಮ ಶಿಷ್ಯೆಯರನ್ನು ತಯಾರು ಮಾಡಿದ್ದಾರೆಂಬುದು ಹೆಜ್ಜೆ–ಹೆಜ್ಜೆಯಲ್ಲೂ ಸ್ಪಷ್ಟವಾಗುತ್ತಿತ್ತು.

ಸಪ್ತ ತಾಂಡವ: ಕಾರ್ಯಕ್ರಮದ ಮುಖ್ಯ ಭಾಗ ಸಪ್ತ ತಾಂಡವ ನೃತ್ಯ ರೂಪಕ. ಕಾಳಿದಾಸನು 'ಮಾಲವಿಕಾಗ್ನಿ ಮಿತ್ರ' ಎಂಬ ನಾಟಕದಲ್ಲಿ ನಾಟ್ಯದ ಮಹಿಮೆಯನ್ನು ಹೇಳುವಾಗ –

ದೇವಾನಾಮಿದಮಾಮನಂತಿ
ಮುನಯಃ ಶಾಂತಂ ಕ್ರತುಂ ಚಾಕ್ಷುಷಂ
ರುದ್ರೇಣೇದಮುಮಾಕೃತ ವ್ಯತಿಕರೇ
ಸ್ವಾಂಗೇ ವಿಭಕ್ತಂ ದ್ವಿಧಾ।
ತ್ರೈಗುಣ್ಯೋದ್ಭವಮತ್ರ ಲೋಕಚರಿತಂ
ನಾನಾ ರಸಂ ದೃಶ್ಯತೇ
ನಾಟ್ಯಂ ಭಿನ್ನರುಚೇರ್ಜನಸ್ಯ
ಬಹುಧಾಪ್ಯೇಕಂ ಸಮಾರಾಧನಮ್॥

> ಪುಟ್ಟ–ಪುಟ್ಟ ಬಾಲಿಕೆಯರು ಯಾವ ಸಭಾಕಂಪವಿಲ್ಲದೆ ನರ್ತಿಸುವುದನ್ನು ಕಂಡು ನಾನು ಆಶ್ಚರ್ಯಪಟ್ಟೆ ಮುಂದೆ ಅವರೆಲ್ಲ ಉತ್ತಮ ಕಲಾವಿದರಾಗಿ ಮೈಸೂರಿನ ಕೀರ್ತಿಯನ್ನು ಜಗತ್ತಿನಲ್ಲಿ ಹರಡುವರೆಂದು ನನ್ನ ನಂಬಿಕೆ. ಪುಷ್ಪಾಂಜಲಿ, ಅಲರಿಪು ಇವುಗಳನ್ನೆಲ್ಲಾ ಕಿರಿಯ(ಜೂನಿಯರ್) ವಿದ್ಯಾರ್ಥಿನಿಯರು ಚೆನ್ನಾಗಿ ಪ್ರದರ್ಶಿಸಿದರು. ಕೃಷ್ಣನ ಬಾಲಲೀಲೆಗಳನ್ನು ಅವರು ನರ್ತನದಲ್ಲಿ ತೋರಿಸಿ ನೋಡುಗರ ಮನ ಸೆಳೆದರು. ಶ್ರೀಮತಿ ಮಿತ್ರಾ ಎಷ್ಟು ಶ್ರದ್ಧೆಯಿಂದ ತಮ್ಮ ಶಿಷ್ಯೆಯರನ್ನು ತಯಾರು ಮಾಡಿದ್ದಾರೆಂಬುದು ಹೆಜ್ಜೆ–ಹೆಜ್ಜೆಯಲ್ಲೂ ಸ್ಪಷ್ಟವಾಗುತ್ತಿತ್ತು.



ಎಂದು ಹೇಳಿದ್ದಾನೆ. ನೃತ್ಯವು ದೇವತೆಗಳಿಗೆ ಅರ್ಪಿತವಾಗುವ ಶಾಂತಿಮಯ ಚಾಕ್ಷುಷ ಯಜ್ಞ. ಇದನ್ನು ಶಿವನು ಉಮೆಯ ಆನಂದಕ್ಕಾಗಿ ಲಾಸ್ಯ ತಾಂಡವ ಎಂದು ತನ್ನಲ್ಲಿಯೇ ಎರಡು ವಿಧವಾಗಿ ವಿಂಗಡಿಸಿದನು. ತ್ರಿಗುಣಾತ್ಮಕವಾದ ಲೋಕದ ಚರಿತವೆಲ್ಲ ನಾಟ್ಯದಲ್ಲಿ ರಸಮಯವಾಗಿ ಕಾಣಿಸುತ್ತದೆ. ಜನರ ರುಚಿಗಳು ಭಿನ್ನವಾದರೂ ನಾಟ್ಯ ಎಲ್ಲರಿಗೂ ಒಂದು ಸಮಾರಾಧನೆ ಎಂಬುದಿದರ ಅಭಿಪ್ರಾಯ.

ಉಮೆಯು ಲಾಸ್ಯವನ್ನೂ ಶಿವನು ತಾಂಡವವನ್ನೂ ಪ್ರತಿನಿಧಿಸುತ್ತಾರೆ. ಶಿವ ತಾಂಡವವು ಸಮಸ್ತ ಜಗದ್ ವ್ಯಾಪಾರಕ್ಕೆ ಸಂಕೇತ. ಅವನ ನಾಟ್ಯ ಎಲ್ಲ ಶಾಸ್ತ್ರಗಳ ಜನ್ಮದ ಕಾರಣ. ಆ ನಾಟ್ಯದಲ್ಲಿ ಶಿವನು ಕೈಯ್ಯಲ್ಲಿ ಹಿಡಿದುಕೊಂಡಿದ್ದ ಢಕ್ಕೆಯೆಂಬ ವಾದ್ಯದ ಶಬ್ದದಿಂದಲೇ ವ್ಯಾಕರಣ ಶಾಸ್ತ್ರದ ಮೂಲಸೂತ್ರಗಳ ಉತ್ಪತ್ತಿಯಾಯಿತೆಂದು ನಂದಿಕೇಶ್ವರ ಕಾರಿಕೆಯಲ್ಲಿ ಹೇಳಲಾಗಿದೆ.

ನೃತ್ತಾವಸಾನೇ ನಟರಾಜರಾಜೋ
ನನಾದ ಢಕ್ಕಾಂ ನವಪಂಚವಾರಮ್ ।
ಉದ್ಧರ್ತುಕಾಮಃ ಸನಕಾದಿ ಸಿದ್ಧಾನ್
ಏತದ್ವಿಮರ್ಶೇ ಶಿವಸೂತ್ರಜಾಲಮ್॥

ನಟರಾಜ ಶಿವನು ನೃತ್ಯದ ಕೊನೆಯಲ್ಲಿ ಸನಕ ಮೊದಲಾದ ಸಿದ್ಧರನ್ನು ಉದ್ಧರಿಸುವುದಕ್ಕಾಗಿ ಢಕ್ಕೆಯನ್ನು ಹದಿನಾಲ್ಕು ಬಾರಿ ನುಡಿಸಿದನು. ಆಗ ಹುಟ್ಟಿದ ಶಬ್ದಗಳೇ ಹದಿನಾಲ್ಕು ಶಿವಸೂತ್ರಗಳಾದುವು.

ಅಇಉಣ್ । ಋಲೃಕ್ ।
ಏಓಙ್। ಐಔಚ್ । ಹಯವರಟ್ । ಲಣ್ ।
ಞಮಙಣನಮ್ । ಝಭಞ್ ।
ಘಢಧಷ್ । ಜಬಗಡದಶ್ ।
ಖಫಛಠಥಚಟತವ್ । ಕಪಯ್ ಶಷಸರ್ । ಹಲ್ ।

ಎಂಬ ಈ ಸೂತ್ರಗಳು ಪಾಣಿನೀಯ ವ್ಯಾಕರಣದ ಅಡಿಗಲ್ಲಿನಂತಿವೆ. ಇವನ್ನು ಮಿತ್ರಾ ಅವರು ವಿವರಿಸಿ ನಾಟ್ಯ ಪ್ರಸ್ತುತಿಗೆ ಕಾಂತಿಯನ್ನು ತುಂಬಿದರು.

ಸಪ್ತ ತಾಂಡವಗಳು ಯಾವುವು?: ನಾದ ವಿದ್ಯಾಲಯದ ವಿದ್ಯಾರ್ಥಿನಿಯರು ಪ್ರಸ್ತುತಪಡಿಸಿದ ಏಳು ತಾಂಡವಗಳು 1) ಆನಂದ ತಾಂಡವ, 2) ಸಂಧ್ಯಾ ತಾಂಡವ, 3) ಉಮಾ ತಾಂಡವ, 4) ಗೌರೀ ತಾಂಡವ, 5) ಕಾಲಿಕಾ ತಾಂಡವ, 6) ತ್ರಿಪುರ ತಾಂಡವ ಮತ್ತು 7) ಸಂಹಾರ ತಾಂಡವ. ಒಂದೊಂದು ತಾಂಡವದ ಪ್ರಸ್ತುತಿಯ ಮುಂಚೆ ಮಿತ್ರಾ ಅವರು ಆ ಪ್ರಸಂಗದ ಕಥೆಯನ್ನು ತಿಳಿಸಿದ್ದುದರಿಂದ ಪ್ರೇಕ್ಷಕರು ಸನ್ನಿವೇಶದ ಒಂದೊಂದು ನಡೆಯ ಅಭಿನಯವನ್ನೂ ಅರಿತುಕೊಳ್ಳಲು ಅನುಕೂಲತೆಯಿತ್ತು. ವೇದ–ಪುರಾಣ–ಕಾವ್ಯಗಳಿಂದ ಸಾಹಿತ್ಯವನ್ನು ಸಂಗ್ರಹಿಸಲಾಗಿತ್ತು. ವಿಷಯದ ಪರಿಕಲ್ಪನೆಯಲ್ಲಿ ನೂತನ ವಿಚಾರವಿತ್ತು. ಇದರಿಂದ ಸಹೃದಯ ಪ್ರೇಕ್ಷಕರಿಗೆ ರಸಾನುಭವ ಸುಲಭವಾಯಿತು. ತ್ರಿಪುರ ತಾಂಡವ ಅದ್ಭುತ ರಸಕ್ಕೆ ಅತ್ಯುತ್ತಮ ಸನ್ನಿವೇಶವನ್ನೊದಗಿಸಿತು. ಮೂವರು ರಾಕ್ಷಸರು ಮೂರು ಗಗನಗಾಮಿ ಪುರಗಳಲ್ಲಿ ಸಂಚರಿಸುತ್ತಾ ಲೋಕ ಕಂಟಕರಾಗಿದ್ದುದು, ಅವರ ಸಂಹಾರಕ್ಕಾಗಿ ಶಿವನು ಭೂಮಿಯನ್ನೇ ರಥವನ್ನಾಗಿ, ಬ್ರಹ್ಮನನ್ನು ಸಾರಥಿಯನ್ನಾಗಿ, ನಾಲ್ಕು ವೇದಗಳನ್ನು ಅಶ್ವಗಳನ್ನಾಗಿ, ಮೇರು ಪರ್ವತವನ್ನು ಧನುಸ್ಸನ್ನಾಗಿ, ವಿಷ್ಣುವನ್ನು ಅಸ್ತ್ರವನ್ನಾಗಿ ಮಾಡಿಕೊಂಡು ತ್ರಿಪುರ ದಹನವನ್ನು ಮಾಡಿದ ಕಥೆ ಪುರಾಣಗಳಲ್ಲಿದೆ. ಅದನ್ನು ನರ್ತಕಿಯರು ಭಾವಪೂರ್ಣವಾಗಿ ಪ್ರದರ್ಶಿಸಿ ಪ್ರೇಕ್ಷಕರಿಗೆ ರಸದೌತಣವನ್ನು ಬಡಿಸಿದರು.

ಅಂಗೈರಂತರ್ನಿಹಿತ ವಚನೈಃ ಸೂಚಿತಃ ಸಮ್ಯಗರ್ಥಃ
ಪಾದ ನ್ಯಾಸೋ ಲಯಮನುಗತ ಸ್ತನ್ಮಯತ್ವ ರಸೇಷು

ಎಂದು ಹೇಳಿರುವಂತೆ ನರ್ತಕಿಯರ ಹಸ್ತಾದ್ಯಂಗಗಳೇ ಮಾತನಾಡಿದಂತೆ ಅಭಿನಯದಿಂದಲೇ ಪ್ರತಿಪಾದ್ಯಾರ್ಥವನ್ನು ಸೂಚಿಸುತ್ತಿದ್ದುವು, ಲಯಕ್ಕೆ ಅನುಗುಣವಾಗಿ ಪಾದನ್ಯಾಸವಿತ್ತು. ಇಂತಹ ಕ್ಷಣಗಳಲ್ಲೇ ಪ್ರೇಕ್ಷಕರಿಗೆ ತನ್ಮಯತ್ವವು ಸಿದ್ಧವಾಗುವುದು. ಗೌರೀ ತಾಂಡವದಲ್ಲಿ ಶೃಂಗಾರ, ಕಾಳಿಕಾ ತಾಂಡವದಲ್ಲಿ ರೌದ್ರ, ಆನಂದ ತಾಂಡವದಲ್ಲಿ ಆನಂದ ಮೂರ್ತೀಭವಿಸಿದ್ದುವು. ಎಲ್ಲರಿಗೂ ವಿಶಿಷ್ಟ ಅನುಭವ ಉಂಟಾಗಿತ್ತೆನ್ನಬಹುದು. ಇದಕ್ಕೆ ಮಿತ್ರಾ ಅವರ ತರಬೇತಿ, ವಿದ್ಯಾರ್ಥಿನಿಯರ ಪರಿಶ್ರಮ, ನವೀನ್ ಅವರ ಕಂಠಶ್ರೀ ಎಷ್ಟು ಕಾರಣವೋ, ವಿದ್ವಾನ್ ಜಿ.ಎಸ್.ನಾಗರಾಜ್ ಅವರ ಮೃದಂಗ ಮತ್ತು ವಿದ್ವಾನ್ ನಿತೀಶ್ ಅಮ್ಮಣ್ಣಯ್ಯ ಅವರ ಕೊಳಲು ವಾದನದ ಸಹಕಾರವೂ ಅಷ್ಟೇ ಕಾರಣವಾಗಿತ್ತು.

ನಾದ ವಿದ್ಯಾಲಯದ ವಿದ್ಯಾರ್ಥಿನಿಯಾಗಿದ್ದು ಈಗ ಕಲಾವಿದೆಯಾಗಿ ಹೆಸರನ್ನು ಗಳಿಸಿರುವ ವಿದುಷಿ ಶ್ರೀಮತಿ ಅಪರ್ಣಾ ಕೊಡಂಕಿರಿಯವರು ಒಂದು ವಿಶಿಷ್ಟ ಸಾಧನೆಯನ್ನು ಮಾಡಿದ್ದಾರೆ. ಇಂದು ಕರಾವಳಿ ಪ್ರದೇಶಗಳಲ್ಲಿ ಅನೇಕ ಸಮುದಾಯಗಳು ತುಳು ಭಾಷೆಯಲ್ಲಿ ಮತನಾಡುತ್ತಿದ್ದರೂ ತುಳು ಲಿಪಿ ಅವರಿಗೆ ಮರೆತು ಹೋಗಿದೆ ಎಂಬುದು ಸರ್ವವಿಧಿತ. ಅಪರ್ಣಾ ತುಳು ಲಿಪಿಯ ಪುನರುಜ್ಜೀವನಕ್ಕಾಗಿ ಬದ್ಧಕಂಕಣರಾಗಿದ್ದಾರೆ. ಸಂಪೂರ್ಣ ಭಗವದ್ಗೀತೆಯನ್ನು ತುಳು ಲಿಪಿಯಲ್ಲಿ ಬರೆದಿದ್ದಾರೆ. 'ಸಪ್ತ ತಾಂಡವ' ಸಮಾರಂಭದಲ್ಲಿ ಅಪರ್ಣಾ ಅವರಿಗೆ ಆತ್ಮೀಯ ಅಭಿನಂದನೆಯನ್ನು ಸಮರ್ಪಿಸಿ ಸನ್ಮಾನಿಸಲಾಯಿತು. ನಮ್ಮ ದೇಶದ ಎಲ್ಲಾ ಭಾಷೆಗಳೂ ಬದುಕಿ ಉಳಿಯಬೇಕು. ಆತ್ಮನಿಗೆ ದೇಹ ಇದ್ದಂತೆ ಭಾಷೆಗೆ ಲಿಪಿ. ಅದನ್ನೂ ಬಳಕೆಯಲ್ಲಿ ತಂದರೆ ಭಾಷೆಯ ಸಾಹಿತ್ಯದ ಬೆಳವಣಿಗೆ ಸಾಧ್ಯವಾಗುತ್ತದೆ. ಅಪರ್ಣಾ ಅವರ ಕಾರ್ಯ ಸ್ತುತ್ಯವೂ, ಸ್ವಾಗತಾರ್ಹವೂ ಆಗಿದೆಯೆಂದು ಹೇಳಬಯಸುತ್ತೇನೆ.

ಮಿತ್ರಾ–ನವೀನ್ ದಂಪತಿಗಳು ವಿದ್ಯಾರ್ಥಿನಿಯರೆಲ್ಲರನ್ನೂ ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದಾರೆಂದೂ ಅವರ ಪ್ರೀತಿ ಮಕ್ಕಳ ಶ್ರದ್ಧೆ, ಉತ್ಸಾಹಗಳಿಗೆ ನೀರೆರೆದು ಬೆಳೆಸುತ್ತಿದೆಯೆಂದು ಆ ವಿದ್ಯಾರ್ಥಿನಿಯರ ತಂದೆ–ತಾಯಂದಿರು ಹೇಳಿದುದನ್ನು ನಾನು ಕೇಳಿದೆ. ಗುರುವಾತ್ಸಲ್ಯಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ? ಕಲೆಗಳ ವಿಕಾಸಕ್ಕೆ, ಕಲಾವಿದರ ಬೆಳವಣಿಗೆಗೆ ನಾದವಿದ್ಯಾಲಯದಂತಹ ಗುರುಕುಲಗಳು ಬೇಕು. ಸಂಗೀತ–ನೃತ್ಯಗಳು ಸಂಸ್ಕೃತಿಯ ಎರಡು ಕಣ್ಣುಗಳು. ಅವನ್ನು ಜತನದಿಂದ ಕಾಪಾಡುವ ಕಾಳಜಿ ಸಮಾಜದಲ್ಲಿರಬೇಕು. ಇಂತಹ ಕಾರ್ಯಕ್ರಮಕ್ಕೆ ಸಹಕಾರವನ್ನು ನೀಡಿ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ಸಂಸ್ಕೃತಿ ಪ್ರಿಯ ನಾಗರಿಕರ ಕೃತಜ್ಞತೆ ಸಲ್ಲುತ್ತದೆ.

ಸಂಸ್ಕೃತಿಃ ಶಾಶ್ವತೀ ಭೂಯಾದ್ ವರ್ಧಿಷೀಷ್ಟ ಸದಾ ಕಲಾ
ನಾದ ವಿದ್ಯಾಲಯೋ ನಿತ್ಯಂ ವರ್ಧತಾಮಭಿವರ್ಧತಾಮ್।

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಇಲ್ಲವೇ ಭಾರತದ ರಾಷ್ಟ್ರಪತಿಗಳಿಂದ ಮಾತ್ರ ಕಾವೇರಿ ವಿವಾದಕ್ಕೆ ಪರಿಹಾರ

ಒಂದನೇ ಪುಟದಿಂದ

ಮೈಸೂರು ರಾಜರ ಕಾಲದಿಂದಲೂ ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ನಮ್ಮ ನೆಲ, ನಮ್ಮ ಕಾವೇರಿ, ನಮ್ಮ ಅಣೆಕಟ್ಟಿನಿಂದ ತಮಿಳುನಾಡಿಗೆ ಪೂರ್ಣ ಪ್ರಮಾಣದಲ್ಲಿ ಅನುಕೂಲವಾಗುತ್ತಿದೆ. ಮಳೆ ಬಾರದೆ ಸಂಕಷ್ಟ ಪರಿಸ್ಥಿತಿಯಲ್ಲಂತೂ ತಮಿಳುನಾಡು ಕೇಳಿದಷ್ಟು ನೀರು ಹರಿದು ಹೋಗುತ್ತಿರುವ ಕಾರಣ ಕರ್ನಾಟಕಕ್ಕೆ ಶತಮಾನಗಳಿಂದಲೂ ಅನ್ಯಾಯವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೊದಲು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರಲ್ಲಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಬೇಕು. ಅಣೆಕಟ್ಟು ಬರಿದಾಗುವ ಪರಿಸ್ಥಿತಿಯಲ್ಲೂ ಕಾವೇರಿ ನದಿ ನೀರು ಹಂಚಿಕೆಯಲ್ಲಿ ಕರ್ನಾಟಕಕ್ಕೆ ನ್ಯಾಯ ಸಿಗುತ್ತಿಲ್ಲ ಎಂಬ ವಾಸ್ತವತೆಯನ್ನು ಮನವರಿಕೆ ಮಾಡಿಕೊಡಬೇಕು. ಈ ಮೂಲಕ ಪೂರ್ಣ ಪೀಠ ರಚನೆ ಮಾಡುವಂತೆ ಅರ್ಜಿ ಸಲ್ಲಿಸಬೇಕು. ಆಗ ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ನ್ಯಾಯ ಸಿಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಒಂದು ವೇಳೆ ಸುಪ್ರೀಂಕೋರ್ಟ್ ನ್ಯಾಯಾಧೀಶರು ಪೂರ್ಣ ಪೀಠ ರಚಿಸುವ ಪುನರ್ ಪರಿಶೀಲನಾ ಅರ್ಜಿ ತಿರಸ್ಕಾರ ಮಾಡಿದರೆ ರಾಷ್ಟ್ರಪತಿಗಳ ಮೊರೆ ಹೋಗಬೇಕು. ರಾಷ್ಟ್ರಪತಿಗಳು ತಜ್ಞರ ಸಮಿತಿ ರಚಿಸುತ್ತಾರೆ. ಆ ಸಮಿತಿ ನೀಡುವ ವರದಿ ಆಧರಿಸಿ ರಾಷ್ಟ್ರಪತಿಗಳು ಹೊಸ ಸೂತ್ರ ರೂಪಿಸಲಿದ್ದಾರೆ. ಇದರಿಂದಲೂ ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ನ್ಯಾಯ ಸಿಗುತ್ತದೆ. ಈ ಎರಡು ಮಾರ್ಗಗಳನ್ನು ಬಿಟ್ಟರೆ ಕಾವೇರಿ ವಿಚಾರವಾಗಿ ಕರ್ನಾಟಕಕ್ಕೆ ನ್ಯಾಯ ಎಂದೆಂದಿಗೂ ಸಿಗುವುದಿಲ್ಲ ಎಂದು ತಿಳಿಸಿದರು.

ಕಾನೂನಿನ ಸೂಕ್ಷ್ಮತೆಯನ್ನು ಅವಲೋಕಿಸುವುದಾದರೆ ಸಂವಿಧಾನದ ಪರಿಚ್ಛೇದ 262ರ ಪ್ರಕಾರ ನದಿ ನೀರು ವಿವಾದವನ್ನು ಬಗೆಹರಿಸುವ ಅಧಿಕಾರ ಸುಪ್ರೀಂಕೋರ್ಟ್ ಆಗಲಿ ಅಥವಾ ನ್ಯಾಯಾಧೀಕರಣಕ್ಕೆ ಇಲ್ಲ. ಕರ್ನಾಟಕದ ಕಾವೇರಿ ಜಲಾಯನ ಪ್ರದೇಶದಲ್ಲಿ ಕೃಷಿ ವಿಸ್ತರಣೆ ಮಾಡದಂತೆ 1971ರ ಆಗಸ್ಟ್‌ನಲ್ಲಿ ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತು. ಆಗಲೇ ಸಂವಿಧಾನದ ಪರಿಚ್ಛೇದ 262 ಪ್ರಕಾರ ನದಿ ವಿವಾದ ಬಗೆಹರಿಸುವ ಅಧಿಕಾರ ನ್ಯಾಯಾಲಯಕ್ಕೆ ಇಲ್ಲ ಎಂದು ಕರ್ನಾಟಕ ಸಮರ್ಥವಾದ ಮಾಡಿದ್ದರೆ ಪ್ರಾಯಶಃ ಇಂದು ನ್ಯಾಯಾಲಯದ ಆದೇಶದಂತೆ ತಮಿಳುನಾಡು ಕೇಳಿದಷ್ಟು ನೀರು ಬಿಡುವ ಪರಿಸ್ಥಿತಿಯೇ ಬರುತ್ತಿರಲಿಲ್ಲ ಎಂದರು.

1983ರಲ್ಲಿ ತಮಿಳುನಾಡಿನ ಮುನ್ನಾಗುಡಿ ರಂಗನಾಥ್ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿ, ಕಾವೇರಿ ನ್ಯಾಯಾಧೀಕರಣ ರಚನೆ ಮಾಡುವಂತೆ ಮನವಿ ಮಾಡಿದರು. ಆಗ ಸುಪ್ರೀಂಕೋರ್ಟ್ ತಮಿಳುನಾಡಿನ ಕೋರಿಕೆಯ ಪುರಸ್ಕರಿಸಿತು. ಆದರೆ 1989ರಲ್ಲಿ ತಮಿಳುನಾಡಿನ ಬೆಂಬಲದೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಪ್ರಧಾನಮಂತ್ರಿ ವಿ.ಪಿ.ಸಿಂಗ್ ನೇತೃತ್ವದ ಸರ್ಕಾರ ಸುಪ್ರೀಂಕೋರ್ಟ್ ಆದೇಶದಂತೆ ಕಾವೇರಿ ನ್ಯಾಯಾಧೀಕರಣ ಸ್ಥಾಪನೆ ಮಾಡಿತು ಎಂದು ತಿಳಿಸಿದರು. ನದಿ ನೀರು ವಿವಾದ ಬಗೆಹರಿಸಲು ನ್ಯಾಯಾಧೀಕರಣ ಸ್ಥಾಪನೆ ಅಸಂವಿಧಾನಿಕ ಎಂದು ನಮ್ಮ ಕರ್ನಾಟಕದ ಪರ ವಕೀಲರು ವಾದ ಮಾಡಲಿಲ್ಲ. ತರುವಾಯ ಕಾವೇರಿ ನ್ಯಾಯಾಧೀಕರಣವು ತಮಿಳುನಾಡಿಗೆ 252 ಟಿಎಂಸಿ ನೀರು ಬಿಡುವಂತೆ ಮಧ್ಯಂತರ ಆದೇಶ ನೀಡಿತು. ಆಗಲೂ ಕೂಡ ನಮ್ಮ ವಕೀಲರಾಗಿದ್ದವರು ಸಮರ್ಥ ವಾದ ಮಾಡದೆ ಹಲವು ತಪ್ಪು ಎಸಗಿದರು ಎಂದು ಆರೋಪಿಸಿದರು.

ನಂತರ ಕಾವೇರಿ ನ್ಯಾಯಾಧೀಕರಣವು ಅಂತಿಮ ಆದೇಶ ನೀಡಿತು. 740 ಟಿಎಂಸಿ ಕಾವೇರಿ ನೀರಿನಲ್ಲಿ ಕರ್ನಾಟಕಕ್ಕೆ 284 ಟಿಎಂಸಿ, ತಮಿಳುನಾಡಿಗೆ 404 ಟಿಎಂಸಿ, ಕೇರಳಗೆ 103 ಟಿಎಂಸಿ ಹಾಗೂ ಪಾಂಡಿಚೇರಿಗೆ 7 ಟಿಎಂಸಿ ನೀರು ಹಂಚಿಕೆ ಮಾಡಿತು ಎಂದು ಅರ್ಜುನಹಳ್ಳಿ ಪ್ರಸನ್ನಕುಮಾರ್ ಅಂಕಿ ಅಂಶಗಳ ಸಮೇತ ಮಾಹಿತಿ ನೀಡಿದರು.

ಕಾವೇರಿ ನ್ಯಾಯಾಧೀಕರಣದ ಆದೇಶ ಪ್ರಶ್ನಿಸಿ ನಮ್ಮ ರಾಜ್ಯದ ಹಿಂದಿನ ಸರ್ಕಾರಗಳು ಸುಪ್ರೀಂಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲಿಲ್ಲ. ಇದು ಅಂದಿನ ಎರಡು ಸರ್ಕಾರ ಮಾಡಿದ ದೊಡ್ಡ ಪ್ರಮಾದ ಎಂದರು. ನ್ಯಾಯಾಧೀಕರಣದಿಂದ ನೀರು ಹಂಚಿಕೆ ಆದೇಶದ ತರುವಾಯ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಸುಪ್ರೀಂಕೋರ್ಟ್ ಕಾಲಾವಕಾಶ ನೀಡಿತು. ಆದರೆ ಕರ್ನಾಟಕ ಸರ್ಕಾರ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸದ ಕಾರಣ ಆರು ತಿಂಗಳು ಕಾದ ಸುಪ್ರೀಂಕೋರ್ಟ್ ಅಂತಿಮವಾಗಿ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ನದಿ ನೀರು ನಿಯಂತ್ರಣ ಮಂಡಳಿ ರಚನೆ ಮಾಡಿತು. ಇದು ಅಂದಿನ ಸರ್ಕಾರದ ಮತ್ತೊಂದು ತಪ್ಪು ಎಂದು ಆಪಾದಿಸಿದರು.

ಪ್ರಾಧಿಕಾರ ಮತ್ತು ಮಂಡಳಿಗೆ ಕರ್ನಾಟಕದ ಪ್ರತಿನಿಧಿ ನೇಮಕಕ್ಕೆ ಶಿಫಾರಸು ಮಾಡುವಂತೆ ಸುಪ್ರೀಂಕೋರ್ಟ್ ಸೂಚಿಸಿತು. ಪ್ರಾಧಿಕಾರ ಹಾಗೂ ಮಂಡಳಿಯಲ್ಲಿ 9 ಸದಸ್ಯರಿದ್ದು, ಕರ್ನಾಟಕದ ಒಬ್ಬರೇ ಪ್ರತಿನಿಧಿ ಇರುತ್ತಾರೆ. ಒಬ್ಬ ಪ್ರತಿನಿಧಿಯಿಂದ ಸಮರ್ಥ ವಾದ ಮಾಡಲು ಕಷ್ಟವಾಗುವ ಕಾರಣ ಇದನ್ನು ಒಪ್ಪುವುದಿಲ್ಲ ಎಂದು ಕರ್ನಾಟಕ ತಕರಾರು ಕೂಡ ಸಲ್ಲಿಸಲಿಲ್ಲ. ಬದಲಿಗೆ ಪ್ರಾಧಿಕಾರ ಹಾಗೂ ಮಂಡಳಿಗೆ ಒಬ್ಬ ಪ್ರತಿನಿಧಿ ನೇಮಕ ಮಾಡಿತು. ಇದರಿಂದ ನ್ಯಾಯಾಲಯ ಅಂತಿಮವಾಗಿ ಪ್ರಾಧಿಕಾರ ಹಾಗೂ ಮಂಡಳಿ ರಚನೆ ಮಾಡಿ ಕೈ ತೊಳೆದುಕೊಂಡಿತು. ಇದು ಸರ್ಕಾರದ ಇನ್ನೊಂದು ತಪ್ಪು ಎಂದು ಆರೋಪಿಸಿದರು.

ಕಾವೇರಿ ವಿಚಾರವಾಗಿ ಹತ್ತಾರು ವರ್ಷದಿಂದ ಕರ್ನಾಟಕ ಸರ್ಕಾರ ಇಂತಹ ಹಲವು ತಪ್ಪು ಮಾಡುತ್ತಾ ಬಂದಿರುವ ಕಾರಣ ಇವತ್ತು ಕಾವೇರಿ ವಿಚಾರದಲ್ಲಿ ನಮಗೆ ನ್ಯಾಯ ಸಿಗುತ್ತಿಲ್ಲ ಎಂದು ಪ್ರಸನ್ನಕುಮಾರ್ ಬೇಸರ ವ್ಯಕ್ತಪಡಿಸಿದರು.


ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಉಪಾಧ್ಯಕ್ಷ ಅನುರಾಗ್ ಬಸವರಾಜ್, ರಾಜ್ಯ ಸಮಿತಿ ಸದಸ್ಯ ರಾಘವೇಂದ್ರ ಪತ್ರಿಕಾ ಸಂವಾದದಲ್ಲಿ ಉಪಸ್ಥಿತರಿದ್ದರು.

ಅರ್ಜುನಹಳ್ಳಿ ಪ್ರಸನ್ನಕುಮಾರ್ ಕಿರು ಪರಿಚಯ

ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್ ಮೂಲತಃ ಮೈಸೂರು ಜಿಲ್ಲೆ ಕೆಆರ್.ನಗರ ತಾಲೂಕಿನ ಅರ್ಜುನಹಳ್ಳಿಯವರು. ವಿಜ್ಞಾನ ಪದವೀಧರರಾದ ಇವರು ಕೃಷಿಕರಾಗಿದ್ದಾರೆ. ಹತ್ತು ಎಕರೆ ಜಮೀನು ಹೊಂದಿರುವ ಪ್ರಸನ್ನಕುಮಾರ್, ಭತ್ತ ಮತ್ತು ಕಬ್ಬು ಬೆಳೆಯುತ್ತಾರೆ. ಇವರ ಒಬ್ಬಳೇ ಮಗಳು ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ ರಾಜರ ಕಾಲದಲ್ಲಿ ಆಗಿರುವ ಒಪ್ಪಂದ, ತರುವಾಯ ಸುಪ್ರೀಂಕೋರ್ಟ್ ನೀಡಿರುವ ಆದೇಶಗಳು, ನ್ಯಾಯಾಧೀಕರಣದ ರಚನೆ, ಕರ್ನಾಟಕ ಮತ್ತು ತಮಿಳುನಾಡಿನ ವಕೀಲರ ವಾದ–ಪ್ರತಿವಾದ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಅಪಾರ ತಿಳುವಳಿಕೆ ಹೊಂದಿದ್ದಾರೆ. ಕಾವೇರಿ ಜಲ ವಿವಾದ ಮತ್ತು ಕಾವೇರಿ ಕಣಿವೆಗೆ ನೀರು ಎಂಬ ಎರಡು ಪುಸ್ತಕ ಕೂಡ ಬರೆದಿದ್ದಾರೆ.

ಕಾವೇರಿ ವಿಚಾರವಾಗಿ ಮೂರು ಪಕ್ಷದ ರಾಜಕಾರಣಿಗಳ ಬಗ್ಗೆ ನಿಷ್ಠೂರವಾಗಿ ಮಾತನಾಡುವ ಕಾರಣ ಸರ್ಕಾರ ಇವರಿಂದ ಈ ತನಕ ಯಾವುದೇ ಸಲಹೆ ಪಡೆದಿಲ್ಲ. ಬದಲಿಗೆ ಹಲವು ಸಂದರ್ಭಗಳಲ್ಲಿ ಪ್ರಸನ್ನಕುಮಾರ್ ಅವರು ಹೆಚ್.ಡಿ. ದೇವೇಗೌಡರು, ಸಿದ್ದರಾಮಯ್ಯ, ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ತಮ್ಮ ಸಲಹೆ ನೀಡಿದ್ದಾರೆ. 1924ರಲ್ಲಿ ಮೈಸೂರು ಮಹಾರಾಜರು ಹಾಗೂ ತಮಿಳುನಾಡಿನ ನಡುವೆ ಆದ ಒಪ್ಪಂದ 50 ವರ್ಷದ ತನಕ ಚಾಲ್ತಿಯಲ್ಲಿತ್ತು. ಆದರೆ ಈಗ ಕಾವೇರಿ ನ್ಯಾಯಾಧೀಕರಣ ತೀರ್ಪು ಶಾಶ್ವತವಾಗಿ ಚಾಲ್ತಿಯಲ್ಲಿರುತ್ತದೆ ಎಂದು ಹೇಳಿದ್ದಾರೆ.



ಕಾವೇರಿ ಜಲಾಯನ ಪ್ರದೇಶದ ನದಿ ತೀರದಲ್ಲಿ ಹುಳುಮೆ ಮಾಡುವುದನ್ನು ನಿಲ್ಲಿಸಬೇಕು, ಮರಳು ಗಣಿಗಾರಿಕೆ ಸ್ಥಗಿತಗೊಳಿಸಬೇಕು, ನದಿ ತೀರದ ಸುತ್ತ ಕಟ್ಟೆ ಕಟ್ಟಿ ನೀರು ಶೇಖರಣೆ ಹೆಚ್ಚಿಸಬೇಕು, ಹೆಚ್ಚು ಮರಗಳನ್ನು ಬೆಳೆಸಬೇಕು. ಇದರಿಂದ ಕಾವೇರಿ ನೀರನ್ನು ಕರ್ನಾಟಕದ ಜನರು ಹೆಚ್ಚಾಗಿ ಬಳಸಲು ಅನುಕೂಲವಾಗುತ್ತದೆ. ಮಳೆ ಬಾರದ ಸಂಕಷ್ಟ ಸಮಯದಲ್ಲಿ ಇದರಿಂದ ಅನುಕೂಲವಾಗುತ್ತದೆ ಎಂದು ಪ್ರಸನ್ನ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಅಪರಾಧಿಗಳು

ಪಕ್ಷದ ಸರ್ಕಾರಗಳು ಕಿಂಚಿತ್ತೂ ಮುತುವರ್ಜಿ ವಹಿಸಲಿಲ್ಲ ಎಂದರು. ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್‌ನವರು ಪಾದಯಾತ್ರೆ ಮಾಡಿದರು. ಈಗ ಅವರದೇ ಪಕ್ಷದ ಸರ್ಕಾರವಿದೆ. ಆದರೆ ನನ್ನ ಪ್ರಕಾರ ಮೇಕೆದಾಟು ಯೋಜನೆ ಅಸಾಧ್ಯ. ಇದು ರಾಜಕೀಯ ಪಕ್ಷದ ನಾಯಕರಿಗೂ ಗೊತ್ತಿದೆ. ಆದರೆ ರಾಜಕೀಯ ಲಾಭಕ್ಕಾಗಿ ಹೇಳಿಕೆ ಕೊಡುತ್ತಾರೆ ಎಂದು ಆರೋಪಿಸಿದರು.

ಮೇಕೆದಾಟು ಸಂರಕ್ಷಿತ ಅರಣ್ಯ ಪ್ರದೇಶದಲ್ಲಿರುವ ಕಾರಣ ಅಣೆಕಟ್ಟು ನಿರ್ಮಾಣ ಮಾಡಲು ಹಸಿರು ನ್ಯಾಯಾಧೀಕರಣ ಅನುಮತಿ ನೀಡುವ ಸಾಧ್ಯತೆ ಇಲ್ಲ. ಜೊತೆಗೆ ಅಣೆಕಟ್ಟು ನಿರ್ಮಾಣ ಮಾಡುವ ಜಾಗದಲ್ಲಿ ನೀರಿನ ತಳ ಗಟ್ಟಿಯಾಗಿಲ್ಲ. ಇದರಿಂದ ಅಲ್ಲಿ ಮೇಕೆದಾಟು ಅಣೆಕಟ್ಟು ನಿರ್ಮಾಣ ಮಾಡಲು ಕಷ್ಟ ಎಂದು ಅಭಿಪ್ರಾಯಪಟ್ಟರು. ಮೇಕೆದಾಟು ಯೋಜನೆ ಬಗ್ಗೆ ತಮಿಳುನಾಡು ತಕರಾರು ತೆಗೆದಾಗ, ನಿಮ್ಮ ಗಮನಕ್ಕೆ ತಾರದೆ ಈ ಯೋಜನೆ ಕೈಗೆತ್ತಿಕೊಳ್ಳುವುದಿಲ್ಲ ಎಂದು ನಮ್ಮ ವಕೀಲರು ಸುಪ್ರೀಂಕೋರ್ಟ್‌ಗೆ ಹೇಳಿದ್ದಾರೆ. ಇದರಿಂದ ತಮಿಳುನಾಡು ಕೂಡ ಕ್ಯಾತೆ ತೆಗೆಯುವ ಸಾಧ್ಯತೆ ಇದೆ. ಈ ಎಲ್ಲಾ ಕಾರಣದಿಂದ ಮೇಕೆದಾಟು ಯೋಜನೆ ಅನುಷ್ಠಾನ ಕಷ್ಟ ಎಂದು ಪ್ರಸನ್ನಕುಮಾರ್ ತಿಳಿಸಿದರು.

ಕರ್ನಾಟಕಕ್ಕೆ ಅನ್ಯಾಯವಾಗಲು ನಾವೇ ಕಾರಣ

ತಮಿಳುನಾಡಿನಲ್ಲಿ ಜನ ಜಾನುವಾರುಗಳ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ಹೆಚ್ಚಿನ ನೀರಿನ ಅವಶ್ಯಕತೆ ಇದೆ ಎಂದು ತಮಿಳುನಾಡು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದಾಗ ನಮ್ಮವರು ಆಕ್ಷೇಪ ಸಲ್ಲಿಸದೆ ಮೌನವಾಗಿದ್ದರು ಎಂದರು. ಒಂದು ಬಾರಿ ಇದೇ ರೀತಿಯ ಮಳೆ ಬಾರದೆ ಕೆಆರ್‌ಎಸ್, ಕಬಿನಿ ಜಲಾಶಯದಲ್ಲಿ ನೀರಿನ ಪ್ರಮಾಣ ಕುಸಿದಿತ್ತು. ಆ ವೇಳೆ ಕೇವಲ 20 ಟಿಎಂಸಿ ನೀರಾದರೂ ಕೊಡಿಸಿ ಎಂದು ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ಗೆ ಮನವಿ ಮಾಡಿತು. ನಮ್ಮ ಜಲಾಶಯ ಬತ್ತಿ ಹೋಗುತ್ತಿದೆ ನೀರು ಬಿಡಲು ಆಗುವುದಿಲ್ಲ ಎಂದು ನಮ್ಮವರು ವಾದ ಮಾಡದೆ, 5 ಟಿಎಂಸಿ ನೀರು ಕೊಡುತ್ತೇವೆ ಎಂದು ಸುಪ್ರೀಂಕೋರ್ಟ್‌ನಲ್ಲಿ ಒಪ್ಪಿಕೊಂಡರು. ಈ ವಿಚಾರ ಅಂದಿನ ನಮ್ಮ ಮುಖ್ಯಮಂತ್ರಿ ಅವರಿಗೇ ಗೊತ್ತಿರಲಿಲ್ಲ. ಸರ್ಕಾರದ ಗಮನಕ್ಕೆ ತಾರದೆ ಸುಪ್ರೀಂಕೋರ್ಟ್‌ನಲ್ಲಿ 5 ಟಿಎಂಸಿ ನೀರು ಬಿಡುವುದಾಗಿ ನಮ್ಮ ಪರ ವಾದಿಸುವವರು ಏಕಪಕ್ಷೀಯವಾಗಿ ಸಮ್ಮತಿ ಸೂಚಿಸಿದರು. ತರುವಾಯ ಸುಪ್ರೀಂಕೋರ್ಟ್ 13 ಟಿಎಂಸಿ ನೀರು ಬಿಡುವಂತೆ ಆದೇಶ ನೀಡಿತು. ಆದರೆ ಆಗ 16 ಟಿಎಂಸಿ ನೀರು ತಮಿಳುನಾಡಿಗೆ ಹರಿದು ಹೋಯಿತು ಎಂದು ಅರ್ಜುನಹಳ್ಳಿ ಪ್ರಸನ್ನಕುಮಾರ್ ತಿಳಿಸಿದರು. ಇಂತಹ ಹತ್ತು ಹಲವು ತಪ್ಪುಗಳಿಂದ ಇವತ್ತು ಕರ್ನಾಟಕಕ್ಕೆ ಕಾವೇರಿ ವಿಚಾರದಲ್ಲಿ ಅನ್ಯಾಯವಾಗುತ್ತಿದೆ ಎಂದು ಆಪಾದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

'ರಾಮ ಸೇತು' ಸ್ಮಾರಕ ಘೋಷಣೆ: ಅರ್ಜಿ ತಿರಸ್ಕರಿಸಿದ ಸುಪ್ರೀಂ



ನವದೆಹಲಿ: ರಾಮ ಸೇತುವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ಸುಪ್ರೀಂಕೋರ್ಟ್ ಮಂಗಳವಾರ ನಿರಾಕರಿಸಿದೆ. ಸ್ಮಾರಕ ಘೋಷಣೆ ಜೊತೆಗೆ ಆ ಸ್ಥಳದ ಸಂರಕ್ಷಣೆಗೆ ಗೋಡೆ ನಿರ್ಮಿಸಬೇಕೆಂದು ಕೋರಿ ಹಿಂದೂ ವೈಯಕ್ತಿಕ ಕಾನೂನು ಮಂಡಳಿಯ ಅಧ್ಯಕ್ಷ ಅಶೋಕ್ ಪಾಂಡೆ ಅರ್ಜಿ ಸಲ್ಲಿಸಿದ್ದರು.

ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠ, ಇದು ಸರ್ಕಾರಕ್ಕೆ ಸಂಬಂಧಿಸಿದ ವಿಷಯವಾಗಿದೆ ಹಾಗಾಗಿ, ನ್ಯಾಯಾಲಯವು ಇದರಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಸ್ಪಷ್ಟಪಡಿಸಿತು.

ರಾಮ ಸೇತುವನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವೆಂದು ಘೋಷಿಸುವಂತೆ ಬಿಜೆಪಿ ನಾಯಕ ಸುಬ್ರಮಣಿಯನ್‌ಸ್ವಾಮಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಬಾಕಿ ಇರುವ ಬಗ್ಗೆ ಪಾಂಡೆ, ನ್ಯಾಯಪೀಠದ ಗಮನಕ್ಕೆ ತಂದರು. ಆ ಸ್ಥಳದ ಸುರಕ್ಷತೆಗಾಗಿ ಗೋಡೆ ನಿರ್ಮಿಸ ಬೇಕಿದೆ ಎಂದು ವಾದಿಸಿದರು.

ರಾಮ ಸೇತುವಿನ ಎರಡೂ ಕಡೆಯಲ್ಲಿ ಗೋಡೆ ನಿರ್ಮಾಣ ಸಾಧ್ಯವೇ? ನ್ಯಾಯಾಲಯದಿಂದ ಈ ಕೆಲಸ ಆಗುತ್ತದೆಯೇ, ಅದು ಸರ್ಕಾರದ ಕೆಲಸ ಎಂದ ನ್ಯಾಯಪೀಠವು, ಸುಬ್ರಮಣಿಯನ್ ಸ್ವಾಮಿಯ ಅರ್ಜಿಯೊಟ್ಟಿಗೆ ಈ ಅರ್ಜಿಯನ್ನೂ ಪರಿಗಣಿಸಲು ಕೋರ್ಟ್ ನಿರಾಕರಿಸಿತು.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಅ. 3–ವೀರಶೈವ ಲಿಂಗಾಯತ ಜಾತಿ ಹಾಗೂ ಉಪ ಜಾತಿಗೆ ಸೇರಿದ ಸಮುದಾಯದ ಜನರ (ಪ್ರವರ್ಗ –III©) ಅಭಿವೃದ್ಧಿಗಾಗಿ 2023–24ನೇ ಸಾಲಿನಲ್ಲಿ ಅನುಷ್ಠಾನಗೊಂಡಿರುವ ಶೈಕ್ಷಣಿಕ ಸಾಲ ಯೋಜನೆಗಳು, ಜೀವಜಲ ಯೋಜನೆ, ಕಾಯಕ ಕಿರಣ ಯೋಜನೆ, ಭೋಜನಾಲಯ ಕೇಂದ್ರ ವಿಭೂತಿ ನಿರ್ಮಾಣ ಘಟಕ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಅ.30 ಕೊನೇ ದಿನ. ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ https://kvldcl.Karnataka.govt.in ಅಥವಾ ದೂ.ಸಂ. 080–22865522, 9900012351 ಅಥವಾ ಜಿಲ್ಲಾ ಕಚೇರಿಯ ದೂ.ಸಂಖ್ಯೆ 0821–2341194 ಸಂಪರ್ಕಿಸಬಹುದು.



ಮೈಸೂರು ನಗರಪಾಲಿಕೆ 23ನೇ ವಾರ್ಡಿನಲ್ಲಿರುವ ತಮ್ಮಯ್ಯನ ಮಠ ರಸ್ತೆಯಲ್ಲಿ ವಿನಾಯಕ ಯುವಕರ ಬಳಗದ ವತಿಯಿಂದ ನಿವಾಸಿಗಳಿಗೆ ಏರ್ಪಡಿಸಿದ್ದ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.



ಸಂಜೀವಿನಿ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ಮೈಸೂರಿನ ಹೆಬ್ಬಾಳು 1ನೇ ಹಂತದಲ್ಲಿರುವ ಬಸವೇಶ್ವರ ಪಾರ್ಕ್‌ನಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು. ಈ ವೇಳೆ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಸಸಿ ನೆಟ್ಟು, ಸ್ವಚ್ಛತಾ ಕಾರ್ಯ ನಡೆಸಲಾಯಿತು. ಸಮಿತಿ ಗೌರವಾಧ್ಯಕ್ಷರೂ ಆದ ಕಾರ್ಪೊರೇಟರ್ ಪೈ. ಶ್ರೀನಿವಾಸ್, ಅಧ್ಯಕ್ಷ ಎಂ.ಕುಮಾರ್, ಸಮಿತಿ ಪದಾಧಿಕಾರಿಗಳು, ನಿರ್ದೇಶಕರು, ಸದಸ್ಯರು, ಹಿರಿಯ ನಾಗರಿಕರು, ಮುಖಂಡರು, ಯುವಕರು ಉಪಸ್ಥಿತರಿದ್ದರು.

ಮೈಸೂರು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಲ್ಲಿ 'ಗಾಂಧಿ ಜಯಂತಿ'



ಮೈಸೂರು,ಅ.3–ಮೈಸೂರು ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಸಾಂಸ್ಕೃತಿಕ ವೇದಿಕೆ ವತಿಯಿಂದ ಗಾಂಧೀಜಿಯವರ 154ನೇ ಜಯಂತಿಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ, ಸಾಹಿತಿ ಡಾ.ವಿನೋದಮ್ಮ ವಠಾತನಾಡಿ, ಗಾಂಧೀಜಿಯವರ ಜೀವನ ಮತ್ತು ಸಾಧನೆ ಕುರಿತು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅನಿತಾ ಅಧ್ಯಕ್ಷತೆ ವಹಿಸಿದ್ದರು. ನಿಕಟ ಪೂರ್ವ ಪ್ರಾಂಶುಪಾಲರಾದ ಪ್ರೊ.ಮಹದೇವಸ್ವಾಮಿ, ಸಂಚಾಲಕರಾದ ಪ್ರೊ.ರಶ್ಮಿ ಚೆನ್ನಯ್ಯ, ಖಜಾಂಚಿ ಪ್ರೊ.ಡಿ. ಸುಮಂಗಲ, ಎಲ್ಲಾ ವಿಭಾಗದ ಅಧ್ಯಾಪಕರು, ಕಚೇರಿ ಸಿಬ್ಬಂದಿ ಹಾಗೂ ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಕರಾಟೆ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



ಮೈಸೂರು,ಅ.3–ನಗರದ ಜ್ಞಾನೋದಯ ಪದವಿ ಪೂರ್ವ ವಿದ್ಯಾರ್ಥಿಗಳಾದ ಕಶ್ವಿ ಸುರೇಶ್ (60 ಕೆಜಿ ವಿಭಾಗ) ಹಾಗೂ ರಿವಾ ಮಾನ್ಯ (68 ಕೆಜಿ ವಿಭಾಗ) ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಆಯೋಜಿಸಿದ್ದ ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕರಾಟೆ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿ ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ರಫತ್ ಖಾನ್ ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ



ಮೈಸೂರು,ಅ.3–ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ ರಾಜ್ಯ ಸಮಿತಿಗೆ ಮೈಸೂರು ಜಿಲ್ಲಾ ಎಸ್‌ಡಿಪಿಐ ಅಧ್ಯಕ್ಷ ರಫತ್ ಖಾನ್ ನಾಮನಿರ್ದೇಶಿತ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಇವರು ಮೈಸೂರು ಜಿಲ್ಲೆಯಲ್ಲಿ ಎಸ್‌ಡಿಪಿಐ ಪಕ್ಷವನ್ನು ಅತ್ಯುತ್ತಮವಾಗಿ ಸಂಘಟನೆ ಮಾಡಿದ್ದಾರೆ. ಅವರ ಬದ್ಧತೆ, ಪ್ರಾಮಾಣಿಕತೆ ಮತ್ತು ಕ್ರಿಯಾಶೀಲತೆ ಗುರುತಿಸಿ ರಾಜ್ಯ ಸಮಿತಿಗೆ ಆಯ್ಕೆ ಮಾಡಲಾಗಿದೆ.

ಅ.6ರಂದು ಬಾನುಲಿ ಕೃಷಿ ಬೆಳಗು

ಮೈಸೂರು, ಅ.3–ಆಕಾಶವಾಣಿ ಮೈಸೂರು, ಕೃಷಿ ಇಲಾಖೆ ಮೈಸೂರು, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಸಾವಯವ ಕೃಷಿ ಸಂಶೋಧನಾ ಕೇಂದ್ರ, ವಿಸ್ತರಣಾ ಶಿಕ್ಷಣ ಘಟಕ ನಾಗನಹಳ್ಳಿ, ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ.ಫಾರಂ ಮಂಡ್ಯ, ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಾಂ.ಸ.ಸಾ. ಕೃಷಿ ಸಂಘಗಳ ಒಕ್ಕೂಟ, ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್ ಆರ್ಗನೈಜೇಷನ್ ಮೈಸೂರು ವತಿಯಿಂದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮ, 'ಹಣ್ಣು ಹೊನ್ನು' ಬಾನುಲಿ ಸರಣಿಯ ಕ್ಷೇತ್ರ ತರಬೇತಿ ಕಾರ್ಯಾಗಾರವನ್ನು ಅ.6ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನ ಕಾಳೇನಹಳ್ಳಿಯ ದೇವಿರಮ್ಮ ಮತ್ತು ಕೆ.ಜೆ.ಪುಟ್ಟಸ್ವಾಮಿಗೌಡರ ಮೂಡಲಗಿರಿ ತೋಟದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ತೋಟಗಾರಿಕೆ ಇಲಾಖೆ ಜಂಟಿ ಕೃಷಿ ನಿರ್ದೇಶಕ ಹೆಚ್.ಎಂ.ನಾಗರಾಜ್ ನೆರವೇರಿಸಲಿದ್ದು, ಆಕಾಶವಾಣಿ ಸಹಾಯಕ ನಿರ್ದೇಶಕ ಎಸ್.ಎಸ್.ಉಮೇಶ್ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಅ.8, ದಸರಾ ನಾಡಕುಸ್ತಿಗೆ ಜೋಡಿ ಕಟ್ಟುವ ಕಾರ್ಯ



ಮೈಸೂರು ದಸರಾ ಕುಸ್ತಿ ಉಪ ಸಮಿತಿ ಉಪವಿಶೇಷಾಧಿಕಾರಿಯಾದ ಎಎಸ್ಪಿ ನಂದಿನಿ ಅಧ್ಯಕ್ಷತೆಯಲ್ಲಿ ಮಂಗಳವಾರ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು,ಅ.3(ಎಸ್‌ಬಿಡಿ)– ದಸರಾ ನಾಡಕುಸ್ತಿಗೆ ಅ.8ರಂದು ಜೋಡಿ ಕಟ್ಟಲು ದಸರಾ ಕುಸ್ತಿ ಉಪ ಸಮಿತಿ ನಿರ್ಧರಿಸಿದೆ.

ದಸರಾ ಕುಸ್ತಿ ಉಪ ಸಮಿತಿ ಉಪ ವಿಶೇಷಾಧಿಕಾರಿಯಾದ ಎಎಸ್ಪಿ ನಂದಿನಿ ಅವರ ಅಧ್ಯಕ್ಷತೆಯಲ್ಲಿ ಎಸ್ಪಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಈ ಸಂಬಂಧ ಪ್ರತಿಕ್ರಿಯಿಸಿದ ಎಎಸ್ಪಿ ನಂದಿನಿ, ಅ.15ರಂದು ದಸರಾ ಕುಸ್ತಿ ಪಂದ್ಯಾವಳಿಗೆ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದು, ಹಲವು ಗಣ್ಯರು ಭಾಗವಹಿಸಲಿದ್ದಾರೆ. ಅಂದಿನಿಂದ 7 ದಿನಗಳ ಕಾಲ ನಾಡಕುಸ್ತಿ, ಪಾಯಿಂಟ್ ಕುಸ್ತಿ, ಪಂಜ ಕುಸ್ತಿ ಪಂದ್ಯಾವಳಿ ನಡೆಯಲಿವೆ. ಮುಖ್ಯ ಅತಿಥಿಯಾಗಿ ಕ್ರೀಡಾಪಟುವನ್ನು ಆಹ್ವಾನಿಸುವ ಸಂಬಂಧ ಚರ್ಚೆ ಮಾಡಲಾಗುವುದು ಎಂದು ತಿಳಿಸಿದರು.

ನಾಡಕುಸ್ತಿಗೆ ಜೋಡಿ ಕಟ್ಟುವ ಕಾರ್ಯವನ್ನು ಅ.8ರಂದು ಕರ್ನಾಟಕ ವಸ್ತು ಪ್ರದರ್ಶನ ಆವರಣದಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮಕ್ಕೆ ಉಸ್ತುವಾರಿ ಸಚಿವರು ಹಾಗೂ ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ಕುಸ್ತಿಪಟುಗಳು ಅಂದು ಆಯ್ಕೆ ಸಮಿತಿ ಮುಂದೆ ಹಾಜರಾಗಿ ಜೊತೆಗಳನ್ನು ನಿಗದಿಪಡಿಸಿಕೊಳ್ಳಬಹುದು ಎಂದರು.

ಸಂಭಾವನೆ ಹೆಚ್ಚಳಕ್ಕೆ ಮನವಿ: ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಕುಸ್ತಿಪಟುಗಳಿಗೆ ನೀಡಲಾಗುವ ಗೌರವ ಸಂಭಾವನೆಯನ್ನು ಹೆಚ್ಚಳ ಮಾಡಬೇಕೆಂದು ಹಲವರು ಮನವಿ ಮಾಡಿದ್ದಾರೆ. ಈ ಬಗ್ಗೆ ದಸರಾ ವಿಶೇಷಾಧಿಕಾರಿಗಳಾದ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು, ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಸಾಹಸ ಪ್ರದರ್ಶನಕ್ಕೆ ಆಗ್ರಹ: ಈ ಬಾರಿ ಕುಸ್ತಿ ಪಂದ್ಯಾವಳಿ ಭಾಗವಾಗಿ ಗುಂಡು ಕಲ್ಲು ಎತ್ತುವುದು, ಬಸ್ಕಿ ಸ್ಪರ್ಧೆ ಇನ್ನಿತರ ಸಾಹಸ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದಾರೆ. ಇದಕ್ಕೆ ಸಾಕಷ್ಟು ಮುಂಜಾಗ್ರತಾ ಕ್ರಮ ಕೈಗೊಳ್ಳುವ ಅಗತ್ಯವಿದೆ. ಅಲ್ಲದೆ ಮೊದಲ ಬಾರಿ ಆಯೋಜಿಸುವಾಗ ಸಾಕಷ್ಟು ತಯಾರಿ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಮುಂದಿನ ಸಭೆಯಲ್ಲಿ ಚರ್ಚೆ ಮಾಡಲಾಗುವುದು ಎಂದರು.

ಸಭೆಯಲ್ಲಿ ಹಲವು ಗರಡಿ ಸಂಘಗಳ ಪದಾಧಿಕಾರಿಗಳು ಭಾಗವಹಿಸಿ, ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಯಾವುದೇ ಲೋಪದೋಷವಾಗದಂತೆ ವ್ಯವಸ್ಥಿತವಾಗಿ ನಿಯಮಾನುಸಾರ ಕುಸ್ತಿ ಪಂದ್ಯಾವಳಿ ನೆರವೇರಿಸುವ ನಿಟ್ಟಿನಲ್ಲಿ ಚರ್ಚೆಯಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ರೀತಿಯ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗುತ್ತಿದೆ ಎಂದರು. ದಸರಾ ಕುಸ್ತಿ ಉಪ ಸಮಿತಿ ಕಾರ್ಯದರ್ಶಿಯಾದ ಅಬಕಾರಿ ಉಪ ಆಯುಕ್ತ ರವಿಶಂಕರ್, ಕಾರ್ಯಾಧ್ಯಕ್ಷರಾದ ನಂಜನಗೂಡು ಡಿವೈಎಸ್ಪಿ ಗೋವಿಂದರಾಜು, ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಮಹದೇವ್ ವೇದಿಕೆಯಲ್ಲಿದ್ದರು. ಜಿಲ್ಲಾ ಭಾರತೀಯ ಶೈಲಿ ಕುಸ್ತಿ ಸಂಘದ ಅಮೃತ್ ಪುರೋಹಿತ್, ಮೈಸೂರು ಜಿಲ್ಲಾ ಕುಸ್ತಿ ಸಂಘ ಸೇರಿದಂತೆ ಹಲವು ಗರಡಿ ಸಂಘಗಳ ಸುಮಾರು 70 ಮಂದಿ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಶೇಷಾದ್ರಿಪುರಂ ಪದವಿ ಕಾಲೇಜಿನ ಡಾ.ರಾಘವೇಂದ್ರರಿಗೆ ಉತ್ತಮ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ರಾಷ್ಟ್ರ ಪ್ರಶಸ್ತಿ

ರಾಷ್ಟ್ರಪತಿ ದ್ರೌಪದಿ ಮುರ್ಮುರಿಂದ ಪ್ರಶಸ್ತಿ ಪ್ರದಾನ



ಮೈಸೂರು, ಅ.3(ಎಸ್‌ಪಿಎನ್)– ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಡಾ.ರಾಘವೇಂದ್ರ ಅವರನ್ನು 'ಉತ್ತಮ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ' ರಾಷ್ಟ್ರ ಪ್ರಶಸ್ತಿಗೆ ಕೇಂದ್ರ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯ ಆಯ್ಕೆ ಮಾಡಿ, ಪ್ರಶಸ್ತಿ ಪ್ರದಾನ ಮಾಡಿದೆ.

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಶನಿವಾರ ನಡೆದ ಸರಳ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಡಾ.ರಾಘವೇಂದ್ರ ಪ್ರಶಸ್ತಿ ಸ್ವೀಕರಿಸಿದ್ದಾರೆ.

ಇವರು, ಮೂಲತಃ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಬಾಬುರಾಯನಕೊಪ್ಪಲು ನಿವಾಸಿಯಾಗಿದ್ದು, ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿದ್ದಾರೆ. ಉತ್ತಮ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಪ್ರಶಸ್ತಿಗೆ ಭಾಜನರಾಗಿರುವ ರಾಘವೇಂದ್ರ ಅವರು 'ಮೈಸೂರು ಮಿತ್ರ'ನಲ್ಲಿ ಸಂತಸ ಹಂಚಿಕೊಂಡರು.

ನನಗೆ 'ಎನ್‌ಎಸ್‌ಎಸ್ ಬೆಸ್ಟ್ ಪ್ರೋಗ್ರಾಮ್ ಆಫೀಸರ್', ನಮ್ಮ ಕಾಲೇಜಿಗೆ 'ಉತ್ತಮ ಎನ್‌ಎಸ್‌ಎಸ್ ಘಟಕ' ಪ್ರಶಸ್ತಿಯೂ ಬಂದಿದೆ. ಈ ಪ್ರಶಸ್ತಿ ಲಭಿಸಿರುವುದರಿಂದ ಎನ್‌ಎಸ್‌ಎಸ್ ವತಿಯಿಂದ ಮತ್ತಷ್ಟು ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ಫೂರ್ತಿ ಬಂದಿದೆ ಎಂದು ತಿಳಿಸಿದರು.

ಈ ಸಾಧನೆಗೆ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ನಾಡೋಜ ಡಾ.ವುಡೇ ಪಿ.ಕೃಷ್ಣ ಹಾಗೂ ಇತರೆ ಆಡಳಿತ ಮಂಡಳಿ ಸದಸ್ಯರು, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ.ಪ್ರತಾಪ್ ಲಿಂಗಯ್ಯ, ಮೈಸೂರು ವಿಶ್ವವಿದ್ಯಾಲಯ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ನಿತ್ಯ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ನಿತ್ಯಾನಂದ, ಅಚೀವರ್ಸ್ ಅಕಾಡೆಮಿ ಪದಾಧಿಕಾರಿಗಳು, ಬಾಬುರಾಯನಕೊಪ್ಪಲಿನ ಗ್ರಾಮಸ್ಥರು ಹಾಗೂ ಇತರೆ ಕ್ರೀಡಾ ಪಟುಗಳು ಇವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿದ್ದಾರೆ.

ಶಂಕಿತ ಐಸಿಸ್ ಉಗ್ರನಿಗೆ ಕರ್ನಾಟಕದ ನಂಟು

ಹುಬ್ಬಳ್ಳಿ,ಅ.3–ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯೊಂದಿಗೆ ನಂಟು ಹೊಂದಿದ್ದ ಎನ್ನಲಾಗಿರುವ ಮೋಸ್ಟ್ ವಾಂಟೆಡ್ ಭಯೋತ್ಪಾದಕ ಶಹನವಾಜ್ ಅಲಿಯಾಸ್ ಶಫಿ ಉಜ್ ಎಂಬಾತನನ್ನು ದೆಹಲಿ ಪೊಲೀಸರು ಬಂಧಿಸಿದ್ದು, ಈ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪೊಲೀಸರು ದೆಹಲಿ ಪೊಲೀಸರೊಂದಿಗೆ ಸಂಪರ್ಕದಲ್ಲಿದ್ದಾರೆ.

ಈ ಬೆಳವಣಿಗೆ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತ ರೇಣುಕಾ ಸುಕುಮಾರ್, ನಾವು ದೆಹಲಿ ಪೊಲೀಸರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಬಂಧಿತ ಉಗ್ರನಿಗೆ ಹುಬ್ಬಳ್ಳಿ–ಧಾರವಾಡದ ನಂಟಿರುವುದು ಬೆಳಕಿಗೆ ಬಂದಿರುವುದರಿಂದ ಎಲ್ಲ ಮಾಹಿತಿ ಕಲೆಹಾಕುತ್ತಿದ್ದೇವೆ. ಆದರೆ, ಭಯೋತ್ಪಾದಕರು ಇಲ್ಲಿ ತರಬೇತಿ ಪಡೆದಿದ್ದಾರೆಯೇ ಅಥವಾ ಅವರು ಹುಬ್ಬಳ್ಳಿ–ಧಾರವಾಡ ದಿಂದ ಬಂದವರೇ ಅಥವಾ ಅವರು ಎಲ್ಲಿಗೆ ಸೇರಿದವರು ಎಂಬ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದು ರೇಣುಕಾ ಸುಕುಮಾರ್ ಹೇಳಿದ್ದಾರೆ.



ಮೈಸೂರು ವಿಜಯನಗರದ ವಿ.ಕೆ.ಪಬ್ಲಿಕ್ ಶಾಲೆಯಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರ್ ಅಂಬಾಸಿಡರ್ ವತಿಯಿಂದ ಗಾಂಧೀಜಿ ಮತ್ತು ಶಾಸ್ತ್ರೀಜಿಯವರ ಜನ್ಮದಿನವನ್ನು ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಲಯನ್ ಹೆಚ್.ಸಿ.ಕಾಂತರಾಜು, ಶಾಲೆಯ ಕಾರ್ಯದರ್ಶಿ ಬೆಕ್ಕಾ ರವಿಕುಮಾರ್, ಲಯನ್ ಎಚ್.ಕೆ.ಪ್ರಸನ್ನ, ವಿಷ್ಣು ಕೆ.ಟಿ., ಭಾಸ್ಕರನಂದ, ರವಿಚಂದ್ರ ಉಪಸ್ಥಿತರಿದ್ದರು.

'ಆಜ್ ತಕ್' ವಿರುದ್ಧ ಬಲವಂತದ ಕ್ರಮ ಸಲ್ಲ: ಆದೇಶ ವಿಸ್ತರಣೆ

ಬೆಂಗಳೂರು, ಅ.3– ರಾಜ್ಯ ಸರ್ಕಾರದ ಸ್ವಾವಲಂಬಿ ಸಾರಥಿ ಯೋಜನೆಯನ್ನು ಟೀಕಿಸಿದ್ದರ ಹಿಂದೆ ಯಾವುದೇ ದುರುದ್ದೇಶವಿರಲಿಲ್ಲ ಎಂದು 'ಆಜ್ ತಕ್' ಹಿಂದಿ ಸುದ್ದಿ ವಾಹಿನಿ ಮತ್ತು ಅದರ ಮುಖ್ಯ ಸಂಪಾದಕ ಸುಧೀರ್ ಚೌಧರಿ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.

ನನ್ನ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿ ಸುಧೀರ್ ಚೌಧರಿ ಮತ್ತು ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸುಧೀರ್ ಚೌಧರಿ ಪರ ವಾದ ಮಂಡಿಸಿದ ಹಿರಿಯ ವಕೀಲ ಉದಯ ಹೊಳ್ಳ, ಅರ್ಜಿದಾರರು ಸುಳ್ಳು ಸುದ್ದಿ ಪ್ರಕಟಿಸಿ ಕೋಮುಗಲಭೆಗೆ ಪ್ರಚೋದನೆ ನೀಡುವ ಕೃತ್ಯ ಎಸಗಿದ್ದಾರೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಸರ್ಕಾರದ ನೀತಿಗಳನ್ನು ಟೀಕಿಸುವುದನ್ನು ಐಪಿಸಿ ಕಲಂ 153ಎ (ಧರ್ಮದ ಆಧಾರದ ಮೇಲೆ ದ್ವೇಷವನ್ನು ಉತ್ತೇಜಿಸುವುದು) ಅಡಿಯಲ್ಲಿ ಪರಿಗಣಿಸಲಾಗದು ಎಂದು ಪ್ರತಿಪಾದಿಸಿದರು. ವಿಚಾರಣೆಯನ್ನು ಇದೇ 9ರಂದು ಮುಂದುವರಿಸುವುದಾಗಿ ತಿಳಿಸಿದ ನ್ಯಾಯ ಪೀಠವು ಈ ಮೊದಲು ನೀಡಿದ್ದ, 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸಬಾರದು ಎಂಬ ಮಧ್ಯಂತರ ಆದೇಶವನ್ನು ವಿಸ್ತರಿಸಿತು.

ಗ್ಯಾರಂಟಿ ಯೋಜನೆಗಳ ಜಾರಿ ನಂತರ ಜಿಎಸ್‌ಟಿ ಸಂಗ್ರಹದಲ್ಲಿ ಭಾರಿ ಏರಿಕೆ


ರಾಜ್ಯದ ಆರ್ಥಿಕ ಬೆಳವಣಿಗೆಗೆ ದಿಕ್ಸೂಚಿ: ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು, ಅ.3– ಮಂದಗತಿಯಲ್ಲಿ ಸಾಗುತ್ತಿದ್ದ ರಾಜ್ಯದ ವ್ಯಾಪಾರ ವಹಿವಾಟು ಗ್ಯಾರಂಟಿ ಯೋಜನೆಗಳ ಜಾರಿ ನಂತರ ಗರಿಗೆದರಿದ್ದು, ಸೆಪ್ಟೆಂಬರ್ ತಿಂಗಳ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹದಲ್ಲಿ ಭಾರಿ ಹೆಚ್ಚಳವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಸಿದ್ದರಾಮಯ್ಯ, ಕಳೆದ ವರ್ಷದ ಸೆಪ್ಟೆಂಬರ್ ತಿಂಗಳ ಸಂಗ್ರಹಕ್ಕಿಂತ ಈ ಬಾರಿ ಶೇ.20ರಷ್ಟು ಪ್ರಗತಿ ಕಂಡಿದೆ. ಸೆಪ್ಟೆಂಬರ್‌ನಲ್ಲಿ ರೂ. 11,693 ಕೋಟಿ ಜಿಎಸ್‌ಟಿ ಸಂಗ್ರಹವಾಗಿದ್ದು, ಇದು ರಾಜ್ಯದ ಆರ್ಥಿಕ ಬೆಳವಣಿಗೆಯ ದಿಕ್ಸೂಚಿ ಎಂದು ಭಾವಿಸಿದ್ದೇನೆ ಎಂದಿದ್ದಾರೆ. ಬಡವರ ಜೇಬಿಗೆ ಹಣ ಹಾಕಿದರೆ ಅವರಲ್ಲಿ ಕೊಳ್ಳುವ ಸಾಮರ್ಥ್ಯ ಬರುತ್ತದೆ, ಇದರಿಂದ ವ್ಯಾಪಾರ ವಹಿವಾಟು ಹೆಚ್ಚಾಗುತ್ತದೆ ಎಂದು ಈ ಹಿಂದೆ ಹಲವು ಬಾರಿ ಹೇಳಿದ್ದೆ. ಕಳೆದ ತಿಂಗಳ ಜಿಎಸ್‌ಟಿ ಸಂಗ್ರಹ ನನ್ನ ಮಾತನ್ನು ಸಾಬೀತು ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಶತಾಯುಷಿ ಕೆ.ಆರ್.ಕೃಷ್ಣಮೂರ್ತಿರಾವ್ ನಿಧನ



ಮೈಸೂರು: ಮೈಸೂರಿನ ಬಸವೇಶ್ವರ ರಸ್ತೆಯ ನಿವಾಸಿ ಗಿರಿಜಾ ಬ್ಯಾಂಗಲ್ ಸ್ಟೋರ್ ಮಾಲೀಕರಾದ ಶತಾಯುಷಿ ಕೆ.ಆರ್. ಕೃಷ್ಣಮೂರ್ತಿರಾವ್ ಅವರು ಮಂಗಳವಾರ ನಿಧನರಾದರು. ದಿವಂಗತರು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 8 ಗಂಟೆಗೆ ಚಾಮುಂಡಿಬೆಟ್ಟದ ಪಾದದಲ್ಲಿ ನಡೆಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಭಾರತೀಯ ಭಾಷೆಗಳಲ್ಲಿ ಕನ್ನಡ ಅತ್ಯಂತ ಶ್ರೀಮಂತ ಭಾಷೆ

● ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ ಅಭಿಮತ ● ಕನ್ನಡ ಉಪನ್ಯಾಸಕರ ವೇದಿಕೆ ಉದ್ಘಾಟನೆ



ಮೈಸೂರು ವಾಣಿವಿಲಾಸ ಮೊಹಲ್ಲಾದ ಮಾತೃಮಂಡಲಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಶಾಲಾ ಶಿಕ್ಷಣ(ಪದವಿ ಪೂರ್ವ ಶಿಕ್ಷಣ) ಇಲಾಖೆಯ ಆಂತರಿಕ ಮೌಲ್ಯಮಾಪನ ಕಾರ್ಯಾಗಾರ ಹಾಗೂ ಕನ್ನಡ ಉಪನ್ಯಾಸಕರ ವೇದಿಕೆಯನ್ನು ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ ಮಂಗಳವಾರ ಉದ್ಘಾಟಿಸಿದರು.

ಮೈಸೂರು, ಅ.3(ಎಸ್‌ಪಿಎನ್)– ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಕನ್ನಡದ ದೀಪಗಳಾಗಿ ಕನ್ನಡ ಭಾಷೆಯನ್ನು ಬೆಳಗಿಸುವ ಕೆಲಸ ಮಾಡಬೇಕು ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ ಹೇಳಿದರು.

ಮೈಸೂರು ವಾಣಿವಿಲಾಸ ಮೊಹಲ್ಲಾದ ಮಾತೃಮಂಡಲಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಶಾಲಾ ಶಿಕ್ಷಣ(ಪದವಿ ಪೂರ್ವ ಶಿಕ್ಷಣ) ಇಲಾಖೆಯ ಆಂತರಿಕ ಮೌಲ್ಯಮಾಪನ ಕಾರ್ಯಾಗಾರ ಹಾಗೂ ಕನ್ನಡ ಉಪನ್ಯಾಸಕರ ವೇದಿಕೆ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ಕರ್ನಾಟಕದಲ್ಲಿನ ನಮ್ಮ ಭಾಷಾ ಪರಿಸ್ಥಿತಿ ಬದಲಾಗಿದೆ. ಭಾರತೀಯ ಭಾಷೆಗಳಲ್ಲೆಲ್ಲ ಅತ್ಯಂತ ಶ್ರೀಮಂತ ಸಾಹಿತ್ಯ ಮತ್ತು ಸಂಸ್ಕೃತಿ ಹೊಂದಿದ್ದೇವೆ. ಈ ಸಾಲಿನಲ್ಲಿ ಕನ್ನಡ ಭಾಷೆ ಅಗ್ರಪಂಕ್ತಿಯಲ್ಲಿದೆ. ಹಾಗಾಗಿ ನಾವೆಲ್ಲರೂ ಒಂದು ಶ್ರೀಮಂತ ಸಾಹಿತ್ಯ ಮತ್ತು ಸಂಸ್ಕೃತಿ ಪರಂಪರೆಯ ಬೆಳಕಿನಲ್ಲಿದ್ದೇವೆ ಎಂದರೆ ತಪ್ಪಾಗಲಾರದು ಎಂದರು.

ಕನ್ನಡ ಉಪನ್ಯಾಸಕರು ಕನ್ನಡದ ಕಟ್ಟಾಳುಗಳಾಗಿ ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೇಮವನ್ನು ಉದ್ದೀಪನಗೊಳಿಸುವ ಕೆಲಸ ಮಾಡಬೇಕು. ಆಗ ಕನ್ನಡ ಭಾಷೆಗೆ ಯಾವುದೇ ಆತಂಕವಿರುವುದಿಲ್ಲ. ಇದೇ ಮೊದಲ ಬಾರಿಗೆ ಮೈಸೂರು ಜಿಲ್ಲೆಯಲ್ಲಿ ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕ ವೇದಿಕೆ ರಚನೆಯಾಗಿರುವುದು ಕ್ರಿಯಾಶೀಲತೆಯ ಸಂಕೇತ ಹಾಗೂ ಈ ವೇದಿಕೆಯಡಿ ಒಗ್ಗಟ್ಟಾಗಿರುವ ಉಪನ್ಯಾಸಕರು ಕನ್ನಡದ ಬೆಳವಣಿಗೆಗೆ ಟೊಂಕಕಟ್ಟಿ ನಿಲ್ಲಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ.ಪೂ.ಶಿ.ಇಲಾಖೆ ಉಪನಿರ್ದೇಶಕ ಮರಿಸ್ವಾಮಿ ಮಾತನಾಡಿ, ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಉಪನ್ಯಾಸಕರ ಜವಾಬ್ದಾರಿ ಹೆಚ್ಚಿನದ್ದಾಗಿರುತ್ತದೆ. ಯಾವುದೇ ವಿಷಯವನ್ನು ಕಲಿಯಲು ಭಾಷೆ ಬಹಳ ಮುಖ್ಯ. ಅಂತಹ ಭಾಷೆಯನ್ನು ಕಲಿಸುವ ಗುರುತರ ಜವಾಬ್ದಾರಿ ಕನ್ನಡ ಉಪನ್ಯಾಸಕರ ಮೇಲಿದೆ ಎಂದರು.

ಸಂಪನ್ಮೂಲ ವ್ಯಕ್ತಿ ಎಸ್.ಬಾಲಸುಬ್ರಹ್ಮಣ್ಯಂ ಅವರು, ಪದವಿ ಪೂರ್ವ ಹಂತದಲ್ಲಿ 'ಭಾಷಾ ಬೋಧನೆಯ ಸವಾಲುಗಳು' ವಿಷಯ ಕುರಿತು ಮಾತನಾಡಿ, ಕನ್ನಡ ಪಠ್ಯಪುಸ್ತಕಗಳಲ್ಲಿ ಕೆಲವು ಪದಗಳು ತಪ್ಪು ಅರ್ಥೈಸುವಂತೆ ತಪ್ಪಾಗಿ ಪ್ರಕಟವಾಗಿದ್ದರೂ, ಅದರ ಬಗ್ಗೆ ಆಕರ ಗ್ರಂಥಗಳಲ್ಲಿ ಹುಡುಕಿ ಅಧ್ಯಯನ ಮಾಡದೇ ಎಲ್ಲಾ ಉಪನ್ಯಾಸಕರು ಸುಮ್ಮನೆ ಬೋಧನೆ ಮಾಡುತ್ತಿದ್ದಾರೆ. ಆ ತಪ್ಪುಗಳು ಕೆಲವೊಮ್ಮೆ ಉಪನ್ಯಾಸಕರಿಗೆ ಅರಿವಿಗೆ ಬಂದರೂ ವಿದ್ಯಾರ್ಥಿಗಳಲ್ಲಿ ಮೂಡಿರುವ ಗೊಂದಲವನ್ನು ಬಗೆಹರಿಸದೇ ತೇಲಿಸಿ ಪಾಠ ಮಾಡುವ ಹವ್ಯಾಸ ಬೆಳೆಸಿಕೊಂಡಿರುವುದು ಬೇಸರದ ಸಂಗತಿ ಎಂದು ಹೇಳಿದರು.

ಹಾಗಾಗಿ ಪಠ್ಯಗಳಲ್ಲಿ ಗೊಂದಲಕಾರಿ ಪದಗಳು, ಸಾಲುಗಳು ಪ್ರಕಟಗೊಂಡಿದ್ದರೆ, ಅವುಗಳ ಬಗ್ಗೆ ಆಕರ ಗ್ರಂಥಗಳಲ್ಲಿ ಹುಡುಕಿ, ಅಧ್ಯಯನ ನಡೆಸಿ ವಿದ್ಯಾರ್ಥಿಗಳಲ್ಲಿ ಮೂಡುವ ಗೊಂದಲವನ್ನು ಸರಿಪಡಿಸುವ ಹೊಣೆ ಉಪನ್ಯಾಸಕರದ್ದು ಎಂದ ಅವರು, ಈ ಬಾರಿ ಪರೀಕ್ಷೆಯಲ್ಲಿ ಕನ್ನಡ ವಿಷಯದ ಪರೀಕ್ಷೆಗೆ 80 ಅಂಕ ಹಾಗೂ ಅಸೈನ್‌ಮೆಂಟ್ 20 ಅಂಕಗಳನ್ನು ಇಲಾಖೆ ನಿಗದಿಗೊಳಿಸಿದೆ. ಆದರೆ, ಈ ಹಿಂದೆ 100 ಅಂಕಗಳಿಗೆ ನಿಗದಿಪಡಿಸಿದ ಪಾಠಗಳನ್ನು ಬೋಧನೆ ಮಾಡಲು ಉಪನ್ಯಾಸಕರ ಮೇಲೆ ಒತ್ತಡ ತರುವುದು ಎಷ್ಟು ಸರಿ? ಎಂದು ಕೆಲ ಉಪನ್ಯಾಸಕರು ಸಂವಾದ ಸಂದರ್ಭದಲ್ಲಿ ಪ್ರಶ್ನಿಸಿದರು.

ವೇದಿಕೆಯಲ್ಲಿ ಮಾತೃ ಮಂಡಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ವಿಜಯಲಕ್ಷ್ಮೀ ಅರಸ್, ಕಾರ್ಯದರ್ಶಿ ವಾಣಿ ಪ್ರಸಾದ್, ಉಪನ್ಯಾಸಕರ ಸಂಘದ ಅಧ್ಯಕ್ಷ ಎಂ.ಎಂ.ಮಹದೇವ್, ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ ಅಧ್ಯಕ್ಷ ಡಾ.ನೀ.ಗೂ. ರಮೇಶ್, ಪ್ರಧಾನ ಕಾರ್ಯದರ್ಶಿ ಮಂಜೇಗೌಡ, ಗೌರವಾಧ್ಯಕ್ಷರಾದ ಪುಟ್ಟಗೌರಮ್ಮ, ವಿಷಕಂಠಮೂರ್ತಿ, ಡಾ.ವೀರಭದ್ರಸ್ವಾಮಿ, ಡಾ.ಮಹದೇವಸ್ವಾಮಿ ಹೆಗ್ಗೂಠಾರ ಕಾರ್ಯಕ್ರಮ ನಿರ್ವಹಿಸಿದರು.

ಹೆಲ್ಮೆಟ್ ಇಲ್ಲದಿದ್ದರೆ ಬೈಕ್ ಸವಾರರು ದಂಡ ಕಟ್ಟುವಂತಿಲ್ಲ

● ದಂಡದ ದುಡ್ಡಿನಲ್ಲಿ ಸ್ಥಳದಲ್ಲೇ ಬೈಕ್ ಬಿಟ್ಟು ಹೋಗಿ ಹೆಲ್ಮೆಟ್ ಖರೀದಿಸಲು ಅವಕಾಶ ● ಪೊಲೀಸ್ ಸೇರಿ ವಿವಿಧ ಅಧಿಕಾರಿಗಳ ಸಭೆ ಬಳಿಕ ಶಾಸಕ ರವಿಕುಮಾರ್ ಮಾಹಿತಿ

ಮಂಡ್ಯ, ಅ.3– ಮಂಡ್ಯ ನಗರ ವ್ಯಾಪ್ತಿಯಲ್ಲಿ ಎಲ್ಲೆಂದರಲ್ಲಿ ಪೊಲೀಸರು ಹೆಲ್ಮೆಟ್ ಹಾಕದ ಬೈಕ್ ಸವಾರರಿಗೆ ದಂಡ ವಿಧಿಸುತ್ತಿದ್ದ ಶಿಕ್ಷೆಗೆ ಬ್ರೇಕ್ ಬಿದ್ದಿದ್ದು, ಹೆಲ್ಮೆಟ್ ಇಲ್ಲದ ಬೈಕ್ ಸವಾರರಿಗೆ ಪೊಲೀಸರು ದಂಡದ ಬದಲಾಗಿ ಬೈಕ್ ಅನ್ನು ಸ್ಥಳದಲ್ಲೇ ಪಾರ್ಕಿಂಗ್ ಮಾಡಿ, ದಂಡದ ಹಣದಲ್ಲಿ ಹೆಲ್ಮೆಟ್ ಖರೀದಿಸಿ ಧರಿಸಿಕೊಂಡ ಬಳಿಕ ಅಲ್ಲಿಂದ ತೆರಳಲು ಅವಕಾಶ ಕೊಡಬೇಕೆಂದು ಜಿಲ್ಲಾ ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಗಣಿಗ ರವಿಕುಮಾರ್ ತಿಳಿಸಿದರು.

ಮಂಗಳವಾರ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಪೊಲೀಸರು, ಆರ್‌ಟಿಓ, ನಗರಸಭೆ ಹಾಗೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಜೊತೆಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ಹೆಲ್ಮೆಟ್ ವಿಚಾರದಲ್ಲಿ ಪೊಲೀಸರು ಅಡ್ಡ ಹಾಕಿದಾಗ ದೂರವಾಣಿ ಕರೆ ಮಾಡಿ ಬಿಡಿಸುವಂತೆ ಪೀಡಿಸುವುದು ಹೆಚ್ಚಾಗುತ್ತು. ಇದಕ್ಕೆ ಒಂದು ಮಾರ್ಗೋಪಾಯ ಮಾಡಿದ್ದು, ಸಾರ್ವಜನಿಕರು ದಂಡ ಕಟ್ಟುವುದು ಬೇಡ. ಹೆಲ್ಮೆಟ್ ಇಲ್ಲದೇ ಪೊಲೀಸರು ಬೈಕ್ ಸವಾರರನ್ನು ದಂಡ ಕಟ್ಟಿಸಿಕೊಂಡು ಬಿಡುವುದು ಬೇಡ ಎಂಬ ಕಾರಣಕ್ಕೆ ಸ್ಥಳದಲ್ಲೇ ಹೆಲ್ಮೆಟ್ ಖರೀದಿಸಿ ಧರಿಸಿಕೊಂಡ ಬಳಿಕ ಅವರನ್ನು ಅಲ್ಲಿಂದ ಕಳುಹಿಸಿಕೊಡುವ ವ್ಯವಸ್ಥೆ ಇಂದಿನಿಂದಲೇ ಜಾರಿಗೆ ಬರಲಿದೆ ಎಂದರು.

ಅಲ್ಲದೇ ಕಾರಿನಲ್ಲಿ ಬೆಲ್ಟ್ ಹಾಕದವರಿಗೂ ಇದನ್ನು ಮುಂದೆ ದಂಡ ವಿಧಿಸದೇ ಅವರಿಗೆ ಬುದ್ಧಿಮಾತು ಹೇಳಿ ಬೆಲ್ಟ್ ಧರಿಸಿಕೊಂಡು ಹೋಗುವಂತೆ ಪೊಲೀಸರು ಸೂಚನೆ ಕೊಡಬೇಕೆಂದು ತಿಳಿಸಿದ್ದು, ಕಾರಿನಲ್ಲಿ ಕುಟುಂಬ ಸಮೇತ ತೆರಳುತ್ತಿರುವವರು ಅಥವಾ ಇನ್ನಿತರು ತುರ್ತಾಗಿ ತೆರಳುವ ಅವರನ್ನು ಅಡ್ಡಗಟ್ಟಿ ವಿಚಾರಣೆ ಮಾಡಿ ದಂಡ ಕಟ್ಟಿಸಿಕೊಳ್ಳುವ ಬದಲು ಬೆಲ್ಟ್ ಹಾಕಿಕೊಂಡ ಬಳಿಕ ಅವರನ್ನು ಕಳುಹಿಸುವ ಕೆಲಸಕ್ಕೆ ಮುಂದಾಗಬೇಕೆಂದು ಪೊಲೀಸರಿಗೆ ಸೂಚನೆ ಕೊಡಲಾಗಿದೆ ಎಂದರು.

ಹೆಲ್ಮೆಟ್ ಹಾಗೂ ಬೆಲ್ಟ್ ವಿಚಾರಕ್ಕೆ ಮಾತ್ರ ಮಂಡ್ಯದಲ್ಲಿ ಪೊಲೀಸರು ರಿಯಾಯ್ತಿ ಕೊಡಲಿದ್ದು, ಕುಡಿದು ವಾಹನ ಚಲಾವಣೆ ಮಾಡುವುದು, ರಸ್ತೆಯಲ್ಲಿ ವ್ಹೀಲಿಂಗ್ ಮಾಡುವುದು, ಪಾರ್ಕ್‌ಗಳು ಹಾಗೂ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯ ಪಾನ ಮಾಡಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಿದರೆ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಂಡು ಪೊಲೀಸರು ದಂಡ ವಿಧಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಇದರ ಜೊತೆಗೆ ಮಂಡ್ಯದ ಪ್ರಮುಖ ರಸ್ತೆಗಳಲ್ಲಿ ಫುಟ್‌ಪಾತ್ ಸಮಸ್ಯೆ ಇರುವುದು ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಹೈಟೆಕ್ ಫುಟ್‌ಪಾತ್ ನಿರ್ಮಿಸಲು ಸಿದ್ಧತೆ ನಡೆಸುತ್ತಿದ್ದು, ಮಂಡ್ಯದ ಗುತ್ತಲು ರಸ್ತೆಯ ಕುವೆಂಪು ಶತಮಾನೋತ್ಸವ ಶಾಲೆ ಮುಂಭಾಗ ಫುಟ್‌ಪಾತ್ ನಿರ್ಮಿಸಿ, ಅಲ್ಲಿಯ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಿ, ಅವರಿಗೆ ಪರ್ಯಾಯವಾಗಿ ಅಂಗಡಿ– ಮುಂಗಟ್ಟು ಇಡಲು ಅವಕಾಶ ಮಾಡಿಕೊಡುತ್ತಿದ್ದು, ಅವಕಾಶ ಮಾಡಿಕೊಟ್ಟ ಬಳಿಕ ಫುಟ್‌ಪಾತ್ ಬಳಿ ಯಾರೂ ಸಹ ಬೀದಿಬದಿ ವ್ಯಾಪಾರ ಮಾಡುವಂತಿಲ್ಲ ಎಂದು ವಿವರಿಸಿದರು.



ನಗರದ ವಿವಿಧೆಡೆ ಸಿಸಿ ಕ್ಯಾಮೆರಾಗಳ ಸಮಸ್ಯೆ ಇದ್ದು, ಆಯಾಕಟ್ಟಿನ ಎಲ್ಲಾ ಪ್ರದೇಶಗಳಲ್ಲೂ ಸಿಸಿ ಕ್ಯಾಮೆರಾ ಅಳವಡಿಕೆಗೆ ಸೂಚಿಸಲಾಗಿದೆ. ಇದರಿಂದ ಅಪರಾಧ ಚಟುವಟಿಕೆ ನಡೆಸುವವರನ್ನು ಶೀಘ್ರ ಹೆಡೆಮುರಿ ಕಟ್ಟಲು ಅನುಕೂಲವಾಗಲಿದೆ. ನಗರದ ಬನ್ನೂರು ರಸ್ತೆಯ ಗೌರಿಶಂಕರ ಸಮುದಾಯ ಭವನದಿಂದ ನೂರಡಿ ರಸ್ತೆಯ ಬೆಸಗರಹಳ್ಳಿ ರಾಮಣ್ಣ ವೃತ್ತದವರೆಗೂ ಹೈಟೆಕ್ ರಸ್ತೆ ನಿರ್ಮಾಣಕ್ಕೆ 2.20 ಕೋಟಿ ಹಣ ಮಂಜೂರಾಗಿದೆ. ಈ ರಸ್ತೆಯಲ್ಲಿ ಬಸ್‌ವೇ, ಸೈಕಲ್‌ವೇ ಸೇರಿದಂತೆ ಎಲ್ಲಾ ಮೂಲಸೌಕರ್ಯ ಸಿಗಲಿವೆ. ಆಧುನಿಕ ಸ್ಪರ್ಶ ನೀಡಿ ರಸ್ತೆ ನಿರ್ಮಿಸಲಾಗುವುದು. – ಗಣಿಗ ರವಿಕುಮಾರ್, ಶಾಸಕ

ಈ ಫುಟ್‌ಪಾತ್ ಯೋಜನೆ ಯಶಸ್ವಿಯಾದರೆ ಇದೇ ಮಾದರಿ ನಗರದ ಐದಾರು ಕಡೆ ಹೈಟೆಕ್ ಫುಟ್‌ಪಾತ್ ನಿರ್ಮಿಸಲಾಗುವುದು ಎಂದ ಅವರು, ನಗರದ ಸರ್‌ಎಂವಿ ಜಿಲ್ಲಾ ಕ್ರೀಡಾಂಗಣದ ಪಕ್ಕದ ಕಲಾಮಂದಿರ ರಸ್ತೆಯಲ್ಲಿ ಸಂಜೆ ವಾಯು ವಿಹಾರಕ್ಕೆ ಬರುವವರಿಗೆ ಹಾಗೂ ನಗರದ ಜನರಿಗೆ ಅನುಕೂಲವಾಗಲಿ ಎಂದು ಫುಟ್‌ಸ್ಟ್ರೀಟ್ ನಿರ್ಮಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ ಎಂದರು.

ಮಂಡ್ಯ ನಗರ ವ್ಯಾಪ್ತಿಯ ಬಸ್‌ವೇ ಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲ್ಲದೇ ರಸ್ತೆಯಲ್ಲೇ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವುದು ಅಥವಾ ಇಳಿಸುವ ಕೆಲಸವಾಗುತ್ತಿದ್ದು, ಇದರಿಂದ ಅಪಘಾತಗಳು ಹಾಗೂ ಪ್ರಯಾಣಿಕರಿಗೆ ಕಿರಿಕಿರಿ ಯಾಗುತ್ತಿದ್ದು, ಈ ಬಗ್ಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಖಡಕ್ ಸೂಚನೆ ಕೊಟ್ಟಿದ್ದು, ಬಸ್‌ಗಳು ಬಸ್‌ವೇನಲ್ಲೇ ನಿಲ್ಲಿಸುವಂತೆ ಅಧಿಕಾರಿಗಳು ಡ್ರೈವರ್‌ಗಳಿಗೆ ಸೂಚಿಸಬೇಕು. ಆದಾಗ್ಯೂ ಡ್ರೈವರ್‌ಗಳು ಈ ನಿಯಮ ಪಾಲಿಸದಿದ್ದರೆ ಅಂತಹವರ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಸೂಚನೆ ಕೊಟ್ಟಿದ್ದೇನೆ ಎಂದರು.

ನಗರದ ಹೊರವಲಯದ ಉಮ್ಮಡಹಳ್ಳಿ ಗೇಟ್‌ನಿಂದ ಕಿರಂಗೂರು ಗೇಟ್‌ವರೆಗೆ ಹಳೇ ಬೆಂಗಳೂರು– ಮೈಸೂರು ಹೆದ್ದಾರಿಯನ್ನು ಸಂಪೂರ್ಣ ಗುಣಮಟ್ಟದಲ್ಲಿ ಸಿದ್ಧಪಡಿಸಲು ಈಗಾಗಲೇ ಯೋಜನೆ ರೂಪಿಸಲಾಗಿದೆ. ಇದಲ್ಲದೇ ಸಂಜಯ ವೃತ್ತದಿಂದ ಪೇಟೆಬೀದಿ ಸಂಪರ್ಕಿಸುವ ರಸ್ತೆ ಹದಗೆಟ್ಟಿದ್ದು, ಈ ರಸ್ತೆಯನ್ನು ಸಿಮೆಂಟ್ ರಸ್ತೆ ಮಾಡಲು ಕ್ರಮ ವಹಿಸಲಾಗಿದೆ. ಜೊತೆಗೆ ಮಹಾವೀರ ವೃತ್ತದಲ್ಲಿ ಮಳೆ ಬಂದಾಗ ನೀರು ನಿಲ್ಲುತ್ತಿದ್ದು, ಆದಷ್ಟು ಶೀಘ್ರ ಪರಿಹಾರ ಕಂಡುಕೊಳ್ಳಲು ಮಾರ್ಗೋಪಾಯ ಮಾಡಲಾಗಿದೆ ಎಂದರು.

ನಗರದ ಪೇಟೆ ಬೀದಿಗಳಲ್ಲಿ ಕೆಲ ವರ್ತಕರು ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಪಾರ್ಕಿಂಗ್ ಕಿರಿಕಿರಿ, ವಾಹನ ಸಂಚಾರಕ್ಕೆ ಕಿರಿಕಿರಿ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಒತ್ತುವರಿ ಕಾರ್ಯಾಚರಣೆ ಮಾಡಲು ತಹಸೀಲ್ದಾರ್ ಸಿದ್ಧತೆ ನಡೆಸುತ್ತಿದ್ದಾರೆ. ಈ ಹಿಂದೆ ಮಂಡ್ಯ ಡಿಸಿ ಆಗಿದ್ದ ಮಹೇಶ್ವರರಾವ್ ಈ ನಿರ್ಧಾರಕ್ಕೆ ಕೈ ಹಾಕಿದ್ದರು. ಅದೇ ಮಾದರಿಯಲ್ಲಿ ರಸ್ತೆ ಒತ್ತುವರಿ ಕಾರ್ಯ ಶೀಘ್ರವೇ ನಡೆಯಲಿದೆ ಎಂದು ವಿವರಿಸಿದರು. ಸಭೆಯಲ್ಲಿ ಎಸ್ಪಿ ಎನ್.ಯತೀಶ್, ಎಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ ಶಿವಮೂರ್ತಿ, ನಗರಸಭೆ ಆಯುಕ್ತ ಮಂಜುನಾಥ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ರಸ್ತೆ ತಡೆ



ಕೆ.ಆರ್.ಪೇಟೆ, ಅ.3– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ತಾಲೂಕು ಯುವರತ್ನ ಡಾ.ಪುನೀತ್ ರಾಜ್‌ಕುಮಾರ್ ಯುವ ಬ್ರಿಗೇಡ್ ಹಾಗೂ ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿ, ಮಾತೃಭೂಮಿ ವೃದ್ಧಾಶ್ರಮ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ರಸ್ತೆ ತಡೆ ಚಳವಳಿ ನಡೆಸಲಾಯಿತು.

ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಮಾತೃಭೂಮಿ ವೃದ್ಧಾಶ್ರಮದ ಮುಖ್ಯಸ್ಥ ಜೈಹಿಂದ್ ನಾಗಣ್ಣ, ತಾಲೂಕು ಪುನೀತ್ ರಾಜ್‌ಕುಮಾರ್ ಯುವ ಬ್ರಿಗೇಡ್ ಅಧ್ಯಕ್ಷ ಕೆ.ಎಲ್.ಮಹೇಶ್, ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎನ್.ಎಸ್.ಗಂಗಾಧರ್ ನೇತೃತ್ವದಲ್ಲಿ ಪ್ರವಾಸಿ ಮಂದಿರ ವೃತ್ತದಲ್ಲಿ ಮೈಸೂರು–ಶಿವಮೊಗ್ಗ ರಾಜ್ಯ ಹೆದ್ದಾರಿ ಹಾಗೂ ಕೆ.ಆರ್.ಪೇಟೆ–ಭೇರ್ಯ ಮುಖ್ಯ ರಸ್ತೆಯಲ್ಲಿ ಮಾನವ ಸರಪಳಿ ನಿರ್ಮಿಸಿ ಕಾವೇರಿ ನಮ್ಮದು, ಹೇಮಾವತಿ ನಮ್ಮದು ಎಂದು ಘೋಷಣೆ ಕೂಗುತ್ತಾ ಕಣ್ಣಿಲ್ಲದೇ ಕುರುಡು ಆದೇಶ ನೀಡುತ್ತಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ತಮಿಳುನಾಡು ಸರ್ಕಾರದ ವಿರುದ್ಧ ಕಿಡಿಕಾರಿದರು.

ರಾಜ್ಯದಲ್ಲಿ ಮಳೆ ಇಲ್ಲದೇ ಭೀಕರ ಬರಗಾಲ ಎದುರಾಗಿದೆ. ಜನಜಾನುವಾರುಗಳ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದೆ. ಈ ವೇಳೆ ನೀರು ಹರಿಸುತ್ತಿರುವ ಸರ್ಕಾರದ ಕ್ರಮ ಸರಿಯಲ್ಲ. ಕಾವೇರಿ ನೀರು ಹಂಚಿಕೆ ಕುರಿತು ಪ್ರಾಧಿಕಾರ ಹಾಗೂ ಸುಪ್ರಿಂ ಕೋರ್ಟ್‌ನಲ್ಲಿ ವಾದ ಮಂಡಿಸಲು ತಮಿಳುನಾಡು ಮೂಲದ ಅಥವಾ ಪಾಂಡಿಚೇರಿ ಮೂಲದ ವಕೀಲರನ್ನು ನೇಮಿಸಿಕೊಂಡು ಅವರಿಗೆ ಈವರೆಗೆ 100ಕೋಟಿಗೂ ಅಧಿಕ ಫೀಜು ನೀಡಿರುವ ಕರ್ನಾಟಕ ರಾಜ್ಯಕ್ಕೆ ಯಾವುದೇ ನ್ಯಾಯ ಸಿಕ್ಕಿಲ್ಲ. ದುಡ್ಡು ಕೊಟ್ಟು ತಮಿಳುನಾಡಿಗೆ ಅನುಕೂಲ ಮಾಡಿಕೊಟ್ಟಂತೆ ಆಗಿದೆ. ಅಲ್ಲದೇ ಕುರಿ ಕಾಯಲು ತೋಳ ಬಿಟ್ಟಂತೆ ಆಗಿದೆ. ಇದರಿಂದ ಕುರಿ ರಕ್ಷಣೆ ಸಾಧ್ಯವೇ ಎಂದು ಸರ್ಕಾರದ ನಡೆ ಪ್ರಶ್ನಿಸಿದ ಪ್ರತಿಭಟನಾಕಾರರು ಕೂಡಲೇ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸಿ. ಅದೇ ನೀರನ್ನು ಕಾವೇರಿ ಅಚ್ಚುಕಟ್ಟು ಭಾಗದ ಕೆರೆಕಟ್ಟೆ, ಕಾಲುವೆಗಳಿಗೆ ಹರಿಸಬೇಕು. ಆ ಮೂಲಕ ನಮ್ಮ ರೈತರನ್ನು ಸಂಕಷ್ಟದಿಂದ ಕಾಪಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಂ.ಶಿವಪ್ಪ, ನಿವೃತ್ತ ಯೋಧ ಸುಕುಮಾರ್, ದಿಲೀಪ್, ಗೋವಿಂದರಾಜು, ಹರೀಶ್, ಲೋಹಿತ್, ದಿಲೀಪ್, ಅಶೋಕ್, ಅರ್ಜುನ್, ಗೋವರ್ಧನ್ ಸೇರಿದಂತೆ ಇನ್ನಿತರರಿದ್ದರು.

ಕೆಲವೇ ದಿನಗಳಲ್ಲಿ ಸರ್ಕಾರ ಪತನ: ಅನ್ನದಾನಿ ಭವಿಷ್ಯ

ಮಂಡ್ಯ, ಅ.3– ನನ್ನ ಪ್ರಕಾರ ಕಾಂಗ್ರೆಸ್ ಸರ್ಕಾರ ಕೆಲವೇ ದಿನಗಳಲ್ಲಿ ಪತನವಾಗಲಿದ್ದು, ಜಿಲ್ಲೆಯ ರೈತರ ತಾಳ್ಮೆಯನ್ನು ಸರ್ಕಾರ ಕೆಣಕುತ್ತಿದೆ ಎಂದು ಜೆಡಿಎಸ್ ಮಾಜಿ ಶಾಸಕ ಕೆ.ಅನ್ನದಾನಿ ಭವಿಷ್ಯ ನುಡಿದರು.



ನಗರದ ಸರ್‌ಎಂವಿ ಪ್ರತಿಮೆ ಮುಂಭಾಗ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ಧರಣಿಯಲ್ಲಿ ಮಾತನಾಡಿದ ಅವರು, ರೈತರ ವಿರುದ್ಧ ನಡೆದುಕೊಂಡಿರುವ ಸರ್ಕಾರಗಳು ದೇಶದಲ್ಲಿ ಉಳಿದಿಲ್ಲ. ಅದೇ ರೀತಿ ಈ ಸರ್ಕಾರ ಸರ್ವನಾಶವಾಗಲಿದೆ. ಕಾವೇರಿ ಹೋರಾಟದ ಸ್ಥಳದಲ್ಲಿ ನಿಂತು ಹೇಳುತ್ತೇನೆ. ಈ ಸರ್ಕಾರ ಉಳಿಯಲ್ಲ, ಉಳಿಯಬಾರದು. ಬಡವರಿಗೆ ಮಾರಕವಾಗುವಂತಹ ಸರ್ಕಾರ ಉಳಿಯಬಾರದು ಎಂದರು.

ಕಳೆದ 29 ದಿನಗಳಿಂದ ರೈತರು ಹೋರಾಟ ನಡೆಸುತ್ತಿದ್ದಾರೆ. ಆದರೆ ಸರ್ಕಾರಕ್ಕೆ ಕಣ್ಣು ಕಾಣುತ್ತಿಲ್ಲ. ರೈತರ ಸಂಕಷ್ಟ ಕೇಳುತ್ತಿಲ್ಲ. 135 ಸೀಟ್ ಗೆದ್ದಿದ್ದೇವೆ ಎಂದು ಬೀಗುತ್ತಿದ್ದೀರಾ. ಮಂಡ್ಯ ರೈತರ ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿದ್ದೀರಿ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅರ್ಥ ಮಾಡಿಕೊಳ್ಳಬೇಕು. ಜಿಲ್ಲೆಯಿಂದ 6 ಸ್ಥಾನಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ರೈತನ ಮಗ, ಮಣ್ಣಿನ ಮಗ ದೇವೇಗೌಡರು ಪ್ರಧಾನಿಗಳಿಗೆ ಪತ್ರ ಬರೆದಿದ್ದಾರೆ. ಅದಕ್ಕೆ ಪ್ರಧಾನಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದರೆ ಸುಪ್ರೀಂಗೆ ಮೇಲ್ಮನವಿ ಹೋಗುತ್ತೇವೆ ಎಂದು ಕಾಲಹರಣ ಮಾಡುತ್ತಿದ್ದೀರಾ. ರೈತನ ಅನ್ನದ ಕಾಳಿಗೆ ಮಣ್ಣಾಕಿದ್ದೀರಿ. ನಿಮ್ಮ ಸರ್ಕಾರಕ್ಕೆ ನನ್ನ ಧಿಕ್ಕಾರ ಎಂದು ಕಿಡಿಕಾರಿದರು.

ಈ ಕೂಡಲೇ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸಬೇಕು. ರೈತರಿಗಾಗಿಯೇ ಸರ್ಕಾರ ನಡೆಯುವುದು. ಕುಡಿಯುವುದಕ್ಕೆ ನೀರಿಲ್ಲದ ಮೇಲೆ ನಿಮ್ಮ ಸರ್ಕಾರ ಯಾಕೆ ಬೇಕು. ಬಡವರಿಗೆ ಮಾರಕವಾಗುವಂತಹ ಸರ್ಕಾರ ಉಳಿಯಬಾರದು ಎಂದ ಅವರು, ಕುಮಾರಸ್ವಾಮಿ ಹಾಗೂ ಸಿ.ಪಿ.ಯೋಗೇಶ್ವರ್ ಪ್ಲ್ಯಾನ್ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ದೊಡ್ಡವರು ಮಾತನಾಡುತ್ತಾರೆ ಎಂದು ನುಣುಚಿಕೊಂಡರು. ದೇವೇಗೌಡರು ರಾಜಕೀಯ ಭಂಡಾರವಿದ್ದಂತೆ. ಅವರೊಂದು ದೊಡ್ಡ ವಿಶ್ವವಿದ್ಯಾಲಯ. ಹಿಂಸೆ ತೆಗೆದುಕೊಂಡು ಮೈತ್ರಿ ಒಪ್ಪಿಕೊಳ್ಳುವವರಲ್ಲ. ಯಾವ ಸಮಯಕ್ಕೆ ಏನು ನಿರ್ಧಾರ ತೆಗೆದುಕೊಳ್ಳಬೇಕು. ಅದನ್ನೇ ತೆಗೆದುಕೊಳ್ಳುತ್ತಾರೆ. ಈ ದೇಶ ಆಳಿದವರಿಗೆ ಏನು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿಸಿಕೊಳ್ಳುವವರಲ್ಲ. ಅವರ ನಿರ್ದೇಶನದಲ್ಲೇ ಪಕ್ಷ ಮುನ್ನಡೆಸಲಾಗುತ್ತಿದೆ ಎಂದು ಚಲುವರಾಯಸ್ವಾಮಿ ಮಾತಿಗೆ ಮಾಜಿ ಶಾಸಕ ಕೆ.ಅನ್ನದಾನಿ ತಿರುಗೇಟು ನೀಡಿದರು.

ಚಲುವರಾಯಸ್ವಾಮಿ, ಜಮೀರ್ ಮಂತ್ರಿ ಆಗಬೇಕಿತ್ತಲ್ಲ ಅವರಿಗೆ ಜಾತ್ಯಾತೀತ ಇತ್ತು. ಮಂತ್ರಿ ಆಗಿ ಆಯ್ತಲ್ಲ. ಅದಕ್ಕೆ ಈಗ ಜೆಡಿಎಸ್‌ನಲ್ಲಿ ಸೆಕ್ಯುಲರ್ ಇಲ್ಲ ಅಂತಿದ್ದಾರೆ. ನೀವು ಕೂಡ ಬಿಜೆಪಿ ಜೊತೆಗೆ ಮಂತ್ರಿ ಆಗಿದ್ದವರು. ಸೆಕ್ಯುಲರ್ ಬಗ್ಗೆ ಮಾತನಾಡಲು ನಿಮಗೆ ನೈತಿಕತೆ ಇಲ್ಲ ಎಂದು ಕಿಡಿಕಾರಿದರು.

ನಿಖಿಲ್ ಅವರ 2 ಸೋಲು ನನಗೆ ನೋವು ತಂದಿದೆ. ಮುಂದಿನ ದಿನದಲ್ಲಿ ಅವರ ಭವಿಷ್ಯ ಉಜ್ವಲವಾಗಿರಲಿ ಎಂದು ಬಯಸುತ್ತೇನೆ. ಮಂಡ್ಯದಿಂದ ಯಾರೇ ಸ್ಪರ್ಧೆ ಮಾಡಿದರೂ ನಮಗೆ ಸ್ವಾಗತ ಇದೆ. ಪಕ್ಷದಿಂದ ಯಾರೇ ನಿಂತುಕೊಂಡರೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ. ಪಕ್ಷ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಕಾದು ನೋಡಬೇಕು ಎಂದರು. ಸಮಿತಿಯ ಸುನಂದಾ ಜಯರಾಂ, ಕೆಬೋರಯ್ಯ, ಕನ್ನಡ ಸೇನೆ ಮಂಜುನಾಥ್, ಎಂ.ವಿ.ಕೃಷ್ಣ, ಇಂಡುವಾಳು ಚಂದ್ರಶೇಖರ್, ಮುದ್ದೇಗೌಡ, ಅಂಬುಜಮ್ಮ ಸೇರಿದಂತೆ ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಅ.3– ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ 2023–24ನೇ ಸಾಲಿನ ವಿವಿಧ ಯೋಜನೆಗಳಡಿ ಸಾಲ–ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಯಾ ಸಮುದಾಯದವರು ಯೋಜನಾವಾರು ಸೌಲಭ್ಯ ಕೋರಿ ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್‌ನಲ್ಲಿ https://sevasindhu.karnataka.gov.in ಗ್ರಾಮ ಒನ್, ಕರ್ನಾಟಕ ಒನ್ ಬೆಂಗಳೂರು ಒನ್, ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಅ.31 ಕಡೆ ದಿನ ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ: 08232–231804ನ್ನು ಸಂಪರ್ಕಿಸಬಹುದಾಗಿದೆ.

ದಾನಿಗಳು ನೇತ್ರದಾನ ಮಾಡಲು ಮುಂದಾಗಿ: ನಂದೀಶ್



ಭಾರತೀನಗರ, ಅ.3– ಸಮಾಜದಲ್ಲಿರುವ ಅಂಧತ್ವ ನಿವಾರಣೆ ಮಾಡುವ ನಿಟ್ಟಿನಲ್ಲಿ ದಾನಿಗಳು ನೇತ್ರದಾನ ಮಾಡಲು ಮುಂದಾಗಬೇಕು ಎಂದು ಭಾರತೀನಗರ ರೋಟರಿ ಅಧ್ಯಕ್ಷ ನಂದೀಶ್ ಮನವಿ ಮಾಡಿದರು.

ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಭಾರತೀನಗರ ರೋಟರಿ ಸಂಸ್ಥೆ ವತಿಯಿಂದ ಬೆಂಗಳೂರಿನ ಶಂಕರ್ ಕಣ್ಣಿನ ಆಸ್ಪತ್ರೆ ಆಶ್ರಯದಲ್ಲಿ ಏರ್ಪಡಿಸಿದ್ದ ಉಚಿತ ನೇತ್ರ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಲಕ್ಷಾಂತರ ಮಂದಿ ಅಂಧರು ದುಸ್ತರದ ಜೀವನ ಸಾಗಿಸುತ್ತಿದ್ದು, ಅವರು ಬೆಳಕು ಕಾಣಲು ದಾನಿಗಳ ಅಗತ್ಯವಿದೆ ಎಂದು ತಿಳಿಸಿದರು.

ಶಿಬಿರದಲ್ಲಿ 102 ಮಂದಿ ನೇತ್ರ ತಪಾಸಣೆಗೊಳಪಟ್ಟರು. ಇವರಲ್ಲಿ 42 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಗೊಂಡಿದ್ದು, ಅವರನ್ನು ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ಯಲಾಯಿತು. ಶಸ್ತ್ರ ಚಿಕಿತ್ಸೆಗೆ ಒಳಪಟ್ಟವರಿಗೆ ಭಾರತೀ ಎಜುಕೇಷನ್ ಟ್ರಸ್ಟ್‌ನ ಆಶಯ್ ಊಟದ ವ್ಯವಸ್ಥೆ ಕಲ್ಪಿಸಿದ್ದರು.

ಈ ವೇಳೆ ಮಧು ಜಿ.ಮಾದೇಗೌಡ ಅಭಿಮಾನಿಗಳ ಬಳಗದ ಸ್ವರೂಪ್‌ಚಂದ್ರ, ಗಿರೀಶ್, ಆರ್.ಸಿದ್ದಪ್ಪ, ರೋಟರಿ ಸಂಸ್ಥೆಯ ಕಾರ್ಯದರ್ಶಿ ಶಶಿಕುಮಾರ್, ತೈಲಪ್ಪ ಮರಿಚನ್ನೇಗೌಡ, ಶಿವರಾಮೇಗೌಡ, ಆಡಳಿತ ವೈದ್ಯಾಧಿಕಾರಿ ಡಾ.ಜಗದೀಶ್, ಕಣ್ಣಿನ ವೈದ್ಯಾಧಿಕಾರಿ ಗುರುಮೂರ್ತಿ, ಎಸ್.ಕೆ.ತಮ್ಮೇಗೌಡ ಸೇರಿದಂತೆ ಹಲವರಿದ್ದರು.

ಕಟ್ಟೆದೊಡ್ಡಿಯಲ್ಲಿ ಬೀಡುಬಿಟ್ಟ ಕಾಡಾನೆ


ಫೈಲ್ ಚಿತ್ರ

ಮಂಡ್ಯ, ಅ.3– ಸೋಮವಾರ ಮಂಡ್ಯ ನಗರ ವ್ಯಾಪ್ತಿಯಲ್ಲಿ ಬೀಡುಬಿಟ್ಟು ಭಾರಿ ಆತಂಕ ಸೃಷ್ಟಿಸಿದ್ದ ಕಾಡಾನೆಗಳು ಮಂಗಳವಾರ ಮಂಡ್ಯ ನಗರದಿಂದ ನಾಲ್ಕೈದು ಕಿಲೋಮೀಟರ್ ದೂರವಿರುವ ಕಟ್ಟೆದೊಡ್ಡಿ ಗ್ರಾಮದ ಜಮೀನಿನಲ್ಲಿ ಬೀಡು ಬಿಟ್ಟಿವೆ.

ಕಳೆದೊಂದು ವಾರದ ಹಿಂದೆ ಚನ್ನಪಟ್ಟಣ ಅರಣ್ಯ ಪ್ರದೇಶದಿಂದ ಬಂದಿರುವ ಕಾಡಾನೆಗಳು ಮಂಡ್ಯದ ಅಂಬರಹಳ್ಳಿ, ಬೂದನೂರು, ಚಿಕ್ಕಮಂಡ್ಯ, ಮಂಡ್ಯ ನಗರ ವ್ಯಾಪ್ತಿಯ ರಾಮಕೃಷ್ಣ ಚಿತ್ರಮಂದಿರದ ಕಟ್ಟಡದ ಹಿಂಭಾಗ ಬೀಡು ಬಿಟ್ಟಿದ್ದವು. ಇದರಿಂದ ಮಂಡ್ಯ ನಗರದ ಜನ ಆತಂಕಗೊಂಡಿದ್ದರು. ಜೊತೆಗೆ ಅರಣ್ಯ ಇಲಾಖೆ ಹಾಗೂ ಪೊಲೀಸ್ ಸಿಬ್ಬಂದಿ ಆನೆಗಳು ಮಂಡ್ಯ ನಗರದ ಒಳಗೆ ಪ್ರವೇಶಿಸದಂತೆ ಭಾರಿ ಕಟ್ಟೆಚ್ಚರ ವಹಿಸಿದ್ದರು.

ಕಳೆದ ಸೋಮವಾರ ಸಂಜೆಯಿಂದ ಅರಣ್ಯ ಇಲಾಖೆ ಸಿಬ್ಬಂದಿ ಡ್ರೋನ್ ಸಹಾಯ ಹಾಗೂ ಬೆಂಗಳೂರಿನಿಂದ ಬಂದಿರುವ ಇಸ್ರೇಲ್ ಮೂಲದ ತಂತ್ರಜ್ಞರ ಮೂಲಕ ಕಾರ್ಯಾಚರಣೆ ನಡೆಸಿ ಆನೆಗಳನ್ನು ಮತ್ತೆ ಕಾಡಿಗಟ್ಟಲು ಶತಪ್ರಯತ್ನ ಮಾಡಿದರಾದರೂ ನಗರ ವ್ಯಾಪ್ತಿಗೆ ಆನೆಗಳು ಬಾರದಂತೆ ನೋಡಿಕೊಂಡಿದ್ದು, ಮಂಡ್ಯ ನಗರದಿಂದ ದೂವಿರುವ ಕಟ್ಟೆದೊಡ್ಡಿ ಎಂಬ ಗ್ರಾಮದ ಕಡೆಗೆ ಆನೆಗಳು ತೆರಳಿವೆ. ಇಂದು ಸಂಜೆ ವೇಳೆಗೆ ಮತ್ತೆ ಡ್ರೋನ್ ಸಹಾಯದ ಮೂಲಕ ಕಾರ್ಯಾಚರಣೆ ಆರಂಭಿಸಿರುವ ಸಿಬ್ಬಂದಿಗಳು ಶತಾಯಗತಾಯ ಆನೆಗಳನ್ನು ಕಾಡಿಗೆ ಅಟ್ಟಲು ಸರ್ವಪ್ರಯತ್ನ ನಡೆಸಿದ್ದಾರೆ.

ಪಿಡಿಓ ಕಾರ್ಯವೈಖರಿಗೆ ಗ್ರಾಮಸ್ಥರು, ಸದಸ್ಯರ ಆಕ್ರೋಶ

ಗ್ರಾಮ ಸಭೆ ರದ್ದು, ವಾರ್ಡ್ ಸಭೆ ನಡೆಸಲು ಆಗ್ರಹ



ಬನ್ನೂರು, ಅ.3– ಪಟ್ಟಣದ ಸಮೀಪದ ಕೊಡಗಹಳ್ಳಿ ಪಂಚಾಯ್ತಿ ವ್ಯಾಪ್ತಿಯ ಮಾದಿಗಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ 2022–23ನೇ ಸಾಲಿನ ಲೆಕ್ಕ ಜಮಾಬಂದಿ ಹಾಗೂ ಗ್ರಾಮ ಸಭೆಯನ್ನು ಪಿಡಿಓ ಅವರ ಕಾರ್ಯವೈಖರಿಗೆ ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ರದ್ದುಪಡಿಸಿರುವ ಘಟನೆ ಸಂಭವಿಸಿದೆ.

ಪಟ್ಟಣದ ಸಮೀಪದ ಕೊಡಗಹಳ್ಳಿ ಗ್ರಾಮ ಪಂಚಾಯ್ತಿಯಿಂದ ನರೇಗಾ ಯೋಜನೆ, ಗ್ರಾಮಸಭೆ, ಲೆಕ್ಕಜಮಾಬಂಧಿ ಕುರಿತಂತೆ ಮಾದಿಗಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಸೋಮವಾರ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಗಾಂಧೀಜಿಯವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ ಆರಂಭಿಸಲಾಯಿತು.

ಈ ಸಂದರ್ಭದಲ್ಲಿ ಪಿಡಿಓ ತಿಲಕ್‌ರಾಜ್ 2023–24ನೇ ಸಾಲಿನ ಕ್ರಿಯಾಯೋಜನೆಯನ್ನು ಮಂಡಿಸುವ ಸಮಯದಲ್ಲಿ ಗ್ರಾಮಪಂಚಾಯ್ತಿಯ ಸದಸ್ಯರಾದ ಕೆ.ಎಸ್.ಧನಂಜಯ, ಮಹೇಶ್, ಮೋಹನ್, ಪುಟ್ಟಸ್ವಾಮಿ, ಉಮಾರವರು 'ಗ್ರಾಮದ ವಾರ್ಡ್ ಸಭೆಯನ್ನು ಕರೆಯದೇ ಬಂದಿರುವ ಅನುದಾನದ ಬಗ್ಗೆ ಮಾಹಿತಿಯು ನೀಡದೇ ಹೇಗೆ ಕ್ರಿಯಾಯೋಜನೆಯನ್ನು ರೂಪಿಸಿದ್ದೀರಿ' ಎಂದು ಪ್ರಶ್ನಿಸಿದರು.

ಹಿಂದೆ ಇದ್ದ ಪಿಡಿಓ ಹಾಗೂ ಅಧ್ಯಕ್ಷರ ಅವಧಿಯಲ್ಲಿ ನಡೆದ ಸಭೆಯನ್ನು ತಾವು ಮಾಡಿದ್ದಾಗಿ ಸಮಜಾಯಿಷಿ ನೀಡಲು ಮುಂದಾದಾಗ ಇದನ್ನು ಒಪ್ಪದ ಸದಸ್ಯರು ಗ್ರಾಮಸಭೆಯನ್ನು ರದ್ದು ಮಾಡುವಂತೆ ಆಗ್ರಹಿಸಿದರು. ಅರವಟ್ಟಿಗೆಕೊಪ್ಪಿನ ಗ್ರಾಮಸ್ಥ ಗಿರೀಶ್ ಮಾತನಾಡಿ, 1954ರಲ್ಲಿ ತನ್ನ ತಾತನ ಹೆಸರಿನಲ್ಲಿರುವ ನಿವೇಶನವನ್ನು ಡಿಮ್ಯಾಂಡ್ ಪ್ರತಿ ಇದ್ದರೂ ಅದನ್ನು ಚುನಾವಣೆಯ ನೀತಿ ಸಂಹಿತೆ ಇರುವ ಸಂದರ್ಭದಲ್ಲಿ ರಮೇಶ ಎನ್ನುವವರಿಗೆ ಅಕ್ರಮವಾಗಿ ಈಸ್ವತ್ತು ಖಾತೆಯನ್ನು ಮಾಡಿಕೊಟ್ಟಿದ್ದು ಸುಳ್ಳು ದಾಖಲಾತಿಯನ್ನು ಸೃಷ್ಟಿಸಿ ಅಕ್ರಮ ಖಾತೆಯನ್ನು ಮಾಡಿರುವ ಪಿಡಿಓ ತಿಲಕ್‌ರಾಜ್‌ರವರ ಮೇಲೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.

ಜೊತೆಗೆ ಪಂಚಾಯ್ತಿಗೆ ಅರ್ಜಿಯನ್ನು ಸಲ್ಲಿಸಿದರೆ ಅದಕ್ಕೆ ಸೂಕ್ತವಾದ ಉತ್ತರವನ್ನು ನೀಡದೇ ಕೇವಲ ಹಿಂಬರಹವನ್ನು ನೀಡಿ ಕಳುಹಿಸುತ್ತಿದ್ದಾರೆಯೇ ವಿನಃ ಯಾವುದೇ ಪ್ರಯೋಜನವಾಗುತ್ತಿಲ್ಲ. ಇವರು ಕೊಡಗಹಳ್ಳಿ ಪಂಚಾಯ್ತಿಗೆ ಪಿಡಿಓ ಆಗಿ ಬಂದ ದಿನದಿಂದಲೂ ಇಲ್ಲಿಯವರೆಗೂ ಯಾವುದೇ ಗ್ರಾಮಸಭೆಯನ್ನಾಗಲಿ, ವಾರ್ಡ್‌ಸಭೆಯನ್ನಾಗಲಿ ಮಾಡಿಲ್ಲ. ಇಂತಹ ಅಧಿಕಾರಿಗಳು ನಮಗೆ ಬೇಡ ಎಂದು ಪಟ್ಟುಹಿಡಿದರು.

ಮಾದಿಗಹಳ್ಳಿಯಲ್ಲಿನ ಸಮಸ್ಯೆಗಳು ಹಲವಾರು ಇವೆ. ಇವುಗಳನ್ನು ಬಗೆಹರಿಸಲು ಸೂಕ್ತವಾದ ಕ್ರಮವನ್ನು ಕೈಗೊಂಡು ಕ್ರಿಯಾಯೋಜನೆಯನ್ನು ರೂಪಿಸಲು ಸ್ಥಳಕ್ಕೆ ಭೇಟಿ ನೀಡಬೇಕು. ಆದರೆ ಪಿಡಿಓರವರು ಸ್ಥಳಕ್ಕೆ ಭೇಟಿಯೇ ನೀಡಿಲ್ಲ ಎಂದು ಕೆಲ ಮಾದಿಗಹಳ್ಳಿ ಗ್ರಾಮಸ್ಥರು ದೂರಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ರೇಖಾ, ಸಹಾಯಕ ನಿರ್ದೇಶಕ ಸಿ.ಆರ್. ಕೃಷ್ಣ, ಸಹಾಯಕ ನಿರ್ದೇಶಕ ಡಾ. ಲಿಂಗರಾಜು ಸಭೆಯನ್ನು ಪಂಚಾಯ್ತಿಯಲ್ಲಿಯೇ ಕರೆಯಬೇಕು. ಸದಸ್ಯರು ಕೇಳುವ ತಕರಾರುಗಳಿಗೆ ಅಲ್ಲಿಯೇ ಮಾಹಿತಿಯನ್ನು ನೀಡಬಹುದು. ಪಂಚಾಯ್ತಿಯಲ್ಲಿಯೇ ಮುಂದಿನ ದಿನಗಳಲ್ಲಿ ಸಭೆಯನ್ನು ಕರೆಯುವಂತೆ ನಿರ್ದೇಶನವನ್ನು ನೀಡಿ ಸಭೆಯನ್ನು ರದ್ದುಗೊಳಿಸಲಾಯಿತು.

ಕ್ಯಾನ್ಸರ್ ಆಸ್ಪತ್ರೆ ಕಾಮಗಾರಿಗೆ 5.65 ಕೋಟಿ ರೂ. ಬಿಡುಗಡೆ



ಮಂಡ್ಯ, ಅ.3– ಜಿಲ್ಲೆಯಲ್ಲಿ ಅನುದಾನದ ಕೊರತೆಯಿಂದ ಕ್ಯಾನ್ಸರ್ ಆಸ್ಪತ್ರೆ ಕಾಮಗಾರಿ ಪೂರ್ಣಗೊಂಡಿರಲಿಲ್ಲ. ಅನೇಕ ಬಾರಿ ಸಭೆಗಳನ್ನು ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ ನಂತರ 5.65 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಕಟ್ಟಡ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಮಂಗಳವಾರ ಮಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಮಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭ ಬಾಕಿ ಉಳಿದಿರುವ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದು, ಅವರ ಆದೇಶದ ಮೇರೆಗೆ ಉಳಿದಿರುವ ಸಿವಿಲ್ ಕಾಮಗಾರಿ ಪೂರ್ಣಗೊಳಿಸಲು ಇಂದು ಅಧಿಕಾರಿಗಳ ಜೊತೆ ಚರ್ಚಿಸಿ, ಎರಡ್ಮೂರು ದಿನಗಳಲ್ಲಿ ಸಿವಿಲ್ ಕಾಮಗಾರಿ ಪ್ರಾರಂಭಿಸಲು ಸೂಚಿಸಿದರು.

ಕ್ಯಾನ್ಸರ್ ಕೇರ್ ಕೇಂದ್ರಕ್ಕೆ ಸಂಬಂಧಪಟ್ಟ ಉಪಕರಣಗಳ ಖರೀದಿಗೆ ಟೆಂಡರ್ ಕರೆಯುವುದು ಮತ್ತು ಸಿಬ್ಬಂದಿ ನೇಮಕಾತಿ, ಗ್ರಂಥಾಲಯ, ಪರೀಕ್ಷಾ ಕೊಠಡಿ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ ಎಂದರು. ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುವ ರೋಗಿಗಳು ಹಾಗೂ ಅವರನ್ನು ಆರೈಕೆ ಮಾಡಲು ಬರುವವರಿಗೆ ಶೌಚಾಲಯ ಹಾಗೂ ಸ್ನಾನದ ಗೃಹದ ಕೊರತೆ ಬಗ್ಗೆ ತಿಳಿಸಿದ್ದು, ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಾಣ ಮಾಡಲು ಸಭೆ ನಡೆಸಿ ಜಾಗ ಗುರುತಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ರೋಗಿಗಳ ಜೊತೆ ಬರುವ ಸಹಾಯಕರಿಗೆ ವಿಶ್ರಾಂತಿ ತಾಣ ನಿರ್ಮಿಸಲು ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಅದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಕೈಗಾರಿಕೆ ಸಂಸ್ಥೆಗಳು CSR ಅನುದಾನದ ಮೂಲಕ ಅಥವಾ ದಾನಿಗಳ ಮೂಲಕ ವಿಶ್ರಾಂತಿ ಗೃಹ/ ತಾಣ ನಿರ್ಮಾಣ ಮಾಡಲು ಚಿಂತಿಸಲಾಗುತ್ತಿದೆ ಎಂದರು.

ಈ ವೇಳೆ ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಮಿಮ್ಸ್ ಆಸ್ಪತ್ರೆ ನಿರ್ದೇಶಕ ಡಾ.ಬಿ.ಜೆ ಮಹೇಂದ್ರ, DHO ಡಾ. ಕೆ.ಮೋಹನ್, ಜಿಲ್ಲಾ ಸರ್ಕಾರಿ ಆಸ್ಪತ್ರೆ ಅಧೀಕ್ಷಕ ಡಾ.ಶ್ರೀಧರ್, ಮಿಮ್ಸ್ ಆಡಳಿತ ಅಧಿಕಾರಿ ಡಾ.ಜಾನ್ಸನ್, ಆರೋಗ್ಯ ಇಲಾಖೆ ಡಾ.ಸೋಮಶೇಖರ್ ಹಾಗೂ ಬೆಟ್ಟಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಆಲಗೂಡು ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ವಜಾ

ಆಡಳಿತಾಧಿಕಾರಿ ನೇಮಕ, ಅವಿಶ್ವಾಸ ಗೆದ್ದು ಬೀಗುತ್ತಿದ್ದವರಿಗೆ ಹಿನ್ನಡೆ

ತಿ.ನರಸೀಪುರ, ಅ.3– ತೀವ್ರ ಕುತೂಹಲ ಕೆರಳಿಸಿದ್ದ ಆಲಗೂಡು ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ವಜಾಗೊಳಿಸಿರುವ ಸಹಕಾರ ಇಲಾಖೆ ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿ ಆದೇಶ ಹೊರಡಿಸಿದೆ.

ಜಿಲ್ಲಾ ಸಹಕಾರ ಸಂಘವು ಆಡಳಿತಾಧಿಕಾರಿ ನೇಮಕ ಮಾಡಿರುವ ಆದೇಶ ಹೊರಡಿಸಿದ್ದು,ಸಂಘದ ಒಂಬತ್ತು ಮಂದಿ ನಿರ್ದೇಶಕರು ಸಾಮೂಹಿಕ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಸಹಕಾರ ಸಂಘದ ಜೆ.ರಮೇಶ್ ಅವರನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡಿದೆ.

ಅಧ್ಯಕ್ಷ ವೀರಭದ್ರಪ್ಪ ತಮ್ಮ ಅಧಿಕಾರಾವಧಿ ಮುಗಿದಿದ್ದರೂ ರಾಜೀನಾಮೆ ಕೊಡದ ಹಿನ್ನೆಲೆಯಲ್ಲಿ ಸಂಘದ ಒಟ್ಟು 12 ನಿರ್ದೇಶಕರ ಪೈಕಿ 7 ಮಂದಿ ಸಹಿ ಮಾಡಿ ಮೈಸೂರಿನ ಸಹಕಾರ ಸಂಘದ ನಿಬಂಧಕರಿಗೆ ಮನವಿ ಸಲ್ಲಿಸಿ ಅವಿಶ್ವಾಸ ನಿರ್ಣಯದ ಸಭೆ ಕರೆಯುವಂತೆ ಕೋರಿದ್ದರು. ಅನಂತರ ನಡೆದ ಅವಿಶ್ವಾಸ ನಿರ್ಣಯದ ಸಭೆಯಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿತ್ತು.ಇದರಿಂದ ಅವಿಶ್ವಾಸ ನಿರ್ಣಯದ ನೇತೃತ್ವ ವಹಿಸಿದ್ದ ನಿರ್ದೇಶಕರಿಗೆ ಮುಖಭಂಗ ಉಂಟಾಗಿತ್ತು. ಮತ್ತೆ ಮರಳಿ ಯತ್ನ ಮಾಡಿದ ಒಂಬತ್ತು ಮಂದಿ ನಿರ್ದೇಶಕರು ಸಾಮೂಹಿಕ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಸಹಕಾರ ಸಂಘದ ನಿಯಮದನ್ವಯ ಸಭೆ ನಡೆಸಲು ಕೋರಂ ಇಲ್ಲದ್ದನ್ನು ಪರಿಗಣಿಸಿ ಸಹಕಾರ ಇಲಾಖೆ ಆಡಳಿತ ಮಂಡಳಿಯನ್ನು ವಜಾಗೊಳಿಸಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದೆ. ಆ ಮೂಲಕ ಅವಿಶ್ವಾಸ ನಿರ್ಣಯ ಗೆದ್ದು ಬೀಗಿದ್ದ ವೀರಭದ್ರಪ್ಪರಿಗೆ ಹಿನ್ನಡೆ ಉಂಟಾಗಿದೆ.ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿರುವ ಹಿನ್ನೆಲೆಯಲ್ಲಿ ಮತ್ತೆ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಅಧ್ಯಕ್ಷಗಾದಿ ಯಾರಿಗೆ?



ಸಹಕಾರ ಸಂಘದ ಅಧ್ಯಕ್ಷರಾಗಿದ್ದ ವೀರಭದ್ರಪ್ಪ ಅವರನ್ನು ಅವಿಶ್ವಾಸ ನಿರ್ಣಯದ ಮೂಲಕ ಪದಚ್ಯುತಗೊಳಿಸಿ ಹಿರಿಯ ನಿರ್ದೇಶಕ ಚಿಕ್ಕನಂಜಯ್ಯರಿಗೆ ಅಧ್ಯಕ್ಷ ಸ್ಥಾನದ ಪಟ್ಟ ಕಟ್ಟಬೇಕೆಂಬ ನಿರ್ದೇಶಕರುಗಳ ಬಯಕೆಗೆ ಮತ್ತೆ ಚಾಲನೆ ದೊರಕಿದೆ. ಚಿಕ್ಕನಂಜಯ್ಯನವರೇ ಅಧ್ಯಕ್ಷರಾಗಬೇಕೆಂಬ ಉದ್ದೇಶದೊಂದಿಗೆ ವೀರಭದ್ರಪ್ಪರವರ ವಿರುದ್ಧ ಅವಿಶ್ವಾಸ ಮಂಡಿಸಲಾಗಿತ್ತು. ಆದರೆ ಅವಿಶ್ವಾಸ ತಂದವರೇ ವೀರಭದ್ರಪ್ಪ ಪರ ಮತ ಚಲಾಯಿಸಿದ್ದರಿಂದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿತ್ತು. ಆದರೀಗ ಸಹಕಾರ ಸಂಘಕ್ಕೆ ಆಡಳಿತಾಧಿಕಾರಿ ನೇಮಕವಾಗಿರುವುದರಿಂದ ಚುನಾವಣೆ ನಡೆಯುವುದು ಖಚಿತವಾಗಿದೆ.ಈಗಲಾದರೂ ಅಧ್ಯಕ್ಷ ಸ್ಥಾನದ ಆಕಾಂಕ್ಷೆ ಹೊಂದಿರುವ ಚಿಕ್ಕನಂಜಯ್ಯರ ಆಸೆ ಈಡೇರಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಐಸಿಸಿ ವಿಶ್ವಕಪ್ 2023ಕ್ಕೆ ಕ್ಷಣಗಣನೆ

ಬುಧವಾರ 4 ಅಕ್ಟೋಬರ್ 2023

ವಿಶ್ವಕಪ್ ಕ್ರಿಕೆಟ್ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಅ.5	ಇಂಗ್ಲೆಂಡ್ V/S ನ್ಯೂಜಿಲೆಂಡ್	ಅಹ್ಮದಾಬಾದ್	ಮಧ್ಯಾಹ್ನ 2
ಅ.6	ಪಾಕಿಸ್ತಾನ V/S ನೆದರ್‌ಲೆಂಡ್	ಹೈದರಾಬಾದ್	ಮಧ್ಯಾಹ್ನ 2
ಅ.7	ಆಫ್ಘಾನಿಸ್ತಾನ್ V/S ಬಾಂಗ್ಲಾದೇಶ	ಧರ್ಮಶಾಲಾ	ಬೆಳಗ್ಗೆ 10.30
ಅ.7	ದಕ್ಷಿಣ ಆಫ್ರಿಕಾ V/S ಶ್ರೀಲಂಕಾ	ದೆಹಲಿ	ಮಧ್ಯಾಹ್ನ 2
ಅ.8	ಆಸ್ಟ್ರೇಲಿಯಾ V/S ಭಾರತ	ಚೆನ್ನೈ	ಮಧ್ಯಾಹ್ನ 2
ಅ.9	ನ್ಯೂಜಿಲ್ಯಾಂಡ್ V/S ನೆದರ್‌ಲ್ಯಾಂಡ್	ಹೈದರಾಬಾದ್	ಮಧ್ಯಾಹ್ನ 2
ಅ.10	ಬಾಂಗ್ಲಾದೇಶ V/S ಇಂಗ್ಲೆಂಡ್	ಧರ್ಮಶಾಲಾ	ಬೆಳಗ್ಗೆ 10.30
ಅ.10	ಪಾಕಿಸ್ತಾನ V/S ಶ್ರೀಲಂಕಾ	ಹೈದರಾಬಾದ್	ಮಧ್ಯಾಹ್ನ 2
ಅ.11	ಆಫ್ಘಾನಿಸ್ತಾನ V/S ಭಾರತ	ದೆಹಲಿ	ಮಧ್ಯಾಹ್ನ 2
ಅ.12	ಆಸ್ಟ್ರೇಲಿಯಾ V/S ದಕ್ಷಿಣ ಆಫ್ರಿಕಾ	ಲಕ್ನೌ	ಮಧ್ಯಾಹ್ನ 2
ಅ.13	ಬಾಂಗ್ಲಾದೇಶ V/S ನ್ಯೂಜಿಲ್ಯಾಂಡ್	ಚೆನ್ನೈ	ಮಧ್ಯಾಹ್ನ 2
ಅ.14	ಭಾರತ V/S ಪಾಕಿಸ್ತಾನ	ಅಹಮದಾಬಾದ್	ಮಧ್ಯಾಹ್ನ 2
ಅ.15	ಆಫ್ಘಾನಿಸ್ತಾನ V/S ಇಂಗ್ಲೆಂಡ್	ದೆಹಲಿ	ಮಧ್ಯಾಹ್ನ 2
ಅ.16	ಆಸ್ಟ್ರೇಲಿಯಾ V/S ಶ್ರೀಲಂಕಾ	ಲಕ್ನೌ	ಮಧ್ಯಾಹ್ನ 2
ಅ.17	ದ.ಆಫ್ರಿಕಾ V/S ನೆದರ್‌ಲ್ಯಾಂಡ್	ಧರ್ಮಶಾಲಾ	ಮಧ್ಯಾಹ್ನ 2
ಅ.18	ಆಫ್ಘಾನಿಸ್ತಾನ V/S ನ್ಯೂಜಿಲ್ಯಾಂಡ್	ಚೆನ್ನೈ	ಮಧ್ಯಾಹ್ನ 2
ಅ.19	ಬಾಂಗ್ಲಾದೇಶ V/S ಭಾರತ	ಪುಣೆ	ಮಧ್ಯಾಹ್ನ 2
ಅ.20	ಆಸ್ಟ್ರೇಲಿಯಾ V/S ಪಾಕಿಸ್ತಾನ	ಬೆಂಗಳೂರು	ಮಧ್ಯಾಹ್ನ 2
ಅ.21	ನೆದರ್‌ಲ್ಯಾಂಡ್ V/S ಶ್ರೀಲಂಕಾ	ಲಕ್ನೌ	ಬೆಳಗ್ಗೆ 10.30
ಅ.21	ಇಂಗ್ಲೆಂಡ್ V/S ದಕ್ಷಿಣ ಆಫ್ರಿಕಾ	ಮುಂಬೈ	ಮಧ್ಯಾಹ್ನ 2
ಅ.22	ಭಾರತ V/S ನ್ಯೂಜಿಲ್ಯಾಂಡ್	ಧರ್ಮಶಾಲಾ	ಮಧ್ಯಾಹ್ನ 2
ಅ.23	ಆಫ್ಘಾನಿಸ್ತಾನ V/S ಪಾಕಿಸ್ತಾನ	ಚೆನ್ನೈ	ಮಧ್ಯಾಹ್ನ 2
ಅ.24	ಬಾಂಗ್ಲಾದೇಶ V/S ದಕ್ಷಿಣ ಆಫ್ರಿಕಾ	ಮುಂಬೈ	ಮಧ್ಯಾಹ್ನ 2
ಅ.25	ಆಸ್ಟ್ರೇಲಿಯಾ V/S ನೆದರ್‌ಲ್ಯಾಂಡ್	ದೆಹಲಿ	ಮಧ್ಯಾಹ್ನ 2
ಅ.26	ಇಂಗ್ಲೆಂಡ್ V/S ಶ್ರೀಲಂಕಾ	ಬೆಂಗಳೂರು	ಮಧ್ಯಾಹ್ನ 2
ಅ.27	ಪಾಕಿಸ್ತಾನ V/S ದಕ್ಷಿಣ ಆಫ್ರಿಕಾ	ಚೆನ್ನೈ	ಮಧ್ಯಾಹ್ನ 2
ಅ.28	ಆಸ್ಟ್ರೇಲಿಯಾ V/S ನ್ಯೂಜಿಲ್ಯಾಂಡ್	ಧರ್ಮಶಾಲಾ	ಬೆಳಗ್ಗೆ 10.30
ಅ.28	ಬಾಂಗ್ಲಾದೇಶ V/S ನೆದರ್‌ಲ್ಯಾಂಡ್	ಕೋಲ್ಕತ್ತಾ	ಮಧ್ಯಾಹ್ನ 2
ಅ.29	ಇಂಗ್ಲೆಂಡ್ V/S ಭಾರತ	ಲಕ್ನೌ	ಮಧ್ಯಾಹ್ನ 2
ಅ.30	ಆಫ್ಘಾನಿಸ್ತಾನ V/S ಶ್ರೀಲಂಕಾ	ಪುಣೆ	ಮಧ್ಯಾಹ್ನ 2
ಅ.31	ಬಾಂಗ್ಲಾದೇಶ V/S ಪಾಕಿಸ್ತಾನ	ಕೋಲ್ಕತ್ತಾ	ಮಧ್ಯಾಹ್ನ 2
ನ.1	ನ್ಯೂಜಿಲ್ಯಾಂಡ್ V/S ದ.ಆಫ್ರಿಕಾ	ಪುಣೆ	ಮಧ್ಯಾಹ್ನ 2
ನ.2	ಭಾರತ V/S ಶ್ರೀಲಂಕಾ	ಮುಂಬೈ	ಮಧ್ಯಾಹ್ನ 2
ನ.3	ಆಫ್ಘಾನಿಸ್ತಾನ V/S ನೆದರ್‌ಲ್ಯಾಂಡ್	ಲಕ್ನೌ	ಮಧ್ಯಾಹ್ನ 2
ನ.4	ನ್ಯೂಜಿಲ್ಯಾಂಡ್ V/S ಪಾಕಿಸ್ತಾನ	ಬೆಂಗಳೂರು	ಬೆಳಗ್ಗೆ 10.30
ನ.4	ಆಸ್ಟ್ರೇಲಿಯಾ V/S ಇಂಗ್ಲೆಂಡ್	ಅಹಮದಾಬಾದ್	ಮಧ್ಯಾಹ್ನ 2
ನ.5	ಭಾರತ V/S ದಕ್ಷಿಣ ಆಫ್ರಿಕಾ	ಕೋಲ್ಕತ್ತಾ	ಮಧ್ಯಾಹ್ನ 2
ನ.6	ಬಾಂಗ್ಲಾದೇಶ V/S ಶ್ರೀಲಂಕಾ	ದೆಹಲಿ	ಮಧ್ಯಾಹ್ನ 2
ನ.7	ಆಸ್ಟ್ರೇಲಿಯಾ V/S ಆಫ್ಘಾನಿಸ್ತಾನ	ಮುಂಬೈ	ಮಧ್ಯಾಹ್ನ 2
ನ.8	ಇಂಗ್ಲೆಂಡ್ V/S ನೆದರ್‌ಲ್ಯಾಂಡ್	ಪುಣೆ	ಮಧ್ಯಾಹ್ನ 2
ನ.9	ನ್ಯೂಜಿಲ್ಯಾಂಡ್ V/Sಶ್ರೀಲಂಕಾ	ಬೆಂಗಳೂರು	ಮಧ್ಯಾಹ್ನ 2
ನ.10	ಆಫ್ಘಾನಿಸ್ತಾನ V/S ದ.ಆಫ್ರಿಕಾ	ಅಹಮದಾಬಾದ್	ಮಧ್ಯಾಹ್ನ 2
ನ.11	ಆಸ್ಟ್ರೇಲಿಯಾ V/S ಬಾಂಗ್ಲಾದೇಶ	ಪುಣೆ	ಬೆಳಗ್ಗೆ 10.30
ನ.11	ಇಂಗ್ಲೆಂಡ್ V/S ಪಾಕಿಸ್ತಾನ	ಕೋಲ್ಕತ್ತಾ	ಮಧ್ಯಾಹ್ನ 2
ನ.12	ಭಾರತ V/S ನೆದರ್‌ಲ್ಯಾಂಡ್	ಬೆಂಗಳೂರು	ಮಧ್ಯಾಹ್ನ 2
ನ.15	ಮೊದಲನೇ ಸೆಮಿಫೈನಲ್	ಮುಂಬೈ	ಮಧ್ಯಾಹ್ನ 2
ನ.16	ಎರಡನೇ ಸೆಮಿಫೈನಲ್	ಕೋಲ್ಕತ್ತಾ	ಮಧ್ಯಾಹ್ನ 2
ನ.19	ಫೈನಲ್	ಅಹಮದಾಬಾದ್	ಮಧ್ಯಾಹ್ನ 2

ಮೋಹನ್‌ರಾಜ್, ಮಂಡ್ಯ

ಇಡೀ ಕ್ರೀಡಾ ಜಗತ್ತು ಕಾತುರದಿಂದ ಕಾಯುತ್ತಿರುವ ಐಸಿಸಿ ವಿಶ್ವಕಪ್–2023ಕ್ಕೆ ದಿನಗಣನೆ ಆರಂಭವಾಗಿದ್ದು, ಇದೇ ಮೊದಲ ಬಾರಿಗೆ ಭಾರತ ಪೂರ್ಣ ಪ್ರಮಾಣದ ಟೂರ್ನಿಯ ಆತಿಥ್ಯ ವಹಿಸಿಕೊಂಡಿದೆ

ವಿಶ್ವ ಕ್ರಿಕೆಟ್‌ನ ಅತಿದೊಡ್ಡ ಟೂರ್ನಿಯಾದ 13ನೇ ವಿಶ್ವಕಪ್ ಪಂದ್ಯಾವಳಿಗೆ ಅ.5ರಂದು ವರ್ಣರಂಜಿತ ಚಾಲನೆ ದೊರೆಯಲಿದ್ದು, ಇದಕ್ಕಾಗಿ 4ನೇ ಬಾರಿಗೆ ವಿಶ್ವಕಪ್ ಆತಿಥ್ಯ ವಹಿಸಿರುವ ಭಾರತ ಸಕಲ ಸಿದ್ಧತೆ ಕೈಗೊಂಡಿದೆ.

ಅ.5ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್, ರನ್ನರ್ ಅಪ್ ನ್ಯೂಜಿಲೆಂಡ್ ಮುಖಾಮುಖಿಯಾಗಲಿದ್ದು, ಪ್ರಧಾನಿ ಮೋದಿ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿರುವರು. ವಿಶ್ವಕಪ್ ಗೆಲ್ಲುವ ಹಾಟ್ ಫೇವರೇಟ್ ಅತಿಥೇಯ ಭಾರತ ಅ.8 ರಂದು ಚೆನ್ನೈನ ಎಂ.ಎಸ್.ಚಿದಂಬರಂ ಕ್ರೀಡಾಂಗಣದಲ್ಲಿ ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದೊಂದಿಗೆ ತನ್ನ ಅಭಿಯಾನ ಆರಂಭಿಸಲಿದ್ದು, ನ.19ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಮೈದಾನದಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ಟೂರ್ನಿಗೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಆಫ್ಘಾನಿಸ್ತಾನ, ನೆದರ್‌ಲೆಂಡ್ ಸೇರಿದಂತೆ 10 ತಂಡಗಳು ಅರ್ಹತೆ ಪಡೆದಿವೆ. ಪಂದ್ಯಾವಳಿಯಲ್ಲಿ 48 ಪಂದ್ಯಗಳು ನಡೆಯಲಿವೆ.

ಸೆಮಿಫೈನಲ್ ಪ್ರವೇಶ ಹೇಗೆ?: ಈ ಬಾರಿಯ ವಿಶ್ವಕಪ್‌ನಲ್ಲಿ ತಂಡಗಳನ್ನು ಗುಂಪುಗಳನ್ನಾಗಿ ವಿಭಾಗಿಸಿಲ್ಲ. ಅಲ್ಲದೇ ಸೂಪರ್ 6, ಸೂಪರ್ 8 ಹಾಗೂ ರೌಂಡ್ ರಾಬಿನ್ ಪದ್ಧತಿಯೂ ಇಲ್ಲ. ಪಂದ್ಯಾವಳಿಯಲ್ಲಿ ಪ್ರತಿ ತಂಡ ಲೀಗ್ ಹಂತದಲ್ಲಿ 9 ಪಂದ್ಯಗಳನ್ನು ಆಡಲಿದ್ದು, ಅತೀ ಹೆಚ್ಚು ಪಂದ್ಯ ಗೆಲ್ಲುವ ಮೊದಲ 4 ತಂಡಗಳು ಸೆಮಿಫೈನಲ್ ತಲುಪಲಿವೆ. ಸೆಮೀಸ್ ಪ್ರವೇಶಿಸಲು ಕನಿಷ್ಠ 6 ಪಂದ್ಯ ಗೆಲ್ಲಬೇಕಿದೆ. ಒಂದು ಪಂದ್ಯ ಗೆದ್ದರೆ 2 ಅಂಕ ಸಿಗಲಿದ್ದು, ಮುಂದಿನ ಹಂತಕ್ಕೇರಲು ರನ್‌ರೇಟ್ ಸಹ ಮಹತ್ವದ್ದಾಗಿರಲಿದೆ.

ಪಂದ್ಯ ನಡೆಯುವ ಮೈದಾನಗಳು: ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ (ಗುಜರಾತ್), ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ (ಕರ್ನಾಟಕ), ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣ (ತಮಿಳುನಾಡು), ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣ (ದೆಹಲಿ), ಧರ್ಮಶಾಲಾ ಎಚ್‌ಪಿಸಿಎ ಕ್ರೀಡಾಂಗಣ (ಹಿಮಾಚಲ ಪ್ರದೇಶ), ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣ (ತೆಲಂಗಾಣ), ಕೋಲ್ಕತ್ತಾದ ಈಡನ್ ಗಾರ್ಡನ್ ಕ್ರೀಡಾಂಗಣ (ಪಶ್ಚಿಮ ಬಂಗಾಳ), ಲಕ್ನೌನ ಬಿಆರ್‌ಎಸ್‌ಎಬಿವಿ ಕ್ರೀಡಾಂಗಣ (ಉತ್ತರ ಪ್ರದೇಶ), ಮುಂಬೈನ ವಾಂಖೇಡೆ ಕ್ರೀಡಾಂಗಣ (ಮಹಾರಾಷ್ಟ್ರ), ಪುಣೆಯ ಮಹಾರಾಷ್ಟ್ರ ಅಸೋಸಿಯೇಷನ್ ಕ್ರೀಡಾಂಗಣ (ಮಹಾರಾಷ್ಟ್ರ) ಸೇರಿದಂತೆ 10 ಮೈದಾನದಲ್ಲಿ ವಿಶ್ವಕಪ್ ಪಂದ್ಯಗಳು ನಡೆಯಲಿವೆ.

ಟೂರ್ನಿ ಬಹುಮಾನದ ಮೊತ್ತ: ವಿಶ್ವಕಪ್ ಚಾಂಪಿಯನ್ ತಂಡಕ್ಕೆ 4 ಮಿಲಿಯನ್ ಡಾಲರ್ (33 ಕೋಟಿ) ಹಾಗೂ ಟ್ರೋಫಿ ಸಿಗಲಿದ್ದು, ರನ್ನರ್ ಅಪ್ ತಂಡಕ್ಕೆ 2 ಮಿಲಿಯನ್ ಡಾಲರ್(16ಕೋಟಿ) ಸಿಗಲಿದೆ. ಇನ್ನು ಸೆಮಿಫೈನಲ್‌ನಲ್ಲಿ ಸೋಲುವ 2 ತಂಡಗಳಿಗೆ ತಲಾ 6 ಕೋಟಿ, ನಾಕೌಟ್ ಹಂತ ಪ್ರವೇಶಿಸಲು ವಿಫಲವಾಗುವ ಇತರ ಆರು ತಂಡಗಳು ತಲಾ 82 ಲಕ್ಷ ರೂ. ಲೀಗ್ ಹಂತದಲ್ಲಿ ಅಗ್ರಸ್ಥಾನ ಪಡೆಯುವ ತಂಡಗಳು ತಲಾ 33 ಲಕ್ಷ ಪ್ರೋತ್ಸಾಹ ಧನ ಪಡೆಯಲಿವೆ. ಒಟ್ಟಾರೆ ಈ ವಿಶ್ವಕಪ್‌ನ ಬಹುಮಾನದ ಗಾತ್ರ 83 ಕೋಟಿ ರೂ. ಎಂದು ಐಸಿಸಿ ತಿಳಿಸಿದೆ.



ತಂಡಗಳ ವಿವರ ಹಾಗೂ ಬಲಾಬಲ

ಭಾರತ



ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಶುಭ್‌ಮನ್ ಗಿಲ್, ಶ್ರೇಯಸ್ ಅಯ್ಯರ್, ವಿರಾಟ್ ಕೊಹ್ಲಿ, ಕೆ.ಎಲ್.ರಾಹುಲ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ರವೀಂದ್ರ ಜಡೇಜಾ, ರವಿಚಂದ್ರನ್ ಅಶ್ವಿನ್, ಜಸ್‌ಪ್ರೀತ್ ಬೂಮ್ರಾ, ಮಹಮ್ಮದ್ ಶಮಿ, ಮಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್, ಕುಲ್ದೀಪ್ ಯಾದವ್.

ವಿಶ್ವಕಪ್ ಸಾಧನೆ: 2 ಬಾರಿ ಚಾಂಪಿಯನ್,

ತಾರಾ ಆಟಗಾರರು: ಕೊಹ್ಲಿ, ರೋಹಿತ್ ಶರ್ಮಾ, ಕೆ.ಎಲ್.ರಾಹುಲ್.

ನ್ಯೂಜಿಲ್ಯಾಂಡ್



ಕೇನ್ ವಿಲಿಯಮ್ಸನ್ (ನಾಯಕ), ಟ್ರೆಂಟ್ ಬೌಲ್ಟ್, ಮಾರ್ಕ್ ಚಪ್ಮನ್, ಡೆವೊನ್ ಕಾನ್ವೆ, ಲಾಕಿ ಫರ್ಗುಸನ್, ಮ್ಯಾಟ್ ಹೆನ್ರಿ, ಟಾಮ್ ಲಾಥಮ್, ಡರ್ಲ್ ಮಿಚೆಲ್, ಜೇಮ್ಸ್ ನಿಶಾಮ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟ್ನರ್, ಇಶ್ ಸೋದಿ, ಟೀಮ್ ಸೌಥಿ, ವಿಲ್‌ಯಂಗ್.

ವಿಶ್ವಕಪ್ ಸಾಧನೆ: ಎರಡು ಬಾರಿ ರನ್ನರ್ ಅಪ್,

ತಾರಾ ಆಟಗಾರರು: ಕೇನ್ ವಿಲಿಯಮ್ಸನ್, ಬೌಲ್ಟ್, ಟೀಮ್ ಸೌಥಿ.

ಶ್ರೀಲಂಕಾ



ದಸನ್ ಶನಕಾ (ನಾಯಕ), ಕುಸಲ್ ಮೆಂಡೀಸ್ (ಉಪನಾಯಕ), ಚರಿತ್ ಹಸಲಂಕ, ಧನಂಜಯ ಡಿ.ಸಿಲ್ವಾ, ದುಶನ ಹೇಮಂತ, ದಿಮುತ್ ಕರುಣರತ್ನೆ, ಲಹಿರು ಕುಮಾರ, ದಿಲ್ಶಾನ್ ಮಧುಶಂಖ, ಪತುಂನಿಸಂಕ, ಮತೀಶ ಪತಿರಾಣ, ಕುಶಾಲ್ ಪೆರೇರಾ, ಕಸುನ್ ರಜೀತಾ, ಸದೀರಾ ಸಮರವಿಕ್ರಮ, ಮಹೀಶ ತೀಕ್ಷಣ, ದುನಿತ್ ವೆಲಲೆಗೆ.

ವಿಶ್ವಕಪ್ ಸಾಧನೆ: ಒಂದು ಬಾರಿ ಚಾಂಪಿಯನ್,

ತಾರಾ ಆಟಗಾರರು: ಶನಕಾ, ಕುಸಲ್ ಮೆಂಡೀಸ್, ವೆಲಲೆಗೆ.

ಆಸ್ಟ್ರೇಲಿಯಾ



ಪ್ಯಾಟ್ ಕಮ್ಮಿನ್ಸ್ (ನಾಯಕ), ಸ್ಟೀವ್ ಸ್ಮಿತ್, ಅಲೆಕ್ಸ್ ಕ್ಯಾರಿ, ಜೋಶ್ ಇಂಗ್ಲಿಸ್, ಸೀನ್ ಅಬಾಟ್, ಕ್ಯಾಮೆರಾನ್ ಗ್ರೀನ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಮಾರ್ನಸ್ ಲಬುಶೇನ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕಸ್ ಸ್ಟೊಯಿನಿಸ್, ಡೇವಿಡ್ ವಾರ್ನರ್, ಆಡಮ್ ಝಂಪಾ, ಮಿಚೆಲ್ ಸ್ಟಾರ್ಕ್.

ವಿಶ್ವಕಪ್ ಸಾಧನೆ: 5 ಬಾರಿ ಚಾಂಪಿಯನ್,

ತಾರಾ ಆಟಗಾರರು: ವಾರ್ನರ್, ಸ್ಟೀವ್ ಸ್ಮಿತ್, ಗ್ಲೆನ್ ಮ್ಯಾಕ್ಸ್‌ವೆಲ್.

ಪಾಕಿಸ್ತಾನ



ಬಾಬರ್ ಅಜಾಮ್ (ನಾಯಕ), ಶದಾಬ್ ಖಾನ್ (ಉಪನಾಯಕ), ಶಾಹಿನ್ ಅಫ್ರಿದಿ, ಇಫ್ತಕಾರ್ ಅಹಮದ್, ಹಸನ್ ಅಲಿ, ಸಲ್ಮಾನ್ ಅಲಿ ಅಗ, ಹುಸ್ಮಾ ಮಿರ್, ಮಹಮ್ಮದ್ ನವಾಜ್, ಹ್ಯಾರೀಸ್ ರೌಫ್, ಮಹಮ್ಮದ್ ರಿಜ್ವಾನ್, ಅಬ್ದುಲ್ಲಾ ಶಫೀ, ಸೌದ್ ಶಕೀಲ್, ಇಮಮುಲ್ ಹಕ್, ಮಹಮ್ಮದ್ ವಾಸಿಂ, ಫಕರ್ ಝಮಾನ್.

ವಿಶ್ವಕಪ್ ಸಾಧನೆ: ಒಂದು ಬಾರಿ ಚಾಂಪಿಯನ್,

ತಾರಾ ಆಟಗಾರರು: ಬಾಬರ್, ಶಾಹಿನ್ ಅಫ್ರಿದಿ, ಇಮಮುಲ್ ಹಕ್.

ಬಾಂಗ್ಲಾದೇಶ



ಶಕೀಬ್ ಅಲ್ ಹಸನ್ (ನಾಯಕ), ನಜ್ಮುಲ್ ಹುಸೇನ್ ಶಾಂಟೋ (ಉಪನಾಯಕ), ನಸೂಂ ಅಹಮದ್, ತಸ್ಕಿನ್ ಅಹಮದ್, ಲಿಟನ್ ದಾಸ್, ತನ್ಜೀಮ್ ಹಸನ್ ಸಕೀಬ್, ತನ್ಜೀಬ್ ಹಸನ್ ತಮಿಮ್, ತೋಹಿದ್ ಹ್ರಿದೋ, ಮೆಹದಿ ಹಸನ್, ಮೆಹದ್ಯೆ ಹಸನ್, ಶೋರಿಫುಲ್ ಇಸ್ಲಂ, ಮಹಮದ್ದುಲ್ಲಾ, ಹಸನ್ ಮಹಮುದ್, ಮುಶ್ಫಿಕರ್ ರಹಿಮ್, ಮುಸ್ತಾಫಿಜುರ್ ರೆಹಮಾನ್.

ವಿಶ್ವಕಪ್ ಸಾಧನೆ: ಒಂದು ಬಾರಿ ಕ್ವಾರ್ಟರ್ ಫೈನಲ್ ಪ್ರವೇಶ,

ತಾರಾ ಆಟಗಾರರು: ಶಕೀಬ್ ಅಲ್ ಹಸನ್, ಮುಶ್ಫಿಕರ್ ರಹಿಮ್,

ಇಂಗ್ಲೆಂಡ್




ಜೋಸ್ ಬಟ್ಲರ್ (ನಾಯಕ), ಮೊಹಿನ್ ಆಲಿ, ಗಸ್ ಅಟ್ಕಿನ್ಸೋ, ಜಾನಿ ಬ್ರಿಸ್ಟೋ, ಹ್ಯಾರಿ ಬ್ರೂಕ್, ಸಾಮ್ ಕರ್ರನ್, ಲಿಯಾಮ್ ಲಿವಿಂಗ್‌ಸ್ಟೋನ್, ಡೆವಿಲ್ ಮಲಾನ್, ಆದಿಲ್ ರಶೀದ್, ಜೋ ರೂಟ್, ಬೆನ್ ಸ್ಟೋಕ್ಸ್, ರಿಸಿ ಟೊಪ್ಲೇ, ಡೇವಿಡ್ ವಿಲ್ಲಿ, ಕ್ರಿಸ್ ವೋಕ್ಸ್, ಮಾರ್ಕ್‌ಹುಡ್.

ವಿಶ್ವಕಪ್ ಸಾಧನೆ: ಒಂದು ಬಾರಿ ಚಾಂಪಿಯನ್,

ತಾರಾ ಆಟಗಾರರು: ಬೆನ್ ಸ್ಟೋಕ್ಸ್, ಜೋಸ್ ಬಟ್ಲರ್, ಜಾನಿ ಬೇರ್‌ಸ್ಟೋ.

ದಕ್ಷಿಣ ಆಫ್ರಿಕಾ



ತೆಂಬಾ ಬಹುಮಾ (ನಾಯಕ), ಜೆರಾಯ್ಡ್ ಕೋಜ್ಜೀ, ಕ್ವಿಂಟಾನ್ ಡಿಕಾಕ್, ರೀಜಾ ಎನ್ರಿಕ್ಸ್, ಮಾರ್ಕೋ ಜಾನ್ಸನ್, ಹೆನ್ರಿಕ್ ಕ್ಲಾಸೇನ್, ಕೇಶವ್ ಮಹಾರಾಜ್, ಅದಿನ್ ಮರಕಮ್, ಡೇವಿಡ್ ಮಿಲ್ಲರ್, ಲುಂಗಿ ಎನ್‌ಗಿಡಿ, ಅಂಡಿಲೇ ಪ್ಲೇಹನುಕ್‌ವಾಲೋ, ಕಗಿಸೋ ರಬಾಡ, ತಬ್ರೇಜ್ ಶಮ್ಸಿ, ಲಿಜಾದ್ ವಿಲಿಯಮ್ಸ್, ರೆಸ್ಸೀವನ್ ಡೆರ್ ಡುಸ್ಸೇನ್.

ವಿಶ್ವಕಪ್ ಸಾಧನೆ: ನಾಲ್ಕು ಬಾರಿ ಸೆಮಿಫೈನಲ್ ಪ್ರವೇಶ,

ತಾರಾ ಆಟಗಾರರು: ಡಿಕಾಕ್, ರಬಾಡ, ಡೇವಿಡ್ ಮಿಲ್ಲರ್.

ಅಫ್ಘಾನಿಸ್ತಾನ



ಹಶ್ಮತುಲ್ಲಾ ಶಾಹಿದಿ (ನಾಯಕ), ರಹಮಾನುಲ್ಲಾ ಗುರ್ಬಾಜ್, ಇಬ್ರಾಹಿಂ ಝದ್ರಾನ್, ರಿಯಾಜ್ ಹಸನ್, ರಹಮತ್ ಷಾ, ನಜೀಬುಲ್ಲಾ ಝದ್ರಾನ್, ಮೊಹಮ್ಮದ್ ನಬಿ, ಇಕ್ರಮ್ ಅಲಿಖಿಲ್, ಅಜ್ಮತುಲ್ಲಾ ಒಮರ್ಜಾಯ್, ರಶೀದ್ ಖಾನ್, ಮುಜೀಬ್ ಉರ್ ರಹಮಾನ್, ನೂರ್ ಅಹ್ಮದ್, ಫಜಲ್ ರಹಮದ್, ಫಜಲ್ ರಹಕ್ವೀನ್. ಇಕ್ರಮ್ ಅಲಿಖಿಲ್, ಫಸಲಕ್ ಫಾರೂಕಿ, ರೆಹ್ಮತುಲ್ಲಾ ಗುರ್ಬಾಜ್, ಅಜ್ಮತುಲ್ಲಾ ಒಮರ್‌ಜಾಹಿ, ಅಬ್ದುಲ್ ರೆಹಮಾನ್, ನವೀನ್ ಉಲ್ ಹಕ್, ಮುಜೀಬ್ ಹುರ್ ರೆಹಮಾನ್, ಇಬ್ರಾಹಿಂ ಜಾದ್ರಾನ್,

ವಿಶ್ವಕಪ್ ಸಾಧನೆ: 2 ಬಾರಿ ಗ್ರೂಪ್ ಸ್ಟೇಜ್ ಹಂತ ಪ್ರವೇಶ,

ತಾರಾ ಆಟಗಾರರು: ರಶೀದ್ ಖಾನ್, ಮಹ್ಮುದ್ ನಬಿ, ಆಶ್ಮತುಲ್ಲಾ ಶಾಹಿದಿ.

ನೆದರ್‌ಲ್ಯಾಂಡ್



ಸ್ಕಾಟ್ ಎಡ್ವರ್ಡ್ಸ್ (ನಾಯಕ), ಕೋಲಿನ್ ಎಕ್ಕೆರ್ಮನ್, ವೆಸ್ಲೆ ಬರೆಸಿ, ಬಸ್‌ದೆ ಲೀಡೆ, ಅರ್ಯನ್ ದತ್, ರಿಯಾನ್ ಕ್ಲೈನ್, ತೇಜ ನಿದಮನುರು, ಮ್ಯಾಕ್ಸ್ ಓಡ್, ವಿಕ್ರಮ್‌ಜಿತ್ ಸಿಂಗ್, ಲೋಗನ್ ವೆನ್ ಬೀಕ್, ಪೌಲ್‌ವ್ಯಾನ್ ಮೀಕ್ರೆನ್, ರೈಲೋಫ್‌ವ್ಯಾನ್ ಡರ್‌ಮರ್ವೆ, ಸಕೀಬ್ ಜುಲ್ಫೀಕರ್.

ವಿಶ್ವಕಪ್ ಸಾಧನೆ: ನಾಲ್ಕು ಬಾರಿ ಗ್ರೂಪ್ ಸ್ಟೇಜ್ ಹಂತ ಪ್ರವೇಶ,

ತಾರಾ ಆಟಗಾರರು: ಸ್ಕಾಟ್ ಎಡ್ವರ್ಡ್ಸ್, ಅರ್ಯನ್ ದತ್, ವೆಸ್ಲೆ ಬರೆಸಿ.

ತಂಡಗಳ ವಿಭಾಗದಲ್ಲಿ ದಾಖಲೆ

ಟೂರ್ನಿಯಲ್ಲಿ ತಂಡವೊಂದು ಗಳಿಸಿದ ಅತಿದೊಡ್ಡ ರನ್: ಆಸ್ಟ್ರೇಲಿಯಾ– 417/6 (ಆಫ್ಘಾನಿಸ್ಥಾನದ ವಿರುದ್ಧ) (2015)

ಟೂರ್ನಿಯಲ್ಲಿ ತಂಡವೊಂದು ಗಳಿಸಿದ ಅತಿಕಡಿಮೆ ರನ್: ಕೆನಡಾ– 36 (ಶ್ರೀಲಂಕಾ ವಿರುದ್ಧ) (2003)

ಇಲ್ಲಿವರೆಗಿನ ಚಾಂಪಿಯನ್, ರನ್ನರ್ ಅಪ್ ವಿವರ

ವರ್ಷ	ಚಾಂಪಿಯನ್	ರನ್ನರ್ ಅಪ್
1975	ವೆಸ್ಟ್ ಇಂಡೀಸ್	ಆಸ್ಟ್ರೇಲಿಯಾ
1979	ವೆಸ್ಟ್ ಇಂಡೀಸ್	ಇಂಗ್ಲೆಂಡ್
1983	ಭಾರತ	ವೆಸ್ಟ್ ಇಂಡೀಸ್
1987	ಆಸ್ಟ್ರೇಲಿಯಾ	ಇಂಗ್ಲೆಂಡ್
1992	ಪಾಕಿಸ್ತಾನ	ಇಂಗ್ಲೆಂಡ್
1996	ಶ್ರೀಲಂಕಾ	ಆಸ್ಟ್ರೇಲಿಯಾ
1999	ಆಸ್ಟ್ರೇಲಿಯಾ	ಪಾಕಿಸ್ತಾನ
2003	ಆಸ್ಟ್ರೇಲಿಯಾ	ಭಾರತ
2007	ಆಸ್ಟ್ರೇಲಿಯಾ	ಶ್ರೀಲಂಕಾ
2011	ಭಾರತ	ಶ್ರೀಲಂಕಾ
2015	ಆಸ್ಟ್ರೇಲಿಯಾ	ನ್ಯೂಜಿಲೆಂಡ್
2019	ಇಂಗ್ಲೆಂಡ್	ನ್ಯೂಜಿಲೆಂಡ್

ವೆಸ್ಟ್ ಇಂಡೀಸ್ ಇಲ್ಲದ ಮೊದಲ ವಿಶ್ವಕಪ್..!

ಕ್ರಿಕೆಟ್ ಜಗತ್ತಿನಲ್ಲಿ ಕೆರಿಬಿಯನ್ ದೈತ್ಯರೆಂದೇ ಕರೆಯಲ್ಪಡುವ 2 ಬಾರಿಯ ವಿಶ್ವಕಪ್ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡದ ಅನುಪಸ್ಥಿತಿಯಲ್ಲಿ ನಡೆಯುತ್ತಿರುವ ಮೊದಲ ವಿಶ್ವಕಪ್ ಪಂದ್ಯಾವಳಿ ಇದಾಗಿದೆ.

1975 ಹಾಗೂ 1979ರ ವಿಶ್ವಕಪ್ ಚಾಂಪಿಯನ್ ಹಾಗೂ 1983ರ ರನ್ನರ್ ಅಪ್ ವೆಸ್ಟ್ ಇಂಡೀಸ್ ಆಸ್ಟ್ರೇಲಿಯಾ, ಭಾರತ, ನ್ಯೂಜಿಲ್ಯಾಂಡ್‌ನಂತಹ ಬಲಿಷ್ಠ ತಂಡಗಳಿಗೆ ಸೋಲುಣಿಸಿದ ದೇಶ. ಆದರೆ ಆರ್ಥಿಕ ದಿವಾಳಿತನ, ಕ್ರಿಕೆಟ್ ಆಡಳಿತ ಮಂಡಳಿ ವೈಫಲ್ಯ, ಸೌಲಭ್ಯದ ಕೊರತೆಯಿಂದಾಗಿ ವೆಸ್ಟ್ ಇಂಡೀಸ್ ಪ್ರಸ್ತುತ ದುರ್ಬಲ ತಂಡವಾಗಿ ಮಾರ್ಪಟ್ಟಿದ್ದು, ವಿಶ್ವಕಪ್ ಟಿಕೆಟ್ ಗಿಟ್ಟಿಸಲು ನಡೆದ ಅರ್ಹತಾ ಸುತ್ತಿನಲ್ಲೇ ದುರ್ಬಲ ದೇಶಗಳ ಮುಂದೆ ಸೋತು ಶರಣಾಗಿ ತನ್ನ ಅಭಿಯಾನ ಮುಗಿಸಿದೆ.

ಮೊದಲ ಬಾರಿ ಭಾರತ ಪೂರ್ಣ ಪ್ರಮಾಣದ ಟೂರ್ನಿ ಆತಿಥ್ಯ

ಈ ಹಿಂದೆ ಭಾರತ ವಿಶ್ವಕಪ್ ಪಂದ್ಯಾವಳಿಯ ಆತಿಥ್ಯ ವಹಿಸಿದ್ದರೂ, ಪಾಕಿಸ್ತಾನ, ಶ್ರೀಲಂಕಾ ಹಾಗೂ ಬಾಂಗ್ಲಾದೇಶದೊಂದಿಗೆ ಪಂದ್ಯಾವಳಿ ಆಯೋಜಿಸಿತ್ತು ಆದರೆ ಇದೇ ಮೊದಲ ಬಾರಿಗೆ ಭಾರತ ಸಂಪೂರ್ಣ ವಿಶ್ವಕಪ್ ಟೂರ್ನಿಯ ಆತಿಥ್ಯ ವಹಿಸಿಕೊಂಡಿದೆ.

ಇಲ್ಲಿವರೆಗೆ ಕ್ರಿಕೆಟ್ ಜನಕರಾದ ಇಂಗ್ಲೆಂಡ್ 2 ಬಾರಿ ಹಾಗೂ ವೆಸ್ಟ್ ಇಂಡೀಸ್ ಒಂದು ಬಾರಿ ಪೂರ್ಣ ಪ್ರಮಾಣದಲ್ಲಿ ಟೂರ್ನಿ ಆಯೋಜಿಸಿದ್ದವು. ಇದೀಗ ಭಾರತ ಪೂರ್ಣ ಪ್ರಮಾಣದಲ್ಲಿ ಟೂರ್ನಿಯನ್ನು ಆಯೋಜಿಸಿದೆ.

2007ರ ವಿಶ್ವಕಪ್ ಆಯೋಜನೆ ಹೊಣೆಯನ್ನು ವೆಸ್ಟ್ ಇಂಡೀಸ್ ದೇಶ ಹೊತ್ತಿದ್ದರೆ, 2011ರ ವಿಶ್ವಕಪ್ ಅನ್ನು ಭಾರತ, ಶ್ರೀಲಂಕಾ, ಬಾಂಗ್ಲಾದೇಶ ತಂಡಗಳು ಆಯೋಜಿಸಿದ್ದವು. ಸದ್ಯ ಪ್ರಸ್ತುತ 2023ರ ವಿಶ್ವಕಪ್ ಅನ್ನು ಭಾರತ ತಂಡ ಏಕಾಂಗಿಯಾಗಿ ಆಯೋಜಿಸಿದ್ದರೆ, ಮುಂದೆ ನಡೆಯುವ 2027ರ ವಿಶ್ವಕಪ್ ಅನ್ನು ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ನಮೀಬಿಯಾ ತಂಡಗಳು ಆಯೋಜನೆ ಮಾಡಲಿವೆ. ಅದರಂತೆ 2031ರ ವಿಶ್ವಕಪ್‌ಗೆ ಭಾರತ ಹಾಗೂ ಬಾಂಗ್ಲಾದೇಶ ಆತಿಥ್ಯ ವಹಿಸಲಿವೆ.

ವಿಶ್ವಕಪ್ ಟೂರ್ನಿಯ ದಾಖಲೆ ವೀರರು

ಬ್ಯಾಟಿಂಗ್ ವಿಭಾಗ

- **ವಿಶ್ವಕಪ್ ಟೂರ್ನಿಯ ರನ್ ಸರದಾರ:** ಸಚಿನ್ ತೆಂಡೂಲ್ಕರ್ (ಭಾರತ)– 2,278 (1992–2011)
- **ಪಂದ್ಯವೊಂದರಲ್ಲಿ ಅತಿ ಹೆಚ್ಚು ರನ್‌ಗಳಿಸಿದವರು:** ಮಾರ್ಟಿನ್ ಗಪ್ಟಿಲ್ (ನ್ಯೂಜಿಲ್ಯಾಂಡ್)– 237 ಅಜೇಯ (2015)
- **ಪಂದ್ಯವೊಂದರ ಅತಿದೊಡ್ಡ ಜೊತೆಯಾಟ:** ಕ್ರಿಸ್‌ಗೇಲ್– ಸ್ಯಾಮುಯಲ್ಸ್ (ವೆಸ್ಟ್ ಇಂಡೀಸ್)– 2ನೇ ವಿಕೇಟ್‌ಗೆ 372 (2015)
- **ವಿಶ್ವಕಪ್ ಟೂರ್ನಿಯೊಂದರ ರನ್ ಸರದಾರ:** ಸಚಿನ್ ತೆಂಡೂಲ್ಕರ್ (ಭಾರತ)– 673 (2003)
- **ವಿಶ್ವಕಪ್ ಟೂರ್ನಿಯಲ್ಲಿ ಹೆಚ್ಚು ಶತಕಗಳಿಸಿದವರು:** ಸಚಿನ್ ತೆಂಡೂಲ್ಕರ್, ರೋಹಿತ್ ಶರ್ಮಾ (ಭಾರತ)– 6
- **ವಿಶ್ವಕಪ್ ಟೂರ್ನಿಯೊಂದರಲ್ಲಿ ಹೆಚ್ಚು ಶತಕಗಳಿಸಿದವರು:** ರೋಹಿತ್ ಶರ್ಮಾ (ಭಾರತ)– 5 (2019)

ಬೌಲಿಂಗ್ ವಿಭಾಗ

- **ವಿಶ್ವಕಪ್ ಟೂರ್ನಿಯ ವಿಕೆಟ್ ಸರದಾರ:** ಗ್ಲೇನ್ ಮೆಗ್ರಾಥ್ (ಆಸ್ಟ್ರೇಲಿಯಾ)– 71 (1996–2007)
- **ಪಂದ್ಯವೊಂದರಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದವರು:** ಗ್ಲೇನ್ ಮೆಗ್ರಾಥ್ (ಆಸ್ಟ್ರೇಲಿಯಾ)– 7/15 (2003)
- **ಟೂರ್ನಿಯೊಂದರಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದವರು:** ಮಿಚೆಲ್ ಸ್ಟಾರ್ಕ್ (ಆಸ್ಟ್ರೇಲಿಯಾ)– 27 (2019)

ಫೀಲ್ಡಿಂಗ್ ವಿಭಾಗ

- **ಅತಿ ಹೆಚ್ಚು ಕ್ಯಾಚ್ ಹಿಡಿದ ವಿಕೆಟ್ ಕೀಪರ್:** ಕುಮಾರ ಸಂಗಕ್ಕಾರ (ಶ್ರೀಲಂಕಾ)– 54 (2003–2015)
- **ಅತಿ ಹೆಚ್ಚು ಕ್ಯಾಚ್ ಹಿಡಿದ ಫೀಲ್ಡರ್:** ರಿಕಿ ಪಾಂಟಿಂಗ್ (ಆಸ್ಟ್ರೇಲಿಯಾ)– (1996–2011)



ಮಡಿಕೇರಿ ದಸರಾ ವಿಜೃಂಭಣೆಯಿಂದ ಆಚರಿಸೋಣ

ದಸರಾ ದಶಮಂಟಪ ಸಮಿತಿ ಸಭೆಯಲ್ಲಿ ಶಾಸಕ ಮಂಥರ್‌ಗೌಡ ಆಶಯ



ಮಡಿಕೇರಿ, ಅ.3– ಮಡಿಕೇರಿ ದಸರಾವನ್ನು ರಾಜಕೀಯರಹಿತವಾಗಿ ವಿಜೃಂಭಣೆಯಿಂದ ಆಚರಿಸುವಂತಾಗಬೇಕು ಎಂದು ಮಡಿಕೇರಿ ಶಾಸಕ ಡಾ. ಮಂಥರ್ ಗೌಡ ಆಶಯ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ದಸರಾ ದಶಮಂಟಪ ಸಮಿತಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದಸರಾ ಹಿನ್ನೆಲೆಯಲ್ಲಿ ನಗರದ ರಸ್ತೆಗಳ ಗುಂಡಿ ಮುಚ್ಚುವುದು, ಒಳಚರಂಡಿ, ವಿದ್ಯುತ್ ಲೈನ್‌ಗಳ ದುರಸ್ತಿ ಮತ್ತಿತರ ಮೂಲ ಸೌಕರ್ಯಗಳ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುತ್ತದೆ ಎಂದು ಹೇಳಿದರು. ಶನಿವಾರ ಮತ್ತು ಭಾನುವಾರ ಪ್ರತಿ ದಶಮಂಟಪಗಳ ಬಳಿ ತೆರಳಿ ಮಂಟಪ ಸಾಗಲು ಅನುಕೂಲವಾಗುವ ವ್ಯವಸ್ಥೆಗಳನ್ನು ಅಧಿಕಾರಿಗಳ ಸಹಿತ ಸ್ವತಃ ತಾವೇ ಮುಂದೆ ನಿಂತು ಮಾಡಿಸುವುದಾಗಿ ಸಮಿತಿಗೆ ಭರವಸೆ ನೀಡಿದರು.

ಶ್ರೀ ಕೋಟೆ ಮಾರಿಯಮ್ಮ ದೇವಾಲಯ ಸಮಿತಿಯ ಜಗದೀಶ್ ಮಾತನಾಡಿ, ಈಗಾಗಲೇ 4 ಕರಗ ಸಮಿತಿ ಸಭೆ ನಡೆಸಿ ಕರಗೋತ್ಸವದ ಕುರಿತು ಚರ್ಚಿಸಿದ್ದಾರೆ. ಅದರಂತೆ ಅ.15ರಂದು ಮಧ್ಯಾಹ್ನ 2.30 ಗಂಟೆಗೆ ಶಕ್ತಿ ದೇವತೆಗಳೊಂದಿಗೆ ಪಂಪಿನ ಕರೆ ತಲುಪಿ ಬಳಿಕ ಅಲ್ಲಿ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ ಕರಗ ಕಟ್ಟಲು ಪ್ರಾರಂಭಿಸಲಾಗುತ್ತದೆ. ಸಂಜೆ 6 ಗಂಟೆಯ ಬಳಿಕ ಪಂಪಿನ ಕರೆಯಿಂದ ಕರಗಗಳು ಹೊರಡಲಿವೆ ಎಂದು ಸಭೆಗೆ ಮಾಹಿತಿ ನೀಡಿದರು. ಆ ಸಂದರ್ಭ ಶಾಸಕರು, ಉಸ್ತುವಾರಿ ಸಚಿವರು ಕೂಡ ಉಪಸ್ಥಿತರಿರಬೇಕು ಎಂದು ಮನವಿ ಮಾಡಿದರು.

ಕೋಟೆ ಗಣಪತಿ ಸಮಿತಿಯ ರಾಜೇಶ್ ಮಾತನಾಡಿ, ನಗರದ ಮಹದೇವಪೇಟೆ ರಸ್ತೆ ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ಕರಗಗಳು, ದಶಮಂಟಪಗಳು ಶೋಭಾಯಾತ್ರೆ ನಡೆಸುತ್ತವೆ. ಈ ರಸ್ತೆಯ ಗುಂಡಿಗಳಿಗೆ ಪ್ರತಿ ವರ್ಷ ತೇಪೆ ಹಾಕಲಾಗುತ್ತದೆ. ಆದರೆ ಮಂಟಪ ತೆರಳುತ್ತಿದ್ದಂತೆಯೇ ಮಂಟಪದ ಹಿಂದೆ ರಸ್ತೆಯೂ ಕಿತ್ತುಕೊಂಡು ಹೋಗುತ್ತದೆ. ಈ ಹಿನ್ನೆಲೆಯಲ್ಲಿ ನಗರಸಭೆಯ ಅನುದಾನ ಬಳಸಿಕೊಂಡು ಸಂಪೂರ್ಣ ಡಾಂಬರೀಕರಣ ಮಾಡುವಂತೆ ಮನವಿ ಮಾಡಿದರು. ಸಭೆಯಲ್ಲಿ ಫ್ಲೆಕ್ಸ್ ಅಳವಡಿಸಲು ಅನುಮತಿ ನೀಡುವುದು, ಹಿಂದಿನ ದಸರಾ ಅನುದಾನ 13 ಲಕ್ಷ ರೂ.ಗಳ ಬಾಕಿಯನ್ನು ದಶಮಂಟಪಗಳಿಗೆ ಒದಗಿಸುವುದು ಸೇರಿದಂತೆ ಇನ್ನಿತರ ವಿಚಾರಗಳ ಕುರಿತು ಚರ್ಚೆ ನಡೆಯಿತು.

ಸಭೆಯಲ್ಲಿ ವ್ಯಕ್ತವಾದ ಮನವಿಗಳನ್ನು ಆಲಿಸಿದ ಶಾಸಕ ಡಾ. ಮಂಥರ್ ಗೌಡ, ಮಡಿಕೇರಿ ದಸರಾವನ್ನು ವ್ಯವಸ್ಥಿತವಾಗಿ ಎಲ್ಲರ ಹಬ್ಬವಾಗಿ ಆಚರಿಸಲು ಕ್ರಮ ಕೈಗೊಳ್ಳಲಾಗುತ್ತದೆ. ದಶಮಂಟಪಗಳ ಬಾಕಿ ಅನುದಾನ ಒದಗಿಸಲು ಕೂಡ ರೂಪುರೇಷೆ ಸಿದ್ಧಪಡಿಸಲಾಗುತ್ತದೆ. ಈ ಬಾರಿಯೂ ತಮ್ಮ ಕೈಲಾದ ಸಹಾಯವನ್ನು ದಶಮಂಟಪ ಮತ್ತು ಕರಗ ಸಮಿತಿಗಳಿಗೆ ಮಾಡುವುದಾಗಿ ಶಾಸಕರು ಭರವಸೆ ನೀಡಿದರು.

ವೇದಿಕೆಯಲ್ಲಿ ಮಡಿಕೇರಿ ದಸರಾ ಹಾಗೂ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಧಾನ ಕಾರ್ಯದರ್ಶಿ ಬಿ.ವೈ. ರಾಜೇಶ್ ಯಲ್ಲಪ್ಪ, ದಶಮಂಟಪ ಸಮಿತಿ ಅಧ್ಯಕ್ಷ ಮಂಜುನಾಥ್, ಪ್ರಮುಖರಾದ ಹೆಚ್.ಎಸ್. ಚಂದ್ರಮೌಳಿ, ಮನುಮಂಜುನಾಥ್, ಕೊಟ್ಟಮುಡಿ ಹಂಸ ಮತ್ತಿತರರು ಹಾಜರಿದ್ದರು.

ಮಡಿಕೇರಿಯಲ್ಲಿ ಹದಗೆಟ್ಟ ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ

ಅಪಘಾತದಲ್ಲಿ ಗಾಯಗೊಂಡಿದ್ದವರೇ ಮೆರವಣಿಗೆಯಲ್ಲಿ ಭಾಗಿ



ಮಡಿಕೇರಿ, ಅ.3– ನಗರದ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿದ್ದು, ತಕ್ಷಣ ಡಾಂಬರೀಕರಣ ಕಾರ್ಯ ಆರಂಭಿಸಬೇಕೆಂದು ಆಗ್ರಹಿಸಿ, ಕೊಡಗು ರಕ್ಷಣಾ ವೇದಿಕೆ ವತಿಯಿಂದ ಮಡಿಕೇರಿಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು. ಮಡಿಕೇರಿ ನಗರದ ಗಾಂಧಿ ಮೈದಾನದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆಯು ನೂತನ ಖಾಸಗಿ ಬಸ್ ನಿಲ್ದಾಣ, ಹಳೆ ಖಾಸಗಿ ಬಸ್ ನಿಲ್ದಾಣವಾಗಿ ಸಾಗಿ ಬಂದು ನಗರ ಸಭೆ ಕಚೇರಿ ಬಳಿ ಸಮಾವೇಶಗೊಂಡಿತು. ಮೆರವಣಿಗೆ ಉದ್ದಕ್ಕೂ ನಗರಸಭೆಯ ಆಡಳಿತ ವೈಖರಿ ವಿರುದ್ಧ ಘೋಷಣೆಗಳು ಮೊಳಗಿದವು.

ಮೆರವಣಿಗೆಯ ಮುಂಚೂಣಿಯಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಇಬ್ಬರು ವ್ಯಕ್ತಿಗಳು, ನಾನು ಗೌಳಿ ಬೀದಿಯಲ್ಲಿ ರಸ್ತೆಗೆ ಬಿದ್ದು ಗಾಯಗೊಂಡೆ, ನಾನು ತಹಶೀಲ್ದಾರ್ ಕಚೇರಿ ಎದುರು ರಸ್ತೆಗೆ ಬಿದ್ದು ಗಾಯಗೊಂಡೆ ಎಂಬ ಭಿತ್ತಿಚಿತ್ರ ಹಿಡಿದು ಸಾಗಿದ್ದು, ಗಮನ ಸೆಳೆಯಿತು. ಬಳಿಕ ಕೆಲ ಸಮಯ ನಗರಸಭೆಯ ಎದುರು ಮುಖ್ಯ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು ನಗರಸಭೆ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೊಡಗು ರಕ್ಷಣಾ ವೇದಿಕೆಯ ಅಧ್ಯಕ್ಷ ಅಚ್ಚಾಂಡೀರ ಪವನ್ ಪೆಮ್ಮಯ್ಯ, ರಾಜ್ಯ ಮತ್ತು ದೇಶದ ಇತರೆಡೆಗಳಲ್ಲಿ ಬೇರೆ ಬೇರೆ ವಿಚಾರಗಳಿಗೆ ಪ್ರತಿಭಟನೆಗಳು ನಡೆದರೇ, ಮಡಿಕೇರಿಯಲ್ಲಿ ರಸ್ತೆಗಳ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವುದು ವಿಷಾದಕರ ಸಂಗತಿಯಾಗಿದೆ. ಮಡಿಕೇರಿ ನಗರಸಭೆ ವ್ಯಾಪ್ತಿಯ 23 ವಾರ್ಡ್‌ಗಳಲ್ಲಿ 11 ಸಾವಿರ ಮನೆಗಳಿವೆ. 28ರಿಂದ 30 ಸಾವಿರ ಮತದಾರರಿದ್ದಾರೆ. 40ರಿಂದ 50 ಸಾವಿರಷ್ಟು ನಾಗರಿಕರಿದ್ದು, ಅವರೆಲ್ಲರ ಪ್ರತಿನಿಧಿಯಾಗಿ ಕೊಡಗು ರಕ್ಷಣಾ ವೇದಿಕೆಯು ಪ್ರತಿಭಟನೆ ನಡೆಸುತ್ತಿದೆ. ನಗರದ ನಿವಾಸಿಗಳ ದೌರ್ಭಾಗ್ಯವೋ ಏನೋ ಎಂಬಂತೆ ನಗರಸಭೆ ವ್ಯಾಪ್ತಿಯ 23 ವಾರ್ಡ್‌ಗಳಲ್ಲೂ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು ಕೂಡಲೇ ದುರಸ್ತಿಪಡಿಸಬೇಕೆಂದು ಆಗ್ರಹಿಸಿದ ಅವರು, ಮುಂದಿನ ಒಂದು ವಾರದ ಒಳಗೆ ರಸ್ತೆಗಳ ದುರಸ್ತಿ ಕಾರ್ಯ ನಡೆಸದಿದ್ದಲ್ಲಿ ಸಂಘಟನೆ ವತಿಯಿಂದ ಮಡಿಕೇರಿ ನಗರ ಬಂದ್ ನಡೆಸಲಾಗುವುದೆಂದು ಎಚ್ಚರಿಸಿದರು.

ಆಟೋ ಚಾಲಕರ ಸಂಘ, ಲಾರಿ ಚಾಲಕರ ಸಂಘ, ಖಾಸಗಿ ಬಸ್ ಚಾಲಕರು ಹಾಗೂ ಸಿಬ್ಬಂದಿಗಳ ಸಂಘ, ಟ್ಯಾಕ್ಸಿ ಚಾಲಕರ ಸಂಘ ಸೇರಿದಂತೆ ಸಾರ್ವಜನಿಕರು ಕೂಡ ಈ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರಾಮಾಣಿಕ ಸೇವೆಯಿಂದ ಸಂಘಗಳು ಅಭಿವೃದ್ಧಿ



ವಿರಾಜಪೇಟೆ, ಅ.3– ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿ ಕಾರ್ಯ ನಿರ್ವಹಿಸಿದರೆ ಸಂಘ–ಸಂಸ್ಥೆಗಳು ನಿರಂತರವಾಗಿ ಉತ್ತಮ ರೀತಿ ನಡೆಯುತ್ತವೆ ಎಂದು ವಿರಾಜಪೇಟೆ ಪ್ರೆಸ್‌ಕ್ಲಬ್ ಅಧ್ಯಕ್ಷ ಕೋಲತಂಡ ರಘು ಮಾಚಯ್ಯ ಹೇಳಿದರು.

ವಿರಾಜಪೇಟೆ ನಗರ ಪ್ರೆಸ್‌ಕ್ಲಬ್‌ನ 18ನೇ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘ–ಸಂಸ್ಥೆಗಳು ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸಿದರೆ, ಯಾವುದೇ ಗೊಂದಲಗಳು ಹಾಗೂ ಸಮಸ್ಯೆಗಳು ಎದುರಾಗುವುದಿಲ್ಲ. ಪತ್ರಕರ್ತರು ಯಾವುದೇ ಆಮಿಷಗಳಿಗೆ ಬಲಿಯಾಗದೆ ಪಾರದರ್ಶಕತೆಯಿಂದ ಕಾರ್ಯನಿರ್ವಹಿಸಿದರೆ ಸಮಾಜದಲ್ಲಿನ ಸಾಕಷ್ಟು ಸಮಸ್ಯೆಗಳು ನಿವಾರಣೆಯಾಗಲಿದೆ. ಸಮಾಜದ ಅಂಕು–ಡೊಂಕುಗಳನ್ನು ದಿಟ್ಟವಾಗಿ ಬರವಣಿಗೆಯ ಮೂಲಕ ಸಮಾಜದ ಮುಂದಿಡುವುದರಿಂದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿವೆ ಎಂದರು.

ಪ್ರೆಸ್‌ಕ್ಲಬ್‌ನ ಉಪಾಧ್ಯಕ್ಷ ಡಾ.ಹೇಮಂತ್‌ಕುಮಾರ್ ಸನ್ಮಾನ ಸ್ವೀಕರಿಸಿ ಮಾತನಾಡಿ, ಜ್ಞಾನಾರ್ಜನೆಗೆ ಕೊನೆ ಎಂಬುದಿಲ್ಲ, ಕಲಿಕೆ ಎನ್ನುವುದು ನಿರಂತರ ಪ್ರಕ್ರಿಯೆಯಾಗಿದೆ. ಕಲಿಕೆಯಿಂದ ಅರಿತುಕೊಳ್ಳುವುದರ ಜೊತೆಗೆ ಇತರರಿಗೆ ಜ್ಞಾನದ ದಾಹವನ್ನು ತಣಿಸಲು ಸಹಕಾರಿಯಾಗಬಹುದು. ಮಹಾಪ್ರಬಂಧವನ್ನು ಒಬ್ಬಾತ ಮಂಡಿಸಿದರೂ ಅದರ ರಚನೆಗೆ ವಿಶೇಷವಾಗಿ ಜಾನಪದ ಕ್ಷೇತ್ರದ ಪ್ರಬಂಧ ರಚನೆಯಲ್ಲಿ ಪರೋಕ್ಷವಾಗಿ ಸಾಕಷ್ಟು ಮಂದಿಯ ಸಹಕಾರ–ಶ್ರಮವಿರುತ್ತದೆ. 'ಕೊಡವ ಹಾಗೂ ತುಳು ಸಂಸ್ಕೃತಿಗಳ ತೌಲನಿಕ ಅಧ್ಯಯನ' ಎಂಬ ಮಹಾ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆಯಲು ಸಹಕಾರ ನೀಡಿದ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ ಎಂದರು.

ಕ್ಲಬ್‌ನ ಕಾರ್ಯದರ್ಶಿ ಪಳೆಯಂಡ ಪಾರ್ಥಚಿಣ್ಣಪ್ಪ ವಾರ್ಷಿಕ ವರದಿ ಮಂಡಿಸಿದರು, ಖಜಾಂಚಿ ಕುಂಡ್ರಂಡ ಪ್ರೀತು ಮುತ್ತಮ್ಮ ವಾರ್ಷಿಕ ಲೆಕ್ಕಪತ್ರ ಮಂಡಿಸಿದರು. ಈ ಸಂದರ್ಭ ಮೈಸೂರು ಮುಕ್ತ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ ಪದವಿ ಪಡೆದ ಕ್ಲಬ್‌ನ ಉಪಾಧ್ಯಕ್ಷ ಡಾ.ಹೇಮಂತ್ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಕ್ಲಬ್‌ನ ನಿರ್ದೇಶಕ ಡಿ.ಮಂಜುನಾಥ್ ಪ್ರಾರ್ಥಿಸಿದರೆ, ಅಮ್ಮಣಿಚಂಡ ಪ್ರವೀಣ್ ಚಂಗಪ್ಪ ವಂದಿಸಿದರು. ಸಭೆಯಲ್ಲಿ ನಿರ್ದೇಶಕ ಕಾಂಗೀರ ಕೆ.ಬೋಪಣ್ಣ, ಕೆ.ಬಿ.ಲಕ್ಷ್ಮಿಕಾಂತ್ ಉಪಸ್ಥಿತರಿದ್ದರು.

ಕಾಡುಪ್ರಾಣಿ ಆಯ್ತು, ಈಗ ಕಾಡುದನಗಳ ಹಾವಳಿ

ರಾತ್ರೋರಾತ್ರಿ ತೋಟಕ್ಕೆ ನುಗ್ಗಿ ಫಸಲು ತಿಂದು, ತುಳಿದು ನಾಶ

ಸುಂಟಿಕೊಪ್ಪ, ಅ.3– ಬೆಳೆಗಾರರಿಗೆ ವನ್ಯ ಪ್ರಾಣಿಗಳಾದ ಆನೆ, ಕಾಡುಕೋಣ, ಮಂಗಗಳಿಂದ ನಿರಂತರ ಉಪಟಳ ಒಂದೆಡೆಯಾದರೆ, ಐಗೂರು ಗ್ರಾಮ ವ್ಯಾಪ್ತಿಯಲ್ಲಿ ಕಾಡುದನಗಳ ಹಾವಳಿಯಿಂದ ಕೃಷಿಕರು ಹೈರಾಣಾಗಿದ್ದಾರೆ.

ಯಡವನಾಡು ಮೀಸಲು ಅರಣ್ಯ ಪ್ರದೇಶದಿಂದ ರಾತ್ರಿ 11 ಗಂಟೆಗೆ ಐಗೂರು ಗ್ರಾಮದ ಎಂ.ಸಿ.ಗಣೇಶ, ಎಂ.ಸಿ.ಸಂಜಯ್, ರಾಣಿ ದೇಮಾಜು, ಎಂ.ಎಂ.ಲಿಂಗರಾಜು ಹಾಗೂ ಪುಚ್ಚಿಯಂಡ ಕುಟುಂಬಸ್ಥರ ಕಾಫಿ ತೋಟಕ್ಕೆ 100ಕ್ಕೂ ಅಧಿಕ ಕಾಡುಗೂಳಿ, ದನ, ಕರುಗಳು ಲಗ್ಗೆಯಿಟ್ಟು ಕಾಫಿ ಗಿಡದ ರೆಕ್ಕೆಗಳನ್ನು ಮುರಿದು ಹೊಸದಾಗಿ ನೆಟ್ಟ ಕಾಫಿ ಗಿಡ, ಕರಿಮೆಣಸು ಗಿಡಗಳನ್ನು ನಾಶಪಡಿಸುತ್ತಿವೆ. ಬಾಳೆಗಿಡ ಹಾಗೂ ತೋಟದಲ್ಲಿನ ಸಣ್ಣ ಅಡಕೆ, ತೆಂಗು ಗಿಡಗಳನ್ನು ತಿಂದು, ಮೆಟ್ಟಿ ನಾಶಪಡಿಸುತ್ತಿವೆ.

ಮಾತ್ರವಲ್ಲದೇ, ಕಾಫಿ ಫಸಲು ಬಿಡುವ ಸಮಯದಲ್ಲಿ ನೂರಾರು ಕಾಡು ದನಗಳು ಒಂದೇ ಸಮನೆ ನುಗ್ಗುವುದರಿಂದ ಕಾಯಿಗಳು ನೆಲಕ್ಕೆ ಉದುರಿ ಬೀಳುತ್ತಿದ್ದು, ಕೃಷಿಕರಿಗೆ ನಷ್ಟ ಉಂಟಾಗುತ್ತಿದೆ. ಈ ಕುರಿತು ಗ್ರಾಪಂಗೆ ಕಾಡುದನಗಳ ಉಪಟಳದ ಬಗ್ಗೆ ದೂರು ನೀಡಿದರೂ ಪಂಚಾಯಿತಿ ಅಸಹಾಯಕವಾಗಿದೆ. ರಾತ್ರಿ 11 ಗಂಟೆಗೆ ತೋಟಕ್ಕೆ ನುಗ್ಗುವ ಕಾಡುದನಗಳು ಬೆಳಗ್ಗಿನ ಜಾವ 3 ಗಂಟೆಗೆ ಅಲ್ಲಿಂದ ಕಾಲ್ಕಿತ್ತು ಅರಣ್ಯ ಪ್ರದೇಶಕ್ಕೆ ಸೇರಿಕೊಳ್ಳುತ್ತಿದೆ. ಇದರಿಂದ ಬೆಳೆಗಾರರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಎಂದು ಬೆಳೆಗಾರ ಎಂ.ಸಿ.ಗಣೇಶ ಅಳಲು ತೋಡಿಕೊಂಡಿದ್ದಾರೆ.

ಮಡಿಕೇರಿ ನಗರಸಭೆ ವಿರುದ್ಧ ಪೌರಕಾರ್ಮಿಕರ ಪ್ರತಿಭಟನೆ

ವಸತಿ, ಆಹಾರ, ವೇತನ ಒದಗಿಸುವಲ್ಲಿ ಅಧಿಕಾರಿಗಳು ವಿಫಲ



ಸರಕಾರದಿಂದ ಪೌರಕಾರ್ಮಿಕರಿಗೆ ದೊರಕಬೇಕಾದ ಸವಲತ್ತುಗಳನ್ನು ಒದಗಿಸುವಲ್ಲಿ ನಗರಸಭೆಯ ಆಡಳಿತ ವಿಫಲವಾಗಿದೆ.

ಪೌರಕಾರ್ಮಿಕರಿಗೆ ಸಿಗಬೇಕಾದ ವಸತಿ, ಆಹಾರ ಸಿಗುತ್ತಿಲ್ಲ.

ಮಡಿಕೇರಿ, ಅ.3– ಸರಕಾರದಿಂದ ಪೌರಕಾರ್ಮಿಕರಿಗೆ ದೊರಕಬೇಕಾದ ಸವಲತ್ತುಗಳನ್ನು ಒದಗಿಸುವಲ್ಲಿ ಮಡಿಕೇರಿ ನಗರಸಭೆ ಸಂಪೂರ್ಣ ವಿಫಲಗೊಂಡಿದೆ ಎಂದು ಆರೋಪಿಸಿ, ಮಡಿಕೇರಿಯ ಪೌರಸೇವಾ ನೌಕರರ ಸಂಘದ ನೇತೃತ್ವದಲ್ಲಿ ನಗರಸಭೆಯ ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ನಗರಸಭೆಯ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪೌರ ಕಾರ್ಮಿಕರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭ ಮಾತನಾಡಿದ ಮಡಿಕೇರಿಯ ಪೌರಸೇವಾ ನೌಕರರ ಸಂಘದ ಉಪಾಧ್ಯಕ್ಷ ಹೆಚ್.ಎಂ.ಲೋಕೇಶ್, ಗಾಂಧಿ ಜಯಂತಿಯಂದು ಸರಕಾರಿ ರಜೆ ಇದ್ದರೂ ಸಹ ಪೌರಕಾರ್ಮಿಕರು ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ. ಆದರೆ ನಗರಸಭೆಯ ಆರೋಗ್ಯಾಧಿಕಾರಿ ಹಾಜರಿ ಪುಸ್ತಕದಲ್ಲಿ ಗೈರು ಹಾಜರೆಂದು ನಮೂದಿಸಿದ್ದು, ಇದು ಪೌರಕಾರ್ಮಿಕರಿಗೆ ಅತೀವ ನೋವು ತಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರಲ್ಲದೇ, ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಕಳೆದ ಎರಡು ತಿಂಗಳಿನಿಂದ ವೇತನ ಪಾವತಿಯಾಗಿಲ್ಲ. ನಗರಸಭೆಯಿಂದ ಪೌರಕಾರ್ಮಿಕರ ದಿನಾಚರಣೆಯನ್ನು ಆಚರಿಸಲಿಲ್ಲ ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 108ನೇ ಜನ್ಮ ದಿನಾಚರಣೆ

ಶಿಕ್ಷಣ, ಆರೋಗ್ಯ, ಆಧ್ಯಾತ್ಮಿಕತೆಗೆ ಮಠಮಾನ್ಯಗಳ ಕೊಡುಗೆ ಅಪಾರ

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವೆ ಶೋಭ ಕರಂದ್ಲಾಜೆ



ಚಾಮರಾಜನಗರ, ಅ.3– ಶಿಕ್ಷಣ, ಆರೋಗ್ಯ ಹಾಗೂ ಆಧ್ಯಾತ್ಮಿಕತೆಗೆ ನಾಡಿನ ಮಠಮಾನ್ಯಗಳ ಕೊಡುಗೆ ಅಪಾರ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವರಾದ ಶೋಭ ಕರಂದ್ಲಾಜೆ ಹೇಳಿದರು.

ನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಮಂಗಳವಾರ ನಡೆದ ಸುತ್ತೂರು ಮಠಾಧೀಶ ಲಿಂಗೈಕ್ಯ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾಡಿನಲ್ಲಿ ಸುತ್ತೂರು ಮಠ ಸೇರಿದಂತೆ ಹಲವು ಮಠಮಾನ್ಯಗಳು ಶಿಕ್ಷಣ, ಆರೋಗ್ಯ, ಆಧ್ಯಾತ್ಮಿಕತೆಗೆ ಕೊಡುಗೆ ನೀಡುತ್ತಿವೆ. ಪ್ರಸ್ತುತ ಹಲವು ದೇಶಗಳು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರಬಹುದು. ಆದರೆ ಅಲ್ಲಿ ಧರ್ಮ, ಧರ್ಮವಾಗಿ ಉಳಿದಿಲ್ಲ. ಆದರೆ, ಭಾರತ ಮಾತ್ರ ಧರ್ಮದ ಆಧಾರದಲ್ಲಿ ಗಟ್ಟಿಯಾಗಿ ಬೆಳೆಯುತ್ತಿದೆ ಎಂದರು. ಹಿಂದೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಅಡ್ಡಿ ಉಂಟಾಗುತ್ತಿತ್ತು. ಶಾಲೆಗೆ ಕಳುಹಿಸಬಾರದು ಎನ್ನುವ ಮನಸ್ಥಿತಿ ಇದ್ದ ಕಾಲಘಟ್ಟದಲ್ಲಿ ಗ್ರಾಮೀಣರ ಶಿಕ್ಷಣಕ್ಕಾಗಿಯೇ 60 ವರ್ಷಗಳ ಹಿಂದೆ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ವಿದ್ಯಾಪೀಠ ಸ್ಥಾಪಿಸಿ, ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು ಎಂದರು.

ರೈತರ ಅಗತ್ಯತೆ ಪೂರೈಸಲು ಕ್ರಮ: ರೈತರು ಕೇವಲ ಬೆಳೆ ಬೆಳೆದರೆ ಸಾಲದು, ಅದನ್ನು ಮೌಲ್ಯವರ್ಧನೆ ಮಾಡಬೇಕು. ಇದಕ್ಕೆ ಬೇಕಾದ ಎಲ್ಲಾ ನೆರವನ್ನು ಕೇಂದ್ರ ಸರ್ಕಾರ ನೀಡಲಿದೆ. ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಯ ರೈತರಿಗೆ ಬೇಕಾದ ಅಗತ್ಯತೆಗಳ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಬೇಕು ಎಂದು ತಿಳಿಸಿದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲಿ ವಚನಗಳ ಮೂಲಕ ಸನಾತನ ಧರ್ಮದಲ್ಲಿದ್ದ ನ್ಯೂನತೆಗಳನ್ನು ನಿರ್ಮೂಲನೆಗೊಳಿಸುವ ದೊಡ್ಡ ಕ್ರಾಂತಿ ಮಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಸುತ್ತೂರು ಮಠ ಕ್ರಾಂತಿ ಮಾಡಿದೆ ಎಂದರು.

> ಶಿಕ್ಷಣ ಕ್ಷೇತ್ರಕ್ಕೆ ಸುತ್ತೂರಿನ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ನೀಡಿರುವ ಕೊಡುಗೆಯನ್ನು ಪ್ರತಿಯೊಬ್ಬರೂ ಸ್ಮರಿಸುವ ಅಗತ್ಯವಿದೆ. ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಸಾವಿರಾರು ವಿದ್ಯಾರ್ಥಿಗಳು ಇಂದು ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವುದಕ್ಕೆ ರಾಜೇಂದ್ರ ಸ್ವಾಮೀಜಿಗಳೇ ಕಾರಣ.
>
> – **ಶೋಭ ಕರಂದ್ಲಾಜೆ,** ಕೇಂದ್ರ ಸಚಿವರು.

> ರಾಜೇಂದ್ರ ಶ್ರೀಗಳು ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಶಿಕ್ಷಣ ಸಂಸ್ಥೆಗಳು, ಕಲಾ ಮಂದಿರ, ಧಾರ್ಮಿಕ ದತ್ತಿ, ಸಂಗೀತ ಶಾಲೆ, ರೈತರಿಗೋಸ್ಕರ ಕೃಷಿ ವಿಜ್ಞಾನ ಕೇಂದ್ರ ಆರಂಭಿಸುವ ಮೂಲಕ ಗ್ರಾಮೀಣ ಜನರಿಗೆ ಅನುಕೂಲ ಕಲ್ಪಿಸಿದ್ದಾರೆ. ಶ್ರೀಗಳಿಗೆ ಚಾಮರಾಜನಗರದ ಮೇಲೆ ವಿಶೇಷ ಕಾಳಜಿ ಇತ್ತು.
>
> - **ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ,** ಸುತ್ತೂರು ಮಠಾಧೀಶರು.

ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಹಿಂದುಳಿದ ಚಾಮರಾಜನಗರದಲ್ಲಿ 50 ವರ್ಷದ ಹಿಂದೆ ಶಾಲಾ–ಕಾಲೇಜುಗಳ ಜೊತೆ ಶ್ರೀಗಳು ವಿದ್ಯಾರ್ಥಿ ನಿಲಯ ಸ್ಥಾಪಿಸಿದರು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಮರಿಯಾಲದಲ್ಲಿ ಜೆಎಸ್‌ಎಸ್ ರುಡ್‌ಸೆಟ್ ಸಂಸ್ಥೆ ತೆರೆದು ಸ್ವಯಂ ಉದ್ಯೋಗ ತರಬೇತಿ ಕೊಟ್ಟಿದ್ದರಿಂದ ಅನೇಕರು ಸ್ವಯಂ ಉದ್ಯೋಗಿಗಳಾದರು ಎಂದರು.

ಇದೇ ವೇಳೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ್ ರಾಜೇಂದ್ರ ಶ್ರೀಗಳಿಗೆ ನುಡಿನಮನ ಸಲ್ಲಿಸಿದರು. ಸುತ್ತೂರು ಮಠಾಧೀಶ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧ್ಯಕ್ಷತೆ ವಹಿಸಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ ನಿವೃತ್ತ ಸೈನಿಕರನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಎಂ. ಗಣೇಶಪ್ರಸಾದ್, ಮಾಜಿ ಶಾಸಕರಾದ ಎಸ್.ಬಾಲರಾಜು, ಎನ್. ಮಹೇಶ್, ನಗರ ಮಠದ ಶ್ರೀಗಳಾದ ಚನ್ನಬಸವ ಸ್ವಾಮೀಜಿ, ಹರವೆ ಮಠದ ಶ್ರೀಸರ್ಪಭೂಷಣ ಸ್ವಾಮೀಜಿ, ಚಾಮುಲ್ ಅಧ್ಯಕ್ಷ ನಾಗೇಂದ್ರ, ಜಿಪಂ ಮಾಜಿ ಅಧ್ಯಕ್ಷ ಮಹದೇವಯ್ಯ, ಎ.ಎಸ್.ನಾಗರಾಜು, ಮುಖಂಡರಾದ ಮರಿಸ್ವಾಮಿ, ಸೈಯದ್ ರಫಿ, ಹೆಚ್.ಎಸ್. ನಂಜಪ್ಪ ಕುಮುದಾ, ಆಬಿದ್, ಆರ್.ಎಂ. ಸ್ವಾಮಿ, ಬಿ.ಕೆ. ರವಿಕುಮಾರ್ ಸೇರಿದಂತೆ ಇತರರಿದ್ದರು.

ರಾಜೇಂದ್ರಶ್ರೀಗಳ ಭಾವಚಿತ್ರ ಅದ್ಧೂರಿ ಮೆರವಣಿಗೆ



ಚಾಮರಾಜನಗರ, ಅ.3– ನಗರದಲ್ಲಿ ಮಂಗಳವಾರ ಸುತ್ತೂರು ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವಚಿತ್ರದ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು.

ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಅಂಗವಾಗಿ ನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಸ್ವಾಮೀಜಿಗಳ ಭಾವಚಿತ್ರದ ಬೆಳ್ಳಿ ರಥದ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯಲ್ಲಿ ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ, ಮರಿಯಾಲ ಮುರುಘ ರಾಜೇಂದ್ರ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣದಿಂದ ಆರಂಭವಾದ ಮೆರವಣಿಗೆ ಬಿ.ರಾಚಯ್ಯ ಜೋಡಿ ರಸ್ತೆ, ಭುವನೇಶ್ವರಿ ವೃತ್ತದ ಮೂಲಕ ಶ್ರೀ ಚಾಮರಾಜೇಶ್ವರಸ್ವಾಮಿ ದೇವಾಲಯ ಆವರಣ ತಲುಪಿ, ನಂತರ ಅದೇ ಮಾರ್ಗವಾಗಿ ವೇದಿಕೆ ಕಾರ್ಯಕ್ರಮ ಆಯೋಜಿಸಿರುವ ಆವರಣದಲ್ಲಿ ಸಮಾವೇಶಗೊಂಡಿತು.

ಮೆರವಣಿಗೆಯಲ್ಲಿ ನಂದಿಕಂಬ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡು ಮೆರವಣಿಗೆಗೆ ಮೆರಗು ನೀಡಿತು. ಕಲಾ ತಂಡಗಳೊಂದಿಗೆ ಜೆಎಸ್‌ಎಸ್ ವಿದ್ಯಾಸಂಸ್ಥೆಯ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಈ ವೇಳೆ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜಕ ಆರ್.ಎಂ.ಸ್ವಾಮಿ, ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಬಸವಗೌಡಪ್ಪ, ನಿರ್ದೇಶಕ ಡಾ.ಮಧು, ಗೋವಿಂದಶೆಟ್ಟಿ, ಬಿ.ಕೆ.ರವಿಕುಮಾರ್, ಸಿದ್ದರಾಜು, ದೊಡ್ಡರಾಯಪೇಟೆ ಗಿರೀಶ್, ಡಿ.ನಾಗೇಂದ್ರ, ಕೆ.ಪಿ.ಸದಾಶಿವಮೂರ್ತಿ, ಚಿನ್ನಮ್ಮ, ನಿಜಗುಣರಾಜು, ಗುರುಸ್ವಾಮಿ, ನಾಗಶ್ರೀ ಪ್ರತಾಪ್, ಆಲೂರು ಪ್ರದೀಪ್, ಎಚ್.ಎಂ. ಅಜಯ್, ಟಿ.ಪಿ.ವಿಶ್ವಾಸ್ ಇತರರಿದ್ದರು.

ಅಧಿಕಾರಿ ವಿರುದ್ಧ ಕ್ರಮಕ್ಕೆ ಮನವಿ

ಚಾಮರಾಜನಗರ, ಅ.3– ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸದೆ ಅಗೌರವ ತೋರಿರುವ ಯಳಂದೂರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕರ್ನಾಟಕ ಮಾದಿಗ ಮಹಾಸಭಾ ವತಿಯಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿದ ಮಹಾಸಭಾದ ಪದಾಧಿಕಾರಿಗಳು, ಮಲ್ಲಿಕಾರ್ಜುನ್ ತಮ್ಮ ಕಚೇರಿಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹುದ್ದೂರ್ ಶಾಸ್ತ್ರಿ ಜಯಂತಿಯನ್ನು ಕಚೇರಿ ಸಿಬ್ಬಂದಿಯಿಂದ ಆಚರಣೆ ಮಾಡಿಸಿದ್ದಾರೆ. ಜವಾಬ್ದಾರಿಯುತ ತಾಲೂಕು ಮಟ್ಟದ ಅಧಿಕಾರಿಯಾಗಿ, ಕಾರ್ಯಕ್ರಮದಲ್ಲಿ ಭಾಗವಹಿಸದೆ ರಾಷ್ಟ್ರನಾಯಕರಿಗೆ ಅಪಮಾನ ಎಸಗಿದ್ದಾರೆ. ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಈ ವೇಳೆ ಕರ್ನಾಟಕ ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಶಿವಕುಮಾರ್, ಮೈಸೂರು ವಿಭಾಗೀಯ ಉಸ್ತುವಾರಿ ರಾಜು, ಗೌರವಾಧ್ಯಕ್ಷ ಎಚ್.ಲಿಂಗರಾಜು, ಸಂಘಟನಾ ಕಾರ್ಯದರ್ಶಿ ರಾಮಸಮುದ್ರ ಶಿವಣ್ಣ ಹಾಜರಿದ್ದರು.

ಅಂಬಳೆ ಗ್ರಾಪಂಗೆ ಗಾಂಧಿ ಗ್ರಾಮ ಪುರಸ್ಕಾರ



ಯಳಂದೂರು, ಅ.3– ತಾಲೂಕಿನ ಅಂಬಳೆ ಗ್ರಾಮ ಪಂಚಾಯಿತಿಗೆ ಗಾಂಧಿ ಗ್ರಾಮ ಪುರಸ್ಕಾರ ಲಭಿಸಿದ್ದು, ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗಾಂಧಿ ಜಯಂತಿ ಅಂಗವಾಗಿ ಸೋಮವಾರ ನಡೆದ ರಾಜ್ಯ ಮಟ್ಟದ ಸ್ವಚ್ಛ ಸರ್ವೇಕ್ಷಣಾ ಅಭಿಯಾನ ಕಾರ್ಯಕ್ರಮದಲ್ಲಿ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶಸ್ತಿ ವಿತರಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪಿಡಿಓ ಮಮತಾ, ನಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿದೀಪ, ಸ್ವಚ್ಛತೆ, ಅಂಗನವಾಡಿ ಕೇಂದ್ರಗಳ ನಿರ್ವಹಣೆ, ಮನರೇಗಾ ಯೋಜನೆಯಡಿ ಕೆರೆಕಟ್ಟೆಗಳ ನಿರ್ಮಾಣ, ಇಂಗುಗುಂಡಿಗಳ ನಿರ್ಮಾಣ ಸೇರಿದಂತೆ ಅನೇಕ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಮಾಡಲಾಗಿದೆ. ಅಲ್ಲದೆ ಗ್ರಾಪಂ ನಿರ್ವಹಣೆಯಲ್ಲಿ ತೋರಿರುವ ಸಾಧನೆಗೆ ಈ ಪ್ರಶಸ್ತಿ ಲಭಿಸಿದೆ. ಇದಕ್ಕೆ ಸಹಕಾರ ನೀಡಿದ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷೆ, ಸದಸ್ಯರು ಹಾಗೂ ಎಲ್ಲಾ ನಾಗರಿಕರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಗ್ರಾಪಂ ಅಧ್ಯಕ್ಷ ನಂಜುಂಡಸ್ವಾಮಿ ಮಾತನಾಡಿ, ನಮ್ಮ ಗ್ರಾಪಂಗೆ ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ಬಂದಿರುವುದು ಅತೀವ ಸಂತಸ ತಂದಿದೆ. ಈ ಪ್ರಶಸ್ತಿಯ ಜೊತೆ ನಮ್ಮ ಜವಾಬ್ದಾರಿಗಳು ಇನ್ನಷ್ಟು ಹೆಚ್ಚಿದೆ. ನಮ್ಮ ಪಂಚಾಯಿತಿಯನ್ನು ತಾಲೂಕಿನಲ್ಲೇ ಮಾದರಿಯಾಗಿಸಲು ಶ್ರಮಿಸಲಾಗುವುದು. ಗ್ರಾಮಗಳ ಸ್ವಚ್ಛತೆ, ಕುಡಿಯುವ ನೀರು, ರಸ್ತೆ, ಚರಂಡಿ ನಿರ್ವಹಣೆ ಸೇರಿದಂತೆ ಮೂಲ ಸಮಸ್ಯೆಗಳ ನಿವಾರಣೆಗೆ ಹೆಚ್ಚು ಗಮನ ಹರಿಸಲಾಗುವುದು. ಜೊತೆಗೆ ನರೇಗಾ ಯೋಜನೆ ಸದ್ಬಳಕೆಗೆ ಹೆಚ್ಚಿನ ಗಮನ ನೀಡಲಾಗುವುದು ಎಂದರು.

ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಮಹದೇವಮ್ಮ, ಮಹದೇವಶೆಟ್ಟಿ ಸೇರಿದಂತೆ ಇತರರಿದ್ದರು.

ನಾಳೆ ವಿಶ್ವಕರ್ಮ ಜಯಂತಿ

ಚಾಮರಾಜನಗರ, ಅ.3– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಶ್ರೀವಿಶ್ವಕರ್ಮ ಜಯಂತಿಯನ್ನು ಅ.5ರಂದು ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 9 ಗಂಟೆಗೆ ಕೊಳದ ಬೀದಿಯ ಶ್ರೀಮಂಟೇಸ್ವಾಮಿ ದೇವಸ್ಥಾನದಲ್ಲಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಬೆಳಗ್ಗೆ 11 ಗಂಟೆಗೆ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಹೆಚ್.ಎಂ.ಗಣೇಶ್‌ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ನಗರಸಭಾ ಸದಸ್ಯರಾದ ಹೆಚ್.ಎಸ್. ಮಮತ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಮೈಸೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಮಂಟೇಲಿಂಗ ಚಾರ್ ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಚಕ್ರ ಎಸೆತ ಸ್ಪರ್ಧೆ: ಅಭಿಜಿತ್ ರಾಷ್ಟ್ರಮಟ್ಟಕ್ಕೆ ಆಯ್ಕೆ



ಕೊಳ್ಳೇಗಾಲ, ಅ.3– ಇತ್ತೀಚೆಗೆ ಮಂಗಳೂರಿನ ಮಂಗಳ ಕ್ರೀಡಾಂಗಣದಲ್ಲಿ ನಡೆದ ರಾಜ್ಯಮಟ್ಟದ ಕ್ರೀಡಾಕೂಟದ ಚಕ್ರ ಎಸೆತ(ಡಿಸ್ಕಸ್ ಥ್ರೋ) ಸ್ಪರ್ಧೆಯಲ್ಲಿ ಪಟ್ಟಣದ ಸರ್ಕಾರಿ ಆದರ್ಶ ಶಾಲೆ ವಿದ್ಯಾರ್ಥಿ ಅಭಿಜಿತ್ ಟಿ.ನಾಯಕ್ ಚಿನ್ನದ ಪದಕ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ಅಭಿಜಿತ್ ಚಕ್ರ ಎಸೆತ ಸ್ಪರ್ಧೆಯಲ್ಲಿ 39.34 ಮೀ. ದೂರ ಎಸೆಯುವ ಮೂಲಕ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದು, ಈತನ ಸಾಧನೆಗೆ ಎಫ್‌ಟಿ ತರಬೇತುದಾರ ಶಿವ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಭಿಜಿತ್ ಕುಂತೂರುಮೋಳೆ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕ ಟಿ.ತುಳಸೀಯನ್ಮತ್ತು ದೊಡ್ಡಿಂದುವಾಡಿ ಸರ್ಕಾರಿ ಶಾಲೆ ಶಿಕ್ಷಕಿ ಪ್ರಮೀಳಾ ಬಾಯಿ ದಂಪತಿ ಪುತ್ರ. ಈತನನ್ನು ಬಿಇಓ ಮಂಜುಳಾ, ಬಿಆರ್‌ಸಿ ಮಹದೇವಕುಮಾರ್, ಆದರ್ಶ ಶಾಲೆ ಶಿಕ್ಷಕ ವೃಂದ ಮಹದೇಶ್ವರ ಸ್ನೇಹ ಬಳಗದ ಅಧ್ಯಕ್ಷ ಶಾಂತರಾಜು, ಪದಾಧಿಕಾರಿಗಳಾದ ಮಲ್ಲರಾಜು, ಉಮೇಶ್, ರಾಜು, ಶ್ರೀನಿವಾಸ್, ರಂಗಸ್ವಾಮಿ, ಬಾಲು, ಸಂತೋಷ್, ನಂಜುಂಡೇಗೌಡ, ಗುರುಸ್ವಾಮಿ ಇತರರು ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ

ಬುಧವಾರ 4 ಅಕ್ಟೋಬರ್ 2023

ಒಂದನೇ ಪುಟದಿಂದ

ಈ ಬಾರಿ ಪ್ರಾಯೋಜಕತ್ವ ದಸರಾ

ಎಂದು ತಿಳಿಸಿದರು. ಕವಿಗೋಷ್ಠಿ, ಯುವ ಸಂಭ್ರಮದಲ್ಲಿ ಒಳ್ಳೆಯ ಸಂದೇಶ ಕೊಡಬೇಕು. ಬಹುತ್ವ ಭಾರತ, ಸಂವಿಧಾನದ ಆಶಯ, ಸಾಮರಸ್ಯದ ಸಂದೇಶವನ್ನು ಯುವ ಜನತೆಯ ಮೂಲಕ ಜನತೆಗೆ ತಿಳಿಸಲಿದ್ದೇವೆ. ರೈತ ದಸರಾದಲ್ಲಿ ಕೃಷಿ ಚಟುವಟಿಕೆಯನ್ನು ಯಾವ ರೀತಿ ಕೈಗೊಳ್ಳಬೇಕು? ಯಾವ ರೀತಿಯ ಕೃಷಿ ಪದ್ಧತಿ ಹೆಚ್ಚು ಅನುಕೂಲಕರ, ಕಡಿಮೆ ವೆಚ್ಚ ಹಾಗೂ ಕಡಿಮೆ ನೀರಿನಿಂದ ಯಾವ ರೀತಿ ಕೃಷಿ ಚಟುವಟಿಕೆ ಕೈಗೊಳ್ಳಬೇಕು, ಕೃಷಿ ಚಟುವಟಿಕೆಯಲ್ಲಿ ತಂತ್ರಜ್ಞಾನದ ಅಳವಡಿಕೆಯ ಅನಿವಾರ್ಯತೆ ಮುಂತಾದ ವಿಷಯಗಳ ಕುರಿತು ರೈತರಿಗೆ ಮಾರ್ಗದರ್ಶನ ನೀಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಮಾತನಾಡಿ, ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸಲು ಬೇಕಾದ ಎಲ್ಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಕಳೆದ ಬಾರಿಯಂತೆ ಈ ಬಾರಿಯೂ ದಸರಾ ರಂಗೋತ್ಸವ ನಡೆಯಲಿದ್ದು, ರಂಗಾಯಣಕ್ಕೆ ಬೇಕಾದ ಎಲ್ಲ ಸವಲತ್ತುಗಳನ್ನು ಒದಗಿಸಲಾಗುವುದು. ಉತ್ತರ ಕರ್ನಾಟಕದ ಸಂಸ್ಕೃತಿಯನ್ನು ಪರಿಚಯಿಸುವ ಸಲುವಾಗಿ ಉತ್ತರ ಕರ್ನಾಟಕದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದಸರಾ ಉತ್ಸವದಲ್ಲಿ ಆಯೋಜಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭ ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜುಳಾ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಜಿ.ಪಂ. ಕೆ.ಎಂ.ಗಾಯತ್ರಿ, ಡಿಸಿಎಫ್ ಸೌರಭ್ ಕುಮಾರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಹಾಗೂ ಇತರರು ಇದ್ದರು.

ಕೋಮುಗಲಭೆ ಮಾಡುವವರ ವಿರುದ್ಧ ಕಠಿಣ ಕ್ರಮ

ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಕೋಲಾರದಲ್ಲಿ ಬಿಜೆಪಿ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಉತ್ತರಿಸಿ, ಯಾರು ಬೇಕಾದರೂ ಪ್ರತಿಭಟನೆ ಮಾಡಬಹುದು. ಆದರೆ ಆ ಪ್ರತಿಭಟನೆಗೆ ಸಕಾರಣವಿರಬೇಕು ಮತ್ತು ಶಾಂತಿಯುತವಾಗಿ ನಡೆಯಬೇಕು ಎಂದು ಹೇಳಿದರು.

ಕುರುಬ ಸಮಾಜ ಸಮಾವೇಶದ ಸಂದರ್ಭದಲ್ಲಿ ಲಿಂಗಾಯತ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂಬ ಕೂಗು ಎದ್ದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ನಮ್ಮ ಸರ್ಕಾರದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ. ಎಲ್ಲರನ್ನೂ ಒಳಗೊಂಡಂತಹ ಆಡಳಿತದ ನೀತಿ ನಮ್ಮ ಸರ್ಕಾರ ಹೊಂದಿದೆ ಎಂದರು. ಬೇರೆ ಬೇರೆ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಉಪ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ, ಒಕ್ಕಲಿಗರ ಹೋರಾಟ ಸಮಿತಿ ನೀಡಿದ ಪತ್ರವನ್ನು ಆಧರಿಸಿ, ಉಪ ಮುಖ್ಯಮಂತ್ರಿಗಳು ನನಗೆ ಪತ್ರ ಬರೆದಿದ್ದಾರೆ. ಇಂದಷ್ಟೇ ಆ ಪತ್ರ ನೋಡಿದ್ದೇನೆ ಎಂದು ತಿಳಿಸಿದರು.

ಅರಮನೆ ಆವರಣದಲ್ಲಿ ಫಿರಂಗಿಗಳಿಗೆ ಪೂಜೆ

ಹಿನ್ನೆಲೆಯಲ್ಲಿ ನಾಳೆ(ಅ.4)ಯಿಂದ ಅರಮನೆ ಆವರಣದಲ್ಲಿ ಒಳ ತಾಲೀಮು ನಡೆಸಲಾಗುತ್ತದೆ. ತಾಲೀಮಿಗೆ 7 ಫಿರಂಗಿ ಬಳಸಲಾಗುತ್ತಿದ್ದು, ಪ್ರತಿಯೊಂದು ಫಿರಂಗಿಗೂ ತಲಾ ಐದು ಮಂದಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಜಂಬೂಸವಾರಿ ದಿನ ಚಿನ್ನದ ಅಂಬಾರಿಯಲ್ಲಿನ ಉತ್ಸವ ಮೂರ್ತಿಗೆ ಗಣ್ಯರು ಪುಷ್ಪಾರ್ಚನೆ ಸಲ್ಲಿಕೆ ವೇಳೆ ಪೊಲೀಸ್ ಬ್ಯಾಂಡ್ ತಂಡ ನುಡಿಸುವ ರಾಷ್ಟ್ರಗೀತೆ ಪೂರ್ಣಗೊಳ್ಳುವ ವೇಳೆ 21 ಸುತ್ತು ಕುಶಾಲತೋಪು ಸಿಡಿಸಬೇಕಾಗಿದ್ದು, ಒಂದು ನಿಮಿಷದಲ್ಲಿ 7 ಫಿರಂಗಿಗಳನ್ನು ಬಳಸಲಾಗುತ್ತದೆ. ಪ್ರತಿಯೊಂದು ಫಿರಂಗಿಯಿಂದಲೂ ತಲಾ ಮೂರು ಸುತ್ತು ಕುಶಾಲತೋಪು ಸಿಡಿಸಲಾಗುತ್ತದೆ. ಅದಕ್ಕಾಗಿ ನಾಳೆಯಿಂದ ಸಿಡಿಮದ್ದು ಬಳಸದೆ, ಒಣ ತಾಲೀಮು ನಡೆಸಲಾಗುತ್ತದೆ. ಮುಂದಿನ ವಾರ ದಸರಾ ಗಜಪಡೆ ಹಾಗೂ ಅಶ್ವಪಡೆಯ ಮುಂದೆ ಸಿಡಿಮದ್ದು ಸಿಡಿಸುವ ತಾಲೀಮು ನಡೆಸಲು ಫಿರಂಗಿ ದಳ ಸಜ್ಜಾಗಿದೆ.

ಸಿದ್ಧತೆ ಮಾಡಿಕೊಂಡಿದ್ದೇವೆ: ಫಿರಂಗಿ ಪೂಜೆ ಬಳಿಕ ಪೊಲೀಸ್ ಆಯುಕ್ತ ರಮೇಶ್ ಬಾನೊತ್ ಮಾತನಾಡಿ, ದಸರಾ ಮಹೋತ್ಸವದಲ್ಲಿ ಕುಶಾಲತೋಪು ಸಿಡಿಸುವ ಫಿರಂಗಿದಳ ರಚಿಸಲಾಗಿದ್ದು, ಇದಕ್ಕಾಗಿ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ. ಈಗಾಗಲೇ ಫಿರಂಗಿ ಪೂಜೆ ನೆರವೇರಿದ್ದು, ಒಣ ತಾಲೀಮು ನಡೆಸಲಿದ್ದಾರೆ. ನಂತರ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಆನೆ ಹಾಗೂ ಕುದುರೆಗಳು ಸಿಡಿಮದ್ದಿನ ಶಬ್ದಕ್ಕೆ ಹೆದರದಂತೆ ನೋಡಿಕೊಳ್ಳುವುದಕ್ಕಾಗಿ ಸಿಡಿಮದ್ದು ಸಿಡಿಸುವ ತಾಲೀಮು ನಡೆಸಲಾಗುವುದು. ಕೋಟೆ ಮಾರಮ್ಮನ ದೇವಾಲಯದ ಬಳಿ ಆನೆಗಳು, ಅಶ್ವಾರೋಹಿ ಪಡೆಗಳನ್ನು ನಿಲ್ಲಿಸಿ ತಾಲೀಮು ನಡೆಸಲಾಗುತ್ತದೆ. ದಸರಾ ಮಹೋತ್ಸವ ಹಾಗೂ ಜಂಬೂಸವಾರಿ ಮೆರವಣಿಗೆಗೆ ಸಂಬಂಧಿಸಿದಂತೆ ಭದ್ರತಾ ಕ್ರಮಕೈಗೊಳ್ಳುವ ಬಗ್ಗೆ ತಯಾರಿ ಮಾಡಿಕೊಳ್ಳುತ್ತಿದ್ದೇವೆ ಎಂದರು.

ಈ ವೇಳೆ ಡಿಸಿಎಫ್ ಸೌರಭ್ ಕುಮಾರ್, ಡಿಸಿಪಿಗಳಾದ ಎಂ.ಮುತ್ತುರಾಜ್, ಜಾಹ್ನವಿ, ಸಿಎಆರ್ ಡಿಸಿಪಿ ಮಾರುತಿ, ಮೌಂಟೆಡ್ ಡಿಸಿಪಿ ಶೈಲೇಂದ್ರ, ಎಸಿಪಿ ಶಾಂತಮಲ್ಲಪ್ಪ, ಅರಮನೆ ಭದ್ರತಾ ಮಂಡಳಿ ಎಸಿಪಿ ಚಂದ್ರಶೇಖರ್, ಇನ್‌ಸ್ಪೆಕ್ಟರ್‌ಗಳಾದ ಆನಂದಕುಮಾರ್, ಜಿ.ಅಶೋಕ್ ಕುಮಾರ್, ಹೆಚ್.ಪಿ.ಸತೀಶ, ಬಿ.ಶಿವಕುಮಾರ, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಶ್ರೀನಿವಾಸಪ್ರಸಾದ್ ರಾಜಕೀಯ ನಿವೃತ್ತಿ

ಶಿವಮೊಗ್ಗ ಕೋಮುಗಲಭೆಗೆ ಸಿದ್ದರಾಮಯ್ಯ, ಪರಮೇಶ್ವರ ಕುಮ್ಮಕ್ಕು: ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಶಿವಮೊಗ್ಗದ ರಾಗಿಗುಡ್ಡದಲ್ಲಿ ನಡೆದ ಗಲಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ್ ಕುಮ್ಮಕ್ಕು ನೀಡಿದ್ದಾರೆ ಎಂದು ಆರೋಪಿಸಿದರು. ಹಿಂದೂಗಳಿಗೆ ಅಪಮಾನ ಮಾಡುವ ರೀತಿ ರಾಜ್ಯದಲ್ಲಿ ಈದ್ ಮಿಲಾದ್ ಆಚರಿಸಲಾಗುತ್ತಿದೆ. ಶಿವಮೊಗ್ಗದಲ್ಲಿ ಈದ್ ಮಿಲಾದ್ ಮೆರವಣಿಗೆಯಲ್ಲಿ ಆಯುಧ ಹಿಡಿದು ಸಾಗಿದ್ದಾರೆ. ಕಲ್ಲು ತೂರಾಟ ನಡೆಸಿದ್ದಾರೆ. ಗಲಭೆಯ ಬಗ್ಗೆ ಸಿಸಿಟಿವಿ ಕ್ಯಾಮೆರಾದಲ್ಲಿ ಎಲ್ಲಾ ದಾಖಲೆಗಳಿದ್ದರೂ ಪೊಲೀಸರು ಏನು ಮಾಡುತ್ತಿದ್ದಾರೆ? ರಾಜ್ಯ ಸರ್ಕಾರ ಅವರ ಕೈಕಟ್ಟಿ ಹಾಕಿದೆ ಎಂದು ದೂರಿದರು. ಇದೊಂದು ಸಾಮಾನ್ಯ ಘಟನೆ ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದ್ದಾರೆ. ನಿಮ್ಮ ಮನೆ ಮುಂದೆ ಬಂದು ಯಾರಾದರೂ ಈ ರೀತಿ ಮಾಡಿದ್ದರೆ ಸುಮ್ಮನೆ ಇರುತ್ತಿದ್ದಿರಾ ಪರಮೇಶ್ವರ್ ಅವರೇ ಎಂದು ಸಚಿವೆ ಪ್ರಶ್ನಿಸಿದರು.

ಜಾತಿ ತತ್ವದ ಮೇಲಲ್ಲ...

ವೀರಶೈವ ಸಮುದಾಯದ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಗಳಲ್ಲಿ ನಿಯೋಜಿಸಿರುವ ಬಗ್ಗೆ ಮಾಹಿತಿ ನೀಡುವುದಾಗಿ ಸಿದ್ದರಾಮಯ್ಯ ಅವರು ತಿಳಿಸಿದ್ದರು. ಆದರೆ, ಇಂದು ಅವರ ಆಪ್ತ ಶಾಸಕ ಸರ್ಕಾರದ ಕೆಲವು ಅಂಕಿ-ಅಂಶಗಳನ್ನು ಬಹಿರಂಗ ಪಡಿಸಿದರು. ನಿತೀಶ್ ಪಾಟೀಲ್, ದಿವಾಕರ್, ಗೋವಿಂದರೆಡ್ಡಿ ಅವರು ವೀರಶೈವ ಸಮುದಾಯಕ್ಕೆ ಸೇರಿದವರಾಗಿದ್ದು, ಜಿಲ್ಲಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ಯಾಮನೂರು ಅವರಿಗೆ ಮಾಹಿತಿ ಕೊರತೆ ಇದ್ದಂತೆ ಇದೆ. ದಾವಣಗೆರೆಯಲ್ಲೇ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸುರೇಶ್ ಹಿಟ್ನಾಳ್, ಪೊಲೀಸ್ ವರಿಷ್ಠಾಧಿಕಾರಿಯಾಗಿ ಉಷಾರಾಣಿ ಇದ್ದಾರೆ.

ಜಾತಿ ಆಧಾರದ ಮೇಲೆ ಮಾತನಾಡುವುದು ಸರಿಯಲ್ಲ. ಶ್ಯಾಮನೂರು ಮಾತನಾಡಿರುವುದು ನೂರಕ್ಕೆ ನೂರರಷ್ಟು ತಪ್ಪು. ಅದರಲ್ಲೂ ಅವರು ಶಾಸಕರಾಗಿ ಈ ರೀತಿ ಹೇಳಿಕೆ ನೀಡಬಾರದು. ನಾವು ಅಧಿಕಾರಿಗಳಲ್ಲಿ ಜಾತಿ ನೋಡಬಾರದು. ಇದೇ ರೀತಿ ಮಾತನಾಡಿಕೊಂಡು ಹೋದರೆ, ಅನರ್ಹರೆಲ್ಲರೂ ಮಾತನಾಡುತ್ತಾರೆ. ಶ್ಯಾಮನೂರು ಬೆಂಬಲಿಸಿ ಯಡಿಯೂರಪ್ಪ ಅವರು ಮಾತನಾಡಿರುವುದು ತಪ್ಪೇ.

ಸಿದ್ದರಾಮಯ್ಯ ಲಿಂಗಾಯಿತ ವಿರೋಧಿ ಅಲ್ಲ. ಅವರು ಆ ಸಮುದಾಯಕ್ಕೆ ಅನ್ಯಾಯವನ್ನು ಮಾಡಿಲ್ಲ. ಅವರು ಬಸವತತ್ವ ಪರಿಪಾಲಕರು ಎಂದು ಸಮರ್ಥಿಸಿಕೊಂಡರು.

ಇವರ ನೇತೃತ್ವದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ನಾಲ್ಕು ಗ್ಯಾರಂಟಿ ಕಾರ್ಯಕ್ರಮಗಳು ಜಾರಿಯಾಗಿವೆ. ನಾನು ಪತ್ರ ಬರೆದ ನಂತರ ಶಾಸಕರ ಸಮಸ್ಯೆಗಳನ್ನು ಆಲಿಸಿ ಅವಕ್ಕೂ ಪರಿಹಾರವನ್ನು ಕಂಡುಹಿಡಿಯುತ್ತಿದ್ದಾರೆ.

ಉಪ ಮುಖ್ಯಮಂತ್ರಿ ವಿಚಾರ ಚರ್ಚೆಗೆ ಬಂದು ಆರೋಗ್ಯಕರವಾಗಿಯೇ ಚರ್ಚೆ ನಡೆದವು. ನಮ್ಮ ಸಮಾಜದವರಿಗೆ ಸಂಪುಟದಲ್ಲಿ 7 ಸ್ಥಾನಗಳು ದೊರೆತಿವೆ. ಸಂಪುಟ ರಚನೆ ಮಾಡುವಾಗ ಪ್ರಾದೇಶಿಕ ಹಾಗೂ ಜಾತಿ ಆಧಾರಿತ ಪರಿಗಣನೆ ಬೇರೆ. ಆದರೆ, ಜಾತಿ ಆಧಾರದ ಮೇಲೆ ಹುದ್ದೆ ನೀಡಲಾಗದು. ಅಧಿಕಾರಿಗಳ ವಿಚಾರದಲ್ಲಿ ಜಾತಿ ವಿಚಾರ ಪ್ರಸ್ತಾಪ ಮಾಡಿದರೆ ಅವರ ನೈತಿಕ ಸ್ಥೈರ್ಯ ಕುಗ್ಗಲಿದೆ. ಆಡಳಿತದ ಮೇಲೂ ಪರಿಣಾಮ ಬೀರಲಿದೆ. ಕಳೆದ 30 ವರ್ಷಕ್ಕೆ ಹೋಲಿಸಿದರೆ ಆಡಳಿತ ವ್ಯವಸ್ಥೆ ಕುಸಿದಿದೆ. ಇಂತಹ ಹೇಳಿಕೆಗಳಿಂದ ಜನಪ್ರಿಯವಾದ ಆಡಳಿತ ನೀಡಲಾಗದು. ಕಾಂತರಾಜು ಅವರು ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಅಧ್ಯಕ್ಷರಾಗಿದ್ದಾಗ ಸಿದ್ಧಪಡಿಸಲಾದ ಜಾತಿ ಗಣತಿಯನ್ನು ಸರ್ಕಾರ ಸ್ವೀಕರಿಸಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ ವರದಿಯನ್ನು ಸ್ವೀಕರಿಸಿ ಬಿಡುಗಡೆ ಮಾಡಬೇಕು ಎಂದು ಅವರು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು. ಬಿಹಾರದಲ್ಲಿ ಜಾತಿ ಗಣತಿ ಬಿಡುಗಡೆ ಮಾಡಲಾಗಿದೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಬಿಡುಗಡೆ ಮಾಡಬೇಕು. ಯಾವ ಸಮಾಜದವರು ಎಷ್ಟಿದ್ದಾರೆ ಎಂಬುದು ಗೊತ್ತಾಗಲಿದೆ ಎಂದು ಹೇಳಿದರು.

ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿ ಪುಟ್ಟರಂಗಶೆಟ್ಟಿ ಇದ್ದರು. ಆಗ ವರದಿಯನ್ನು ಪಡೆಯಲಿಲ್ಲ ಎಂದು ಆರೋಪಿಸಿದ್ದಾರೆ. ನಂತರ ಆಯೋಗಕ್ಕೆ ಜಯಪ್ರಕಾಶ್ ಹೆಗಡೆಯವರನ್ನು ಬಿಜೆಪಿ ಸರ್ಕಾರ ನೇಮಿಸಿತ್ತು. ಅವರಿಗೂ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಆದರೆ ಇನ್ನೂ ಕೊಟ್ಟಿಲ್ಲ ಎಂದು ಹೇಳಿದ್ದಾರೆ.

ಶಿವಮೊಗ್ಗದಲ್ಲಿ ಜಿಲ್ಲಾ ರಕ್ಷಣಾಧಿಕಾರಿಗಳು ಸೇರಿದಂತೆ ಪೊಲೀಸರ ಮೇಲೆ ಕಲ್ಲು ತೂರಾಟವಾಗಿರುವ ಬಗ್ಗೆ ಮಾತನಾಡಿ ಘಟನೆಗೆ ಕಾರಣರಾದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ವೃತ್ತಿ ಕಲಾವಿದರ ಒಕ್ಕೂಟ ಉದ್ಘಾಟನೆ ; ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಇತರೆ ಇಲಾಖೆಗಳಲ್ಲಿ ಬಳಕೆಯಾಗದ

ವಿಶೇಷ ಘಟಕ, ಗಿರಿಜನ ಉಪಯೋಜನೆ ಅನುದಾನ ಕಲ್ಪಿಸುವ ಭರವಸೆ

ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಮಾಹಿತಿ



ಮೈಸೂರು,ಅ.3(ಪಿಎಂ)–ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಿವಿಧ ಇಲಾಖೆಗಳಲ್ಲಿ ಬಳಕೆಯಾಗದೇ ಉಳಿಯುವ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಅನುದಾನ ಒದಗಿಸಿ, ಹೆಚ್ಚು ಕಲಾವಿದರನ್ನು ಪ್ರೋತ್ಸಾಹಿಸಲು ಅನುಕೂಲ ಕಲ್ಪಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಸಚಿವರಲ್ಲಿ ಮನವಿ ಮಾಡಿದ್ದು, ಇದಕ್ಕೆ ಉಭಯ ಸಚಿವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ತಿಳಿಸಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತಿ ಕಲಾವಿದರ ಒಕ್ಕೂಟದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಇಲಾಖೆಗೆ ಸಾಮಾನ್ಯ, ವಿಶೇಷ ಘಟಕ, ಗಿರಿಜನ ಉಪಯೋಜನೆ ಎಂಬ ಮೂರು ವಿಭಾಗಗಳಲ್ಲಿ ಸರ್ಕಾರದಿಂದ ಅನುದಾನ ಬರುತ್ತಿದೆ. ಆದರೆ ಈಗ ಇಲಾಖೆಗೆ ನೀಡುತ್ತಿರುವ ಈ ಅನುದಾನ ಕಡಿಮೆ ಇದ್ದು, ಸದರಿ ಅನುದಾನ ಹೆಚ್ಚಳಕ್ಕೆ ಅವಕಾಶವಿದ್ದು, ಈ ನಿಟ್ಟಿನಲ್ಲಿ ಕ್ರಮ ವಹಿಸಲು ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ ಎಂದು ಹೇಳಿದರು.

ಈ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಸಂಬಂಧ ರಾಜ್ಯ ಪರಿಷತ್ತಿನ ನಾಲ್ಕನೇ ತ್ರೈಮಾಸಿಕ ಸಭೆ ಮುಗಿಯುವ ಹೊತ್ತಿಗೆ ಬೇರೆ ಬೇರೆ ಇಲಾಖೆಗಳಲ್ಲಿ ಸಾವಿರಾರು ಕೋಟಿ ರೂ. ಬಳಕೆಯಾಗದೇ ಉಳಿದುಕೊಂಡಿರುತ್ತದೆ. ಹೀಗೆ ಬಳಕೆಯಾಗದೇ ಅನುದಾನದಲ್ಲಿ ಸಾಧ್ಯವಾದಷ್ಟನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒದಗಿಸಬೇಕೆಂದು ಮನವಿ ಮಾಡಿದ್ದು, ಇದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಎರಡನೇ ತ್ರೈಮಾಸಿಕ ಸಭೆಯಲ್ಲಿ ಈ ಸಂಬಂಧ ಪ್ರಸ್ತಾಪಿಸಲಾಗುವುದು. ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿ ಅನುಷ್ಠಾನಗೊಳಿಸುವ ಅಭಿಪ್ರಾಯವನ್ನು ಉಭಯ ಸಚಿವರು ವ್ಯಕ್ತಪಡಿಸಿದ್ದಾರೆ. ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಅನುದಾನವನ್ನು ಆಯಾಯ ಸಮುದಾಯದ ಕಲಾವಿದರ ಶ್ರೇಯೋಭಿವೃದ್ಧಿಗೇ ಬಳಸಬೇಕಿರುತ್ತದೆ ಎಂದು ತಿಳಿಸಿದರು.

ಇಂತಹ ಒಕ್ಕೂಟಗಳು ಎಲ್ಲರ ಹಿತ ದೃಷ್ಟಿಯಿಂದ ಶ್ರಮಿಸಿದಾಗ ಎಲ್ಲಾ ಕಲಾವಿದರಿಗೆ ಅನುಕೂಲವಾಗಲಿದೆ. ಕಳೆದ 15 ವರ್ಷಗಳಿಂದ ನಾನು ಸರ್ಕಾರಿ ಸೇವೆಯಲ್ಲಿದ್ದು, ಈ ಅವಧಿಯಲ್ಲಿ ಏಕಸ್ವಾಮ್ಯಗೊಳ್ಳುವುದು ಹಾಗೂ ಮಾದರಿಯಾಗಿ ಮುನ್ನಡೆಯುವುದು ಎರಡೂ ರೀತಿಯ ಸಂಘ-ಸಂಸ್ಥೆಗಳನ್ನು ಕಂಡಿದ್ದೇನೆ. ಆದ್ದರಿಂದ ಪ್ರಸ್ತುತ ಇಂದು ಉದ್ಘಾಟನೆಯಾಗಿರುವ ಈ ಒಕ್ಕೂಟ ಎಲ್ಲರ ಹಿತಾಸಕ್ತಿ ಕಾಯುವ ಮಾದರಿ ಸಂಸ್ಥೆಯಾಗಿ ಮುಂದುವರೆಯಲಿ ಎಂದು ಆಶಯ ವ್ಯಕ್ತಪಡಿಸಿದರು.

ಒಕ್ಕೂಟ ಉದ್ಘಾಟಿಸಿದ ಗಾಂಧಿನಗರದ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಮಾತನಾಡಿ, ಭಾರತದಲ್ಲಿ ನಾವು ಸಂಘ ಮತ್ತು ಸಂಸ್ಥೆ ಸ್ಥಾಪಿಸುವ ಹಕ್ಕು ಇರಲಿಲ್ಲ. ಆ ಹಕ್ಕನ್ನು ಕಲ್ಪಿಸಿಕೊಟ್ಟವರು ಡಾ.ಬಿ.ಆರ್. ಅಂಬೇಡ್ಕರ್. ಅವರ ಹೆಸರಿನಲ್ಲಿ ಒಕ್ಕೂಟ ಸ್ಥಾಪಿಸಿ ಮಾದರಿಯಾದ ಕೆಲಸಗಳನ್ನು ಮಾಡಲು ಮುಂದಾಗಿರುವ ತಮಗೆ ಶುಭವಾಗಲಿ ಎಂದು ಒಕ್ಕೂಟದ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಆಶೀರ್ವದಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಉದ್ಯಮಿ ದೌಲತ್, ಮೈಸೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯ ಕುಮಾರ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಉಪ ಪ್ರಧಾನ ಕಾನೂನು ನೆರವು ಅಭಿರಕ್ಷಕ ಆನಂದ್, ಒಕ್ಕೂಟದ ಅಧ್ಯಕ್ಷ ಎಂ.ಪುಟ್ಟಸ್ವಾಮಿ ಮತ್ತಿತರರು ಹಾಜರಿದ್ದರು.

ದಸರಾದಲ್ಲಿ ಕಾರ್ಯಕ್ರಮ ನೀಡಲು 2,632 ಅರ್ಜಿ ಸಲ್ಲಿಕೆ

ಮೈಸೂರು,ಅ.3(ಪಿಎಂ)– ಪ್ರಸಕ್ತ ದಸರಾದಲ್ಲಿ ಕಾರ್ಯಕ್ರಮ ನೀಡಲು ಅಪೇಕ್ಷಿಸಿ ಈವರೆಗೆ 2,632 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ತಿಳಿಸಿದರು.

ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತಿ ಕಲಾವಿದರ ಒಕ್ಕೂಟದ ಉದ್ಘಾಟನಾ ಸಮಾರಂಭದಲ್ಲಿ ದಸರಾ ಕಾರ್ಯಕ್ರಮಗಳಲ್ಲಿ ಅವಕಾಶ ಕಲ್ಪಿಸಬೇಕೆಂಬ ಒಕ್ಕೂಟದ ಮನವಿಗೆ ಪೂರಕವಾಗಿ ಮಾತನಾಡಿದ ಅವರು, ಕಳೆದ ವರ್ಷ 2,137 ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ವರ್ಷ ನಿನ್ನೆ ಸಂಜೆವರೆಗೆ 2,632 ಅರ್ಜಿಗಳು ಸಲ್ಲಿಕೆಯಾಗಿವೆ. ಕೊನೆ ದಿನಾಂಕ ಮುಕ್ತಾಯವಾಗಿದ್ದರೂ ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಇಂದು ಜಿಪಂಯಿಂದ 40ರಿಂದ 50 ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಕಚೇರಿಯಿಂದ 30ರಿಂದ 40 ಅರ್ಜಿಗಳು ಬಂದಿವೆ. ನಮ್ಮ ಕಚೇರಿಗೂ ನೇರವಾಗಿ ಸುಮಾರು ಅರ್ಜಿಗಳು ಸಲ್ಲಿಕೆಯಾಗಿವೆ. ಅವುಗಳ ಪರಿಶೀಲನೆ ಪ್ರಕ್ರಿಯೆ ಬಾಕಿ ಉಳಿದಿದೆ ಎಂದು ಮಾಹಿತಿ ನೀಡಿದರು.

ಕಳೆದ ವರ್ಷ ಸುಮಾರು 360 ತಂಡಗಳ ನಾಲ್ಕೂವರೆಯಿಂದ ಐದು ಸಾವಿರ ಕಲಾವಿದರಿಗೆ ಅವಕಾಶ ಕಲ್ಪಿಸಲಾಗಿತ್ತು. ಈ ವರ್ಷವೂ ಅದೇ ಸಂಖ್ಯೆಯ ಕಲಾವಿದರು ಅವಕಾಶ ಪಡೆಯಲಿದ್ದಾರೆ. ಹಾಗಾಗಿ ಗರಿಷ್ಠ ಮಟ್ಟದಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯದಡಿ ಅವಕಾಶ ಕಲ್ಪಿಸಲಾಗುವುದು. ಆಯ್ಕೆ ವೇಳೆ ಎಲ್ಲಾ ಕಲಾ ಪ್ರಕಾರ, ವರ್ಗ ಮತ್ತು ಪ್ರದೇಶಗಳ ಕಲಾವಿದರನ್ನು ಗಮನದಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸಾಮಾಜಿಕ ಸೇವಾಕಾರ್ಯಗಳ ಮೂಲಕ ಶಾಸಕ ತನ್ವೀರ್ ಸೇಠ್ ಹುಟ್ಟುಹಬ್ಬ ಆಚರಣೆ



ಮೈಸೂರು, ಅ.3(ಜಿಎ)–ಮೈಸೂರಿನ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಹುಟ್ಟು ಹಬ್ಬವನ್ನು ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಆಚರಿಸಲಾಯಿತು.

ಶಾಸಕ ತನ್ವೀರ್ ಸೇಠ್ ಹುಟ್ಟು ಹಬ್ಬದ ಅಂಗವಾಗಿ ಬನ್ನಿಮಂಟಪದ ಶಿವರಾತ್ರೀಶ್ವರ ನಗರದಲ್ಲಿರುವ ಅಪ್ನಾ ಘರ್ ಆಶ್ರಮಕ್ಕೆ ಶಾಸಕ ತನ್ವೀರ್ ಸೇಠ್ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಕಾರ್ಯಕರ್ತರು, ಅಭಿಮಾನಿಗಳು ಏರ್ಪಡಿಸಿದ್ದ ಸಮಾಜ ಕಾರ್ಯಗಳಲ್ಲಿ ತೊಡಗಿಸಿಕೊಂಡರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಂಚಾರಿ ಕಣ್ಣಿನ ಚಿಕಿತ್ಸೆ ವಿಭಾಗದ ವತಿಯಿಂದ ನಗರದ ವಿದ್ಯಾನಗರ, ಕ್ಯಾತಮಾರನಹಳ್ಳಿ, ಡಾ.ರಾಜ್‌ಕುಮಾರ್ ರಸ್ತೆ, ಶಕ್ತಿ ನಗರ ಯರಗನಹಳ್ಳಿ ಮತ್ತು ಗಿರಿಯಭೋವಿಪಾಳ್ಯ ಸೇರಿದಂತೆ ನರಸಿಂಹ ರಾಜ ಕ್ಷೇತ್ರದ ವಿವಿಧ ಸ್ಥಳಗಳಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ವೃದ್ಧ ಮಹಿಳೆಯರಿಗೆ ಸೀರೆ ವಿತರಣೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ನಂತರ ಉದಯಗಿರಿಯ ಅವರ ನಿವಾಸದ ಮುಂಭಾಗ ಕಾರ್ಯಕರ್ತರು ನಿರ್ಮಿಸಿದ್ದ ಬೃಹತ್ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು, ಅಭಿಮಾನಿಗಳು ತಂದಿದ್ದ ಕೇಕ್ ಕತ್ತರಿಸಿ ಅವರಿಗೂ ತಿನ್ನಿಸಿ ಸಂಭ್ರಮಿಸಿದರು. ಕೆಲವರು ಬೃಹತ್ ಹಾರ, ಅವರ ತಂದೆ ಅಜೀಜ್ ಸೇಠ್ ಒಳಗೊಂಡ ದೊಡ್ಡ ದೊಡ್ಡ ಫೋಟೋ ಫ್ರೇಮ್‌ಗಳನ್ನು ಉಡುಗೊರೆಯಾಗಿ ನೀಡಿದರು. ಇದರ ನಡುವೇ ಶಾಸಕರಿಗೆ ಶುಭಾಶಯ ಕೋರಿ ಫೋಟೋ ತೆಗಿಸಿಕೊಳ್ಳಲು ಮುಗಿಬಿದ್ದರು.

ಈ ವೇಳೆ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಯ್ಯದ್ ಇಕ್ಬಾಲ್, ಉಪಾಧ್ಯಕ್ಷ ಶೈನ್ ಶಾ, ಕಾರ್ಯದರ್ಶಿ ಫಾಲ್ಕನ್ ಉಸೀಮ್, ಶೌಕತ್ ಪಾಷ, ಅನ್ವರ್ ಮೊಹಮ್ಮದ್ ಇರ್ಫಾನ್, ಸೈಯದ್ ಜುನೈದ್, ರೆಹಮಾನ್ ಖಾನ್, ಅಫ್ರೋಸ್(ಮುನ್ನ), ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಎನ್. ಮಂಜುನಾಥ್, ಪಾಲಿಕೆ ಹಾಲಿ ಮತ್ತು ಮಾಜಿ ಸದಸ್ಯರು ಸೇರಿದಂತೆ ಕಾಂಗ್ರೆಸ್ ಮುಖಂಡರು ಶುಭಕೋರಿದರು.

ಇಂದು ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಪದವೀಧರರ ಸ್ವಾಗತ ಸಮಾರಂಭ



ಮೈಸೂರು, ಅ.3(ಜಿಎ)– ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಅ.4 ರಂದು ಪದವೀಧರರ ಸ್ವಾಗತ ಸಮಾರಂಭವನ್ನು ಆಯೋಜಿಸಲಾಗಿದೆ. ಸಂಸ್ಥೆಯ ಪ್ರಾಂಶುಪಾಲರಾದ ಡಾ.ಎಂ.ಆರ್.ದಾಕ್ಷಾಯಿಣಿ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಅಂದು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ರಾಜೇಂದ್ರ ಭವನದಲ್ಲಿ 3 ಗಂಟೆ ಕಾರ್ಯಕ್ರಮ ನಡೆಯಲಿದ್ದು, ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ ಬೆಂಗಳೂರಿನ ಎಂ.ಎಸ್.ರಾಮಯ್ಯ ಅಪ್ಲೈಡ್ ಸೈನ್ಸಸ್ ವಿವಿಯ ಕುಲಪತಿ ಡಾ.ಕುಲದೀಪ್ ಕುಮಾರ್ ರೈನಾ ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಅಧ್ಯಕ್ಷತೆ ವಹಿಸುವರು. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿಗಳಾದ ಪ್ರೊ.ಬಿ.ಸುರೇಶ್, ಡಾ.ಸುರಿಂದರ್ ಸಿಂಗ್ ಮತ್ತು ಕುಲಸಚಿವ ಡಾ.ಮಂಜುನಾಥ್ ಉಪಸ್ಥಿತರಿರಲಿದ್ದಾರೆ. ಅಂದಿನ ಕಾರ್ಯಕ್ರಮದಲ್ಲಿ ಕಾಲೇಜಿನ 97 ವಿದ್ಯಾರ್ಥಿಗಳು ದಂತ ವೈದ್ಯಕೀಯ ಪದವಿಯನ್ನು ಪಡೆಯುತ್ತಿದ್ದಾರೆ. 9 ವಿಭಾಗಗಳಲ್ಲಿ ವಿವಿಧ ಪ್ರಶಸ್ತಿ, ಪುರಸ್ಕಾರ ನೀಡಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಜಯಶಂಕರ್ ಮತ್ತು ಡಾ.ರಘುನಾಥ್ ಉಪಸ್ಥಿತರಿದ್ದರು.

ಇಂದು ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ಶಿಕ್ಷಣ ಕಾರ್ಯಾಗಾರ

ಮೈಸೂರು, ಅ.3(ಎಸ್‌ಪಿಎನ್)– ಇಸ್ರೋ ಚಂದ್ರಯಾನ-3 ಉಡಾವಣೆ ಕುರಿತು ವಿದ್ಯಾರ್ಥಿಗಳಲ್ಲಿ ಸೃಜನ ಶೀಲತೆ ಮತ್ತು ವೈಜ್ಞಾನಿಕ ಮನೋಭಾವನೆಯನ್ನು ಉತ್ತೇಜಿಸುವ ದೃಷ್ಟಿಯಿಂದ 'ವರ್ಲ್ಡ್ ಸ್ಪೇಸ್‌ವೀಕ್'ನ ಅಂಗವಾಗಿ ನಗರದ ಕೌಟಿಲ್ಯ ವಿದ್ಯಾಲಯ ಹಾಗೂ ಬೆಂಗಳೂರಿನ ಜೆನೆಕ್ಸ್ ಸ್ಪೇಸ್‌ನ ಸಹಯೋಗದೊಂದಿಗೆ ಇದೇ ಅ.4 ರಂದು ವಿದ್ಯಾರ್ಥಿಗಳಿಗಾಗಿ ಬಾಹ್ಯಾಕಾಶ ಶಿಕ್ಷಣ ಕಾರ್ಯಾಗಾರವನ್ನು ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ರಾಕೆಟ್ ತಯಾರಿಸುವ ಹಾಗೂ ಉಡಾವಣೆ ಮಾಡುವ ಬಗ್ಗೆ ಪ್ರಾಯೋಗಿಕವಾಗಿ ಕಲಿಯಲಿದ್ದಾರೆ. ನಂತರ ಶಾಲಾ ಆವರಣದಲ್ಲಿ ಅ.4ರಂದು ಮಧ್ಯಾಹ್ನ 3ಗಂಟೆಗೆ ರಾಕೆಟ್ ಉಡಾವಣೆ ಆಗಲಿದ್ದು, ಇದನ್ನು ಸಾರ್ವಜನಿಕರು ವೀಕ್ಷಿಸಬಹುದು ಎಂದು ಪ್ರಾಂಶುಪಾಲರಾದ ವಿ.ಆರ್.ಶಶಿಕಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜಯಪುರ ಗ್ರಾಮದಲ್ಲಿ ವಿನಾಯಕ ಬಳಗದ ಸದಸ್ಯರು ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯ ವಿಶೇಷ ಪೂಜೆಯಲ್ಲಿ ಪಾಲ್ಗೊಂಡಿದ್ದ ಸಮಾಜ ಸೇವಕ ಎಸ್.ಶ್ರೀಕಾಂತ್, ಜಯಪುರ ಡೇರಿ ಅಧ್ಯಕ್ಷ ಮೂಗ ನಾಯಕ, ಗ್ರಾಮ ಪಂಚಾಯಿತಿ ಸದಸ್ಯ ನಾಗರಾಜು, ಮಂಜುನಾಥೇಶ್ವರ ಟ್ರೇಡರ್ಸ್ ಮಾಲೀಕರಾದ ಮಂಜುನಾಥ್ ಮತ್ತು ಮುಖಂಡ ಜವರನಾಯಕರನ್ನು ಬಳಗದ ಸದಸ್ಯರು ಆತ್ಮೀಯವಾಗಿ ಅಭಿನಂದಿಸಿದರು.

ನಡಿಗೆ ಸ್ಪರ್ಧೆಯಲ್ಲಿ ಕೆ.ಜಿ.ಕೊಪ್ಪಲು ಬಾಲಕ ಕಿಷನ್‌ಗೆ ಚಿನ್ನ



ಮೈಸೂರು, ಅ.3(ಎಸ್‌ಪಿಎನ್)– ಮಂಗಳೂರಿನ ಮಂಗಳ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ಸ್ಟೇಟ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಜೂನಿಯರ್ ವಿಭಾಗದ 5 ಸಾವಿರ ಮೀ ವೇಗದ ನಡಿಗೆ ಸ್ಪರ್ಧೆಯಲ್ಲಿ ಮೈಸೂರಿನ ಕೆ.ಜಿ.ಕೊಪ್ಪಲಿನ ವಿದ್ಯಾರ್ಥಿ ಆರ್.ಕಿಶನ್ ಭಾಗವಹಿಸಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದುಕೊಂಡಿದ್ದಾರೆ.

ಅಲ್ಲದೆ, ಅ.15 ರಿಂದ 17ನೇ ರವರೆಗೆ ತೆಲಂಗಾಣದ ವಾರಂಗಲ್‌ನಲ್ಲಿ ಸೌತ್ ಜೋನ್ ನ್ಯಾಷನಲ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ. ಕಿಶನ್ ಡಿಎಂಎಸ್ ಶಾಲೆಯಲ್ಲಿ 10ನೇ ತರಗತಿಯಲ್ಲಿ ಓದುತ್ತಿದ್ದು, ಕೆ.ಜಿ.ಕೊಪ್ಪಲಿನ ನಿವಾಸಿ ಆಟೋ ಚಾಲಕ ರಮೇಶ್ ಮತ್ತು ಶೀಲಾ ದಂಪತಿ ಪುತ್ರನಾಗಿದ್ದು, ಪುನೀತ್ ಅವರಿಂದ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾನೆ.

ತಮಿಳುನಾಡಿಗೆ ಕಾವೇರಿ; ಮೈಸೂರಲ್ಲಿ ಮುಂದುವರೆದ ಪ್ರತಿಭಟನೆ

ಕುಡಿಯುವ ನೀರಿಗೂ ಕುತ್ತು ತಂದಿರುವುದು ಕನ್ನಡಿಗರ ದೌರ್ಭಾಗ್ಯ : ಹೋರಾಟಗಾರರ ಆಕ್ರೋಶ



ಮೈಸೂರು, ಅ.3(ಜಿಎ)–ತಮಿಳು ನಾಡಿಗೆ ಕಾವೇರಿ ನೀರು ಬಿಡುತ್ತಿರುವುದನ್ನು ಖಂಡಿಸಿ, ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮಂಗಳವಾರ ಮೈಸೂರು ಪುರಭವನದ ಬಳಿ ಪ್ರತಿಭಟನೆ ನಡೆಸಲಾಯಿತು.

ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕಾವೇರಿ ನ್ಯಾಯಮಂಡಳಿ ಮತ್ತು ಸುಪ್ರಿಂಕೋರ್ಟ್ ಆದೇಶಗಳು ಕನ್ನಡಿಗರಿಗೆ ವಿರುದ್ಧವಾಗಿವೆ. ಕನ್ನಡಿಗರಿಗೆ ಇದೊಂದು ದೌರ್ಭಾಗ್ಯವಾಗಿದೆ. ಕೇಂದ್ರ ಸರ್ಕಾರ, ತಮಿಳುನಾಡಿನ ಒತ್ತಡಕ್ಕೆ ಮಣಿದು ಕಾವೇರಿ ನ್ಯಾಯ ಮಂಡಳಿ ರಚನೆ ಮಾಡಿರುವುದೇ ಅತ್ಯಂತ ಘನ ಘೋರ ಅನ್ಯಾಯ. ಇಲ್ಲಿಯ ತನಕ ರಾಜ್ಯಕ್ಕೆ ಬರೀ ಅನ್ಯಾಯವಾಗಿದೆ. ಒಂದು ಬಾರಿಯೂ ಕಾವೇರಿ ನ್ಯಾಯ ಮಂಡಳಿಯಿಂದ ನ್ಯಾಯ ಸಿಕ್ಕಿಲ್ಲ. ನಮ್ಮ ರಾಜ್ಯದಲ್ಲಿ ಕುಡಿಯಲು ನೀರಿಲ್ಲದಿದ್ದರೂ, ತಮಿಳುನಾಡಿನ ಒತ್ತಾಯಕ್ಕೆ ಮಣಿದು ಮೂರನೇ ಬೆಳೆಗೆ ನೀರು ಬಿಡಲು ಆದೇಶಿಸುತ್ತಿರುವುದು ಅತ್ಯಂತ ಖಂಡನೀಯ ಎಂದರು.

ಒಕ್ಕೂಟ ವ್ಯವಸ್ಥೆಯಲ್ಲಿ ನೆರೆ ರಾಜ್ಯಗಳು ಅಣ್ಣ ತಮ್ಮಂದಿರಂತಹ ಬಾಂಧವ್ಯ ಹೊಂದಿರಬೇಕು. ಅದು ಬಿಟ್ಟು ತಮಿಳುನಾಡು ಪ್ರತಿ ಬಾರಿ ಕಾವೇರಿ ಕಣಿವೆಯ ವಸ್ತು ಸ್ಥಿತಿ ತಿಳಿದಿದ್ದರು ನಮಗೆ ನೀರು ಬಿಡಿ ಎಂದು ಹಠ ಮಾಡುತ್ತಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಬೇಸರಿಸಿದರು.

ರಾಜ್ಯದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಚುನಾವಣೆಗೂ ಮುಂಚೆ ಮೇಕೆದಾಟು ಪಾದಯಾತ್ರೆ ಮಾಡಿ, ನಾವು ರಾಜ್ಯದ ನದಿಗಳ ರಕ್ಷಣೆ ಮಾಡುತ್ತೇವೆ. ರೈತರ ಹಿತ ಕಾಪಾಡುತ್ತೇವೆ ಹಾಗೂ ನೆಲ ಜಲ ಭಾಷೆ ವಿಚಾರದಲ್ಲಿ ಬಹಳ ಗಟ್ಟಿಯಾಗಿರುತ್ತೇವೆ ಎಂದು ಆಶ್ವಾಸನೆ ನೀಡಿ, ಈಗ ರಾಜ್ಯದ ರೈತರಿಗೆ, ಜನತೆಗೆ ನಂಬಿಕೆ ದ್ರೋಹ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳೇ ನಿಮಗೆ ನಿಜವಾಗಲೂ ನೈತಿಕತೆ, ತಾಕತ್ತು ಇದ್ದರೆ ಮೇಕೆದಾಟು ಯೋಜನೆಯನ್ನಾದರೂ ಜಾರಿ ಮಾಡಿ, ಕನ್ನಡಿಗರಿಗೆ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಿ ಎಂದು ಆಗ್ರಹಿಸಿದರು.

ಪ್ರಧಾನ ಮಂತ್ರಿಗಳು ಈ ಕೂಡಲೇ ಮಧ್ಯಸ್ಥಿಕೆ ವಹಿಸಿ, ಶಾಶ್ವತ ಪರಿಹಾರ ನೀಡಬೇಕು. ನ್ಯಾಯ ಮಂಡಳಿ ರದ್ದು ಮಾಡಿ, ರಾಷ್ಟ್ರೀಯ ಜಲ ನೀತಿ ರೂಪಿಸಿ, ತಮಿಳುನಾಡಿಗೆ ವಸ್ತು ಸ್ಥಿತಿ ತಿಳಿಸಿ ಹೆಚ್ಚು ಮಳೆಯಾದರೆ ಮಾತ್ರ ತಮಿಳುನಾಡಿಗೆ ನೀರು ಬಿಡುವ ಶಾಶ್ವತ ಒಪ್ಪಂದ ಮಾಡಬೇಕು. ಇಲ್ಲವೇ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣದಂತೆ ವರ್ತಿಸುತ್ತಿರುವ ನಿಮ್ಮ ಒಕ್ಕೂಟ ವ್ಯವಸ್ಥೆಗೆ ಧಿಕ್ಕಾರವಿರಲಿದೆ. ಹೀಗೆ ಮುಂದುವರೆದರೆ ಭಾರತದ ಒಕ್ಕೂಟ ವ್ಯವಸ್ಥೆಯಿಂದಲೇ ಹೊರ ಹೋಗಲು ಸಿದ್ಧ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ಮೂಗೂರು ನಂಜುಂಡಸ್ವಾಮಿ, ಮೋಹನ್ ಕುಮಾರ್ ಗೌಡ, ಬಾಲಕೃಷ್ಣ, ಮೆಲ್ಲಹಳ್ಳಿ ಮಹದೇವ ಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಜೂ.ವಿಷ್ಣು, ಸಿದ್ಧಲಿಂಗಪ್ಪ, ಶಿವಲಿಂಗಯ್ಯ, ಅಂಬಾ ಅರಸ್, ನೇಹಾ, ಒಲಂಪಿಯಾ ರವಿ, ಮಹದೇವ.ಆರ್, ಎಳನೀರು ರಾಮಣ್ಣ, ಪುಷ್ಪಾವತಿ, ಶುಭಶ್ರೀ, ಇಂದಿರಾ, ದರ್ಶನ್, ದಿನೇಶ್, ಎಸ್ ಚಂದ್ರಶೇಖರ್, ಪದ್ಮ, ರಾಧಾಕೃಷ್ಣ, ಪರಿಸರ ಚಂದ್ರು, ಆನಂದ್, ಮಂಜುಳಾ, ಹನುಮಂತಯ್ಯ, ಬಂಗಾರಪ್ಪ, ಗಣೇಶ್ ಪ್ರಸಾದ್, ಹರೀಶ್, ಶಾಂತ ಕುಮಾರ್ ಗೌಡ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಮಿತ್ರ

ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಗ್ರಾಮಾಂತರ ಇಂಟಕ್ ಘಟಕದ ಅಧ್ಯಕ್ಷರಾಗಿ ಎನ್.ಪುಟ್ಟಯ್ಯ ಆಯ್ಕೆ



ಮೈಸೂರು, ಅ. 3– ಇತ್ತೀಚೆಗೆ ನಡೆದ ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಮೈಸೂರು ಜಿಲ್ಲಾ ಗ್ರಾಮಾಂತರ ಇಂಟಕ್ ಘಟಕದ ಅಧ್ಯಕ್ಷ ಎನ್. ಪುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿಣಿ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಎನ್. ಪುಟ್ಟಯ್ಯ ಆಯ್ಕೆಯಾದರು.

ಕರ್ನಾಟಕ ರಾಜ್ಯದ ಇಂಟಕ್ ಶಾಖೆಯ ರಾಜ್ಯ ಕಾರ್ಯದರ್ಶಿ ಕೆ.ಮಲ್ಲಯ್ಯ ಸಭೆಯಲ್ಲಿ ಉಪಸ್ಥಿತರಿದ್ದರು. ಪಿ.ಟಿ. ಬಸವರಾಜು, ಬಿ.ಲಿಂಗಯ್ಯ, ಬೋರಯ್ಯ, ಬಿ.ಎನ್.ಮಹದೇವ, ಸ್ವಾಮಿಗೌಡ (ಉಪಾಧ್ಯಕ್ಷರು), ಎಸ್.ಆರ್. ಮಹೇಶ್ ನಾಯಕ, ಎಂ.ಸಿ. ಕುಮಾರ್ (ಪ್ರಧಾನ ಕಾರ್ಯದರ್ಶಿ), ಡಿ.ಆರ್.ಸಿದ್ದಯ್ಯ, ಚಿಕ್ಕನಿಂಗ, ಕೆಂಡಗಣ್ಣಸ್ವಾಮಿ, ಕಾಳಯ್ಯ, ಹೆಚ್.ಎಸ್.ಸಿದ್ದರಾಜು, ಸಿದ್ದಲಿಂಗಸ್ವಾಮಿ (ಕಾರ್ಯದರ್ಶಿಗಳು). ತಮ್ಮಯ್ಯ, ಚಂದ್ರೇಗೌಡ, ಕೋಮಲ, ಕೌಸರ್, ಮಂಗಳಮ್ಮ (ಸಂಘಟನಾ ಕಾರ್ಯದರ್ಶಿಗಳು), ಅನಿಲ್‌ಕುಮಾರ್, ನಂದಿನಿ, ಅಶೋಕ್, ತೇಜಸ್ವಿನಿ, ತಿಬ್ಬಯ್ಯ (ಸಹ ಕಾರ್ಯದರ್ಶಿಗಳು), ನಾಗೇಶ (ಖಜಾಂಚಿ).

ಕಾರ್ಯಕಾರಿ ಸಮಿತಿ ಸದಸ್ಯರು: ಸುರೇಶ್, ಮಂಜು, ಬಿ.ನಾಗರಾಜು, ಪರಶಿವಮೂರ್ತಿ, ನಾಗಮ್ಮ, ಮಂಜುಳ, ಶಿವಮ್ಮ, ಜಗದೀಶ್, ಚಿಕ್ಕಣ್ಣ, ಸಿದ್ದರಾಮು, ನಾಗರಾಜು, ಮಲ್ಲಿಗಮ್ಮ.

ತನ್ವೀರ್ ಸೇಠ್‌ಗೆ ಚಿನ್ನ ಲೇಪಿತ ಹುಲಿ ಉಡುಗೊರೆ



ಕಾಂಗ್ರೆಸ್ ಮುಖಂಡ ಹಾಗೂ ತನ್ವೀರ್ ಸೇಠ್ ಕಟ್ಟಾ ಅಭಿಮಾನಿ ಸುಹೇಲ್ ಪಾಷ ಮಂಗಳವಾರ ಬೆಳಗ್ಗೆ ಶಾಸಕ ತನ್ವೀರ್ ಸೇಠ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿ, ಚಿನ್ನ ಲೇಪಿತ ಹುಲಿಯನ್ನು ಉಡುಗೊರೆಯಾಗಿ ನೀಡಿದರು. ಈ ಸಂದರ್ಭದಲ್ಲಿ ಅಯ್ಯಾನ್, ಸಾದಿಖ್, ವಿನ್ಸನ್, ಶಶಿ, ಕ್ರೂಸ್, ಮೊಹಮ್ಮದ್ ಸಮಿ ಮುಂತಾದವರು ಇದ್ದರು.

ಕೃಷ್ಣ ಜನ್ಮಭೂಮಿ, ಈದ್ಗಾ ವಿವಾದ: ದಾಖಲೆ ಸಲ್ಲಿಕೆಗೆ ಸುಪ್ರೀಂಕೋರ್ಟ್ ಸೂಚನೆ

ನವದೆಹಲಿ, ಅ.3– ಉತ್ತರ ಪ್ರದೇಶದ ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ದಾಖಲೆ ಪತ್ರಗಳನ್ನು ಅಕ್ಟೋಬರ್ 30ರೊಳಗೆ ಖುದ್ದಾಗಿ ಸಲ್ಲಿಸುವಂತೆ ಅಲಹಾಬಾದ್ ಹೈಕೋರ್ಟ್‌ನ ರಿಜಿಸ್ಟ್ರಾರ್‌ಗೆ ಸುಪ್ರೀಂಕೋರ್ಟ್ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠವು, ಜುಲೈ 21ರಂದು ಈ ಪ್ರಕರಣದ ವಿಚಾರಣೆ ನಡೆಸಿತ್ತು.

ಮಂಗಳವಾರ ನಡೆದ ವಿಚಾರಣೆ ವೇಳೆ ದಾಖಲೆಗಳನ್ನು ಸಲ್ಲಿಸಲು ವಿಳಂಬ ಮಾಡಿರುವುದನ್ನು ಗಮನಿಸಿದ ನ್ಯಾಯಮೂರ್ತಿಗಳು, 'ನ್ಯಾಯಪೀಠ ನೀಡಿರುವ ಆದೇಶವನ್ನು ಆಡಳಿತ ವಿಭಾಗದಿಂದ ಮುಖ್ಯ ನ್ಯಾಯಮೂರ್ತಿ ಅವರ ಮುಂದೆ ಹಾಜರುಪಡಿಸಬೇಕಿದೆ. ಹಾಗಾಗಿ, ದಾಖಲೆಗಳನ್ನು ಸಲ್ಲಿಸುವಂತೆ ಹಿಂದಿನ ಆದೇಶ ಸಹಿತ ಮತ್ತೊಮ್ಮೆ ರಿಜಿಸ್ಟ್ರಾರ್ ಅವರ ಗಮನಕ್ಕೆ ತರಬೇಕು' ಎಂದು ಸೂಚಿಸಿದರು. ಈ ವಿವಾದ ಕುರಿತ ವಿಚಾರಣೆಯನ್ನು ಹೈಕೋರ್ಟ್ ಮೇ 26ರಂದು ಮಥುರಾ ನ್ಯಾಯಾಲಯಕ್ಕೆ ವರ್ಗಾಯಿಸಿದೆ. ಇದನ್ನು ಶಾಹಿ ಮಸೀದಿ ಈದ್ಗಾ ಆಡಳಿತ ಸಮಿತಿಯ ಟ್ರಸ್ಟ್, ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದೆ.

ಅ.19ರಂದು ರೇಷ್ಮೆ ನಾರಿ ಸಿಲ್ಕ್ ಸೀರೆ ಸ್ಪರ್ಧೆ



ಮೈಸೂರು, ಅ. 3–ಡೆಸ್ಟಿನಿ ಇನ್ ಇವೆಂಟ್ಸ್ ವತಿಯಿಂದ ಅ. 19 ರಂದು ನಜರ್‌ಬಾದ್‌ನಲ್ಲಿರುವ ಹೋಟೆಲ್ ಸಂದೇಶ್ ದಿ ಪ್ರಿನ್ಸ್ ಆವರಣದಲ್ಲಿ ರೇಷ್ಮೆ ನಾರಿ ಸಿಲ್ಕ್ ಸೀರೆ ಸ್ಪರ್ಧೆ ಆಯೋಜಿಸಿರುವ ಹಿನ್ನೆಲೆಯಲ್ಲಿ ಅದರ ಪ್ರಚಾರ ಸಾಮಗ್ರಿಗಳನ್ನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿ ಸ್ಪರ್ಧೆಯು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಬಳಿಕ ಮಾತನಾಡಿದ ಡೆಸ್ಟಿನಿ ಇನ್ ಇವೆಂಟ್ಸ್ ಸಂಚಾಲಕರಾದ ಜ್ಯೋತಿ ರೇಚಣ್ಣ, ದಸರಾ ಸಂದರ್ಭದಲ್ಲಿ ಮಹಿಳೆಯರಿಗಾಗಿ ವಿಶೇಷ ಸಿಲ್ಕ್ ಸ್ಯಾರಿಯ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆಯ ಪ್ರವೇಶ ಶುಲ್ಕ 1999 ರೂ ಇರುತ್ತದೆ. ಎರಡು ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, ವಿವಾಹಿತ ಮಹಿಳೆಯರು ಹಾಗೂ ಅವಿವಾಹಿತ ಮಹಿಳೆಯರ ಸ್ಪರ್ಧೆಯು ನಡೆಯಲಿದೆ. ಸ್ಪರ್ಧಿಸಿದ ಎಲ್ಲಾ ಸ್ಪರ್ಧಾಳುಗಳಿಗೆ 3000 ಬೆಲೆಬಾಳುವ ಗಿಫ್ಟ್ ಕೂಪನ್ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು 8660430205/7019364643 ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದು. ಇದೇ ಸಂದರ್ಭದಲ್ಲಿ ರೇಚಣ್ಣ, ರುಕ್ಮಿಣಿ, ನಾಗಮಣಿ ಜೆ, ದರ್ಶನ್ ಮೂರ್ತಿ ಕೆ ಇನ್ನಿತರರು ಹಾಜರಿದ್ದರು.

ತನ್ವೀರ್ ಸೇಠ್ ಹುಟ್ಟುಹಬ್ಬ: ಕೆ.ಆರ್.ಆಸ್ಪತ್ರೆ ರೋಗಿಗಳಿಗೆ ಅನ್ನ ಸಂತರ್ಪಣೆ



ಮೈಸೂರು, ಅ. 3–ಎನ್‌ಆರ್ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಹುಟ್ಟುಹಬ್ಬದ ಪ್ರಯುಕ್ತ ಕಾಂಗ್ರೆಸ್ ಮುಖಂಡ ಎಂ.ರಸೂಲ್ ನೇತೃತ್ವದಲ್ಲಿ ನಗರದ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಅನ್ನ ಸಂತರ್ಪಣೆ ನಡೆಯಿತು.

ಮಂಗಳವಾರ ಬೆಳಗ್ಗೆ ಆಸ್ಪತ್ರೆ ಆವರಣದಲ್ಲಿ ಜಮಾಯಿಸಿದ ನೂರಾರು ತನ್ವೀರ್ ಸೇಠ್ ಅಭಿಮಾನಿಗಳು ಚೆಲುವಾಂಬ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು, ಬಿಸ್ಕತ್ ಮತ್ತು ಬ್ರೆಡ್ ವಿತರಿಸಿ ಬಳಿಕ ಹೊರ ಆವರಣದಲ್ಲಿ ನೂರಾರು ಜನರಿಗೆ ಉಪಾಹಾರ ವಿತರಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಎಂ.ರಸೂಲ್ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ನಾವು ಜನಾನುರಾಗಿ ಶಾಸಕ ತನ್ವೀರ್ ಸೇಠ್ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ. ಬೆಳಗ್ಗೆ ನಮ್ಮ ಬಡಾವಣೆಯ ಮಕ್ಕಳಿಗೆ ಪುಸ್ತಕ ವಿತರಣೆ, ಅನ್ನಸಂತರ್ಪಣೆ ನಡೆಸಲಾಗಿದೆ. ಜೊತೆಗೆ ಚೆಲುವಾಂಬ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಬ್ರೆಡ್ ಮತ್ತು ಬಿಸ್ಕತ್ ವಿತರಣೆ ಮಾಡಿ ಉಪಾಹಾರವನ್ನೂ ನೀಡುವ ಮೂಲಕ ತನ್ವೀರ್ ಸೇಠ್ ಅವರಿಗೆ ಶುಭವಾಗಲಿ ಎಂದು ಪ್ರಾರ್ಥಿಸಿದ್ದೇವೆ ಎಂದರು.

ಸತತ ಆರು ಬಾರಿ ಗೆಲ್ಲುವ ಮೂಲಕ ತನ್ವೀರ್ ಸೇಠ್ ಅವರು ನಮ್ಮ ಕ್ಷೇತ್ರದ ಮೆಚ್ಚಿನ ನಾಯಕರಾಗಿದ್ದಾರೆ. ಯಾವುದೇ ಪಕ್ಷಭೇದ ಮಾಡದೆ ಅಭಿವೃದ್ಧಿ ಕಾರ್ಯಕ್ರಮ ಮಾಡುತ್ತಿದ್ದಾರೆ. ಎಲ್ಲ ಜಾತಿ, ವರ್ಗ, ಸಮುದಾಯದವರೊಂದಿಗೆ ನಮ್ಮ ಶಾಸಕರು ಅನ್ಯೋನ್ಯತೆಯಿಂದ ಇರುವುದರಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿ ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ ಎಂದರು. ಬಳಿಕ ಅವರು ತನ್ವೀರ್ ಸೇಠ್ ಅವರ ನಿವಾಸಕ್ಕೆ ತೆರಳಿ ಶುಭ ಕೋರಿದರು. ಈ ಸಂದರ್ಭದಲ್ಲಿ ರಸೂಲ್ ಬಳಗದ ನೂರಾರು ಅಭಿಮಾನಿಗಳು ಇದ್ದರು.

ನಮ್ಮ ಸರ್ಕಾರ ವೀರಶೈವ ಲಿಂಗಾಯಿತರ ಕಡೆಗಣಿಸಿಲ್ಲ

● ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಸ್ಪಷ್ಟನೆ
● ಶಾಮನೂರು ಶಿವಶಂಕರಪ್ಪ ಹೇಳಿಕೆ ವೈಯಕ್ತಿಕವಾದುದು
● ಸರ್ಕಾರ ಬೀಳುತ್ತೆ ಎಂಬುದು ಯೋಗೇಶ್ವರ್ ಹಗಲುಗನಸು!

ಮೈಸೂರು, ಅ.3(ಎಂಟಿವೈ)– ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ವೀರಶೈವ ಸಮುದಾಯವನ್ನು ಕಡೆಗಣಿಸಿಲ್ಲ. ಸಾಮಾಜಿಕ ನ್ಯಾಯದ ತಳಹದಿ ಮೇಲೆ ಎಲ್ಲಾ ಸಮುದಾಯಕ್ಕೂ ನ್ಯಾಯ ಒದಗಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.



ಮೈಸೂರಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವೀರಶೈವ ಲಿಂಗಾಯತ ಸಮುದಾಯವನ್ನು ಕಾಂಗ್ರೆಸ್ ಸರ್ಕಾರ ಕಡೆಗಣಿಸುತ್ತಿದೆ ಎಂಬ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಆರೋಪ ಸರಿಯಲ್ಲ. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿರುವ ಶಾಮನೂರು ಶಿವಶಂಕರಪ್ಪ ಅವರಿಂದ ಇಂತಹ ಹೇಳಿಕೆ ನಿರೀಕ್ಷಿಸಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಯಾವುದೇ ಸಮುದಾಯವನ್ನು ಕಡೆಗಣಿಸಿಲ್ಲ. ಶಾಮನೂರು ಶಿವಶಂಕರಪ್ಪ ಅವರ ಪುತ್ರ ಎಸ್.ಎಸ್.ಮಲ್ಲಿಕಾರ್ಜುನ್ ಸೇರಿದಂತೆ ಏಳು ಮಂದಿ ವೀರಶೈವ ಲಿಂಗಾಯತ ಸಚಿವರಿದ್ದಾರೆ. ಸಿದ್ದರಾಮಯ್ಯ ಕುರುಬ ಸಮಾಜದ ಓಲೈಕೆ ಮಾಡುತ್ತಿಲ್ಲ, ಎಲ್ಲ ಸಮುದಾಯಗಳನ್ನು ಒಟ್ಟಾಗಿ ಕೊಂಡೊಯ್ಯುತ್ತಿದ್ದಾರೆ ಎಂದು ಹೇಳಿದರು.

ಶಾಮನೂರು ಶಿವಶಂಕರಪ್ಪ ನೀಡಿರುವ ಹೇಳಿಕೆ ವೈಯಕ್ತಿಕವಾದದ್ದು. ಕಾಂಗ್ರೆಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದ್ದು, ಎಲ್ಲರಿಗೂ ಮಾತನಾಡುವ ಹಕ್ಕು ಇದೆ. ಆದರೆ, ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತನಾಡಿದರೆ ಉತ್ತಮ ಎಂದು ಹೈಕಮಾಂಡ್ ಸೂಚನೆ ನೀಡಿದೆ. ಭಾರತ ಜಾತ್ಯಾತೀತ ರಾಷ್ಟ್ರ. ಜಾತಿ ಆಧಾರದಲ್ಲಿ ಅಧಿಕಾರಿಗಳ ನೇಮಕ ಹಾಗೂ ಪೋಸ್ಟಿಂಗ್ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಹಗಲುಗನಸು: ಸರ್ಕಾರ ಬೀಳುತ್ತದೆ ಎಂದು ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಹಗಲುಗನಸು ಕಾಣುತ್ತಿದ್ದಾರೆ. ಸರ್ಕಾರಕ್ಕೆ ಸ್ಪಷ್ಟ ಬಹುಮತವಿದೆ. ಹಾಗಿದ್ದರೂ ಸರ್ಕಾರ ಬೀಳಲು ಹೇಗೆ ಸಾಧ್ಯ? ಬಿಜೆಪಿಯವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆ ಇಲ್ಲ ಎಂಬುದು ಅವರ ಹೇಳಿಕೆಯಿಂದ ಮನದಟ್ಟಾಗುತ್ತದೆ. ಪ್ರಸ್ತುತ ಯಾವುದೇ ರೀತಿಯ 'ಆಪರೇಷನ್ ಕಮಲ' ನಡೆಸಲು ಸಾಧ್ಯವಿಲ್ಲ, ಇದೀಗ ಅವರವರೇ ಆಪರೇಷನ್ ಮಾಡಿಕೊಳ್ಳಬೇಕಷ್ಟೇ ಎಂದು ವ್ಯಂಗ್ಯವಾಡಿದರು.

ರಾಜಕೀಯ ಪ್ರೇರಿತ ಪ್ರಕರಣ ಹಿಂದಕ್ಕೆ: ಹುಬ್ಬಳ್ಳಿ ಗಲಭೆ ಪ್ರಕರಣವನ್ನು ಹಿಂಪಡೆಯುವ ವಿಚಾರವಾಗಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ. ರಾಜಕೀಯ ಪ್ರೇರಿತವಾಗಿ ದಾಖಲಾಗಿರುವ ಹಾಗೂ ಕ್ರಿಮಿನಲ್ ಅಲ್ಲದ ಪ್ರಕರಣಗಳನ್ನು ಪರಿಶೀಲಿಸಿ ಕೈಬಿಡಲು ಸಮಿತಿ ಶಿಫಾರಸು ಮಾಡಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯದಲ್ಲೂ ಜಾತಿ ಜನಗಣತಿ ವರದಿಯನ್ನು ಬಿಡುಗಡೆ ಮಾಡಲಾಗುವುದು. ನಮ್ಮ ಸರ್ಕಾರವೇ ಕಳೆದ ಬಾರಿ ಜಾತಿ ಜನಗಣತಿ ನಡೆಸಿತ್ತು. ಸಮೀಕ್ಷೆಗೆ 150 ಕೋಟಿ ರೂ.ವೆಚ್ಚ ಮಾಡಲಾಗಿದೆ. ಬಿಹಾರದಲ್ಲಿ ಜಾತಿ ಗಣತಿ ವರದಿ ಬಿಡುಗಡೆ ಮಾಡಿರುವುದು ಸ್ವಾಗತ. ಇದೇ ರೀತಿ ದೇಶದ ಎಲ್ಲ ರಾಜ್ಯಗಳಲ್ಲೂ ಜಾತಿ ಜನಗಣತಿ ಬಿಡುಗಡೆಯಾಗಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು. ಶಿವಮೊಗ್ಗದಲ್ಲಿ ಮೆರವಣಿಗೆ ಹೋಗುವ ಸಂದರ್ಭ ಕೆಲವು ಕಿಡಿಗೇಡಿಗಳು ಕಲ್ಲು ತೂರಿದ್ದು, ಕೂಡಲೇ ಪೊಲೀಸರು ಮಧ್ಯಪ್ರವೇಶಿಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಈ ವಿಚಾರದಲ್ಲಿ ಬಿಜೆಪಿ ಅನಗತ್ಯ ಆರೋಪ ಮಾಡುತ್ತಿದೆ. ಅವರಿಗೆ ಆರೋಪ ಮಾಡುವುದು ಬಿಟ್ಟು ಬೇರೇನು ಗೊತ್ತಿಲ್ಲ, ಅವರಿಗೆ ಅಭಿವೃದ್ಧಿ ಗೊತ್ತಿಲ್ಲ ಎಂದು ಟೀಕಿಸಿದರು.

ಬಯಲು ರಂಗಮಂದಿರದಲ್ಲಿ ಅ.6ರಿಂದ 'ಯುವ ಸಂಭ್ರಮ'

ಮೈಸೂರು, ಅ.3(ಎಂಟಿವೈ)– ದಸರಾ ಮಹೋತ್ಸವದ ಮೊದಲ ಸಾಂಸ್ಕೃತಿಕ ಕಾರ್ಯಕ್ರಮ 'ಯುವ ಸಂಭ್ರಮ' ಅ.6ರಂದು ಸಂಜೆ 5 ಗಂಟೆಗೆ ಆರಂಭವಾಗಲಿದ್ದು, ವಿವಿಧ ಜಿಲ್ಲೆಗಳ ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈಭವ ಮೇಳೈಸಲಿದೆ. ಪ್ರತಿವರ್ಷದಂತೆ ಈ ಬಾರಿಯೂ ಯುವ



ಸಂಭ್ರಮ ಕಾರ್ಯಕ್ರಮ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಜರುಗಲಿದ್ದು, ಅ. 6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತಿಯಲ್ಲಿ ಯುವ ಸಂಭ್ರಮ ಕಾರ್ಯಕ್ರಮವನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಚಿತ್ರನಟರಾದ ವಸಿಷ್ಠ ಸಿಂಹ ಮತ್ತು ಹರಿಪ್ರಿಯಾ ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿದ್ದಾರೆ. ಸಚಿವರಾದ ಕೆ.ವೆಂಕಟೇಶ್, ಶಿವರಾಜ ಸಂಗಪ್ಪ ತಂಗಡಗಿ, ಮೇಯರ್ ಶಿವಕುಮಾರ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್ ಗೌಡ ವಹಿಸಲಿದ್ದಾರೆ. ಯುವ ಸಂಭ್ರಮದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ಹಾಸನ ಜಿಲ್ಲೆಗಳ ವಿದ್ಯಾರ್ಥಿಗಳು ರಾಷ್ಟ್ರಪ್ರೇಮ, ದೇಶಭಕ್ತಿ, ಪರಿಸರ ಪ್ರೇಮ, ಭಾವೈಕ್ಯತೆ, ಸಂವಿಧಾನದ ಆಶಯಗಳ ಕುರಿತಾದ ನೃತ್ಯರೂಪಕಗಳನ್ನು ಪ್ರದರ್ಶಿಸುವ ಮೂಲಕ ರಂಜಿಸಲಿದ್ದಾರೆ.

ಚುನಾವಣೆಗಳು ಬಂದಾಗಲೆಲ್ಲಾ ಬಿಜೆಪಿಗೆ ಹಿಂದುತ್ವ ನೆನಪಾಗುತ್ತೆ...

ಮೈಸೂರು, ಅ.3(ಎಂಟಿವೈ)– ಬಿಜೆಪಿ ನಾಯಕರಿಗೆ ಚುನಾವಣೆ ಸಮೀಪಿಸುತ್ತಿದ್ದಂತೆ ಹಿಂದುತ್ವ ನೆನಪಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸೋಲಿನ ಹತಾಶೆಯಿಂದ ಬಿಜೆಪಿ ನಾಯಕರು ಕಂಗೆಟ್ಟಿದ್ದಾರೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಹಿಂದುತ್ವದ ಅಸ್ತ್ರ ಮುನ್ನೆಲೆಗೆ ತರುತ್ತಾರೆ. ಚುನಾವಣೆ ವೇಳೆ ಮಾತ್ರ ಬಿಜೆಪಿಗರಿಗೆ ಹಿಂದುಗಳು ನೆನಪಾಗುತ್ತಾರೆ. ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಬ್ಬ ಹಿಂದುಗಳ ಹತ್ಯೆ ನಡೆದೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಕ್ಷುಲ್ಲಕ ವಿಚಾರವನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಸಾಮರಸ್ಯ ಕದಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಬಿಜೆಪಿ ರಾಜ್ಯಾಧ್ಯಕ್ಷರನ್ನು ಹಿಂದುಗಳೇ ಕಾರಿನಿಂದ ಕೆಳಗಿಳಿಸಿ ಓಡಿಸಿದ್ದರು. ಮುಂಬರುವ ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ಇದೀಗ ಅವರಿಗೆ ಪಾಕಿಸ್ತಾನ, ಮುಸ್ಲಿಂ, ಗಣೇಶ,



ಮಸೀದಿ, ಆಂಜನೇಯ ನೆನಪಾಗುತ್ತಿದ್ದು, ಇದೆಲ್ಲವೂ ಚುನಾವಣಾ ಗಿಮಿಕ್. ವಿಧಾನ ಸಭಾ ಚುನಾವಣೆಯಂತೆ ಲೋಕಸಭೆ ಚುನಾವಣೆಯಲ್ಲೂ ಜನರು ಬಿಜೆಪಿಗೆ ಪಾಠ ಕಲಿಸುತ್ತಾರೆ. ಶಿವಮೊಗ್ಗ ಗಲಾಟೆ ಬಗ್ಗೆ ಪೊಲೀಸ್ ಇಲಾಖೆ ತನಿಖೆ ನಡೆಸುತ್ತಿದ್ದು, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದರು.

ಸಂಕ್ರಾಂತಿ ನಂತರ ಸರ್ಕಾರ ಬೀಳುತ್ತದೆ ಎಂಬ ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈ ವಿಚಾರದಲ್ಲಿ ಬಿಜೆಪಿ ಹಗಲುಗನಸು ಕಾಣುತ್ತಿದೆ. ಸರ್ಕಾರ ಸುಭದ್ರವಾಗಿದ್ದು, ಜನರಿಗೆ ಒಳ್ಳೆಯ ಆಡಳಿತ ಕೊಡುತ್ತೇವೆ. ರಾಜ್ಯ ಸರ್ಕಾರ ವೀರಶೈವ ಲಿಂಗಾಯತ ಸಮುದಾಯವನ್ನು ಕಡೆಗಣಿಸಿಲ್ಲ. ಆಡಳಿತದಲ್ಲಿ ಜಾತೀವಾರು ಅಧಿಕಾರಿಗಳನ್ನು ಹಾಕಲು ಸಾಧ್ಯವಿಲ್ಲ ಎಂದು ಹೇಳಿದರು.

ಇಂದು ಗಾಂಧಿ ಜಯಂತಿ ಅಂಗವಾಗಿ ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಜಾಗೃತಿ

ಮೈಸೂರು: ಮೇಕ್ ಸೊಸೈಟಿ ಸ್ಮೈಲ್ ಫೌಂಡೇಶನ್ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜಯಂತಿ ಅಂಗವಾಗಿ ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಜಾಗೃತಿ ಹಾಗೂ ತಟ್ಟೆ ಲೋಟ ವಿತರಣಾ ಕಾರ್ಯಕ್ರಮವು ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗ ಶಾಲೆಯ ಆವರಣದಲ್ಲಿ ನಾಳೆ (ಅ.4) ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಚಾಲಕರಾದ ರೇಖಾ ಶ್ರೀನಿವಾಸ್ ತಿಳಿಸಿದರು. ಮುಖ್ಯ ಅತಿಥಿಗಳಾಗಿ ಮೇಕ್ ಸೊಸೈಟಿ ಸ್ಮೈಲ್ ಫೌಂಡೇಶನ್ ಅಧ್ಯಕ್ಷರು ಹಾಗೂ ಅವಲಕ್ಕಿ–ಪವಲಕ್ಕಿ ಚಿತ್ರದ ನಿರ್ಮಾಪಕರು ರಂಜಿತಾ ಸುಬ್ರಹ್ಮಣ್ಯ, ಸಮಾಜ ಸೇವಕರಾದ ಎಂ.ಎಸ್. ಸಂಧ್ಯಾರಾಣಿ, ಗ್ರೀನ್ ತಾರಾ ಬ್ಯಾಗ್ಸ್ ಕಂಪನಿ ಮಾಲೀಕರು ಪ್ರೀತಿ ಶೆಣೈ, ಪ್ರೊ. ರಾಂಪುರ ಶ್ರೀನಿವಾಸ್, ಎನ್.ಐ, ಕಾಲೇಜು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಕೆ.ರಘುರಾವ್ ವಾಜಪೇಯಿ, ಶಾಲೆಯ ಮುಖ್ಯ ಶಿಕ್ಷಕರಾದ ಸುಗುಣಾವತಿ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.



ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಳೆಮನೆ ಸಭಾಂಗಣದಲ್ಲಿ 29ನೇ ರಾಷ್ಟ್ರೀಯ ನಿರಂತರ ಕಳೆಮನೆ ಫೆಸ್ಟಿವಲ್ ಮತ್ತು ಕಳೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಾಸಕ ಕೆ. ಹರೀಶ್‌ಗೌಡ ಅವರನ್ನು ಸನ್ಮಾನಿಸಲಾಯಿತು. ವಿದ್ವಾನ್ ಜನಾರ್ಧನ್ ಜಿ.ಬಿ., ವಿದ್ವಾನ್ ಸಿ.ಆರ್. ಶಿವಪ್ರಕಾಶ್, ವಿದುಷಿ ನಂದಿನಿ, ಶಿವಪ್ರಕಾಶ್, ಶ್ರೀ ನಾಟ್ಯ ಭಾರತಿ ಟ್ರಸ್ಟ್‌ನ ಗುರು ವಿದುಷಿ ಡಾ. ಶ್ರೀರಂಜಿತಾ, ಗುರು ವಿದ್ವಾನ್ ಜಿ.ಎಸ್. ನಾಗೇಶ್ ಅವರಿಗೆ ಕಳೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಮಂಚೇಗೌಡನಕೊಪ್ಪಲು ರವಿ (ಡೆಲ್ಲಿ) ಇತರರು ಉಪಸ್ಥಿತರಿದ್ದರು. ಕರ್ನಾಟಕ ಕಲಾಶ್ರೀ ಪ್ರೊ. ಡಾ.ಕುಮಾರ್ ಶಿಷ್ಯರಿಂದ ಕಾರ್ಯಕ್ರಮ ನಡೆಯಿತು. ರಾಘವ್‌ವೆಂಕಟ್ ಧ್ವನಿ ಮತ್ತು ಬೆಳಕು ಒದಗಿಸಿಕೊಟ್ಟರು.

ದ್ವೇಷಿಸುವವರನ್ನು ಪ್ರೀತಿಸುವುದೇ ನಿಜವಾದ ಅಹಿಂಸೆ

ಮೈಸೂರು, ಅ. 3– ದ್ವೇಷಿಸುವವರನ್ನು ಪ್ರೀತಿಸುವುದೇ ನಿಜವಾದ ಅಹಿಂಸೆ ಎಂದು ಬಲವಾಗಿ ನಂಬಿ ಅದನ್ನು ಬದುಕಿನ ಮಾರ್ಗವಾಗಿಸಿಕೊಂಡ ಮಹಾನ್ ಚೇತನ ಮಹಾತ್ಮ ಗಾಂಧಿ ಎಂದು ಕೃಷ್ಣರಾಜನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಪ್ರೊ.ಲತಾ ಮೈಸೂರು ತಿಳಿಸಿದರು.



ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಸಾಂಸ್ಕೃತಿಕ ವೇದಿಕೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಗಾಂಧಿ ಕೇವಲ ಒಬ್ಬ ವ್ಯಕ್ತಿಯಲ್ಲ, ಬದುಕಿನ ಆದರ್ಶ ಮಾರ್ಗದ ಜ್ಯೋತಿ. ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಹಾಗೂ ಸಾಮರಸ್ಯದ ಮಹತ್ವ ಸಾರಿದ ಗಾಂಧಿ ಇಡೀ ಜಗತ್ತಿಗೆ ಮಾದರಿಯಾಗಿದ್ದಾರೆ. ಮಾನವೀಯ ಮೌಲ್ಯಗಳನ್ನೇ ಬದುಕಿನ ಸಿದ್ಧಾಂತವಾಗಿಸಿಕೊಂಡು ನುಡಿದಂತೆ ನಡೆದು–ನಡೆದಂತೆ ನುಡಿದ ಅಪರೂಪದ ವ್ಯಕ್ತಿತ್ವ ಗಾಂಧೀಜಿಯದು. ತಮ್ಮ ಜೀವನದ ಸತ್ಯಾನ್ವೇಷಣೆಗೆ ತೊಡಗಿದ ಗಾಂಧಿಯ ನಡೆ ಎಲ್ಲರಿಗೂ ಆದರ್ಶ ಎಂದರು. ಬರಾಕ್ ಒಬಾಮಾ, ಮಾರ್ಟಿನ್ ಲೂಥರ್ ಕಿಂಗ್, ಮಲಾಲ ಮೊದಲಾದ ಮಹನೀಯರು ಗಾಂಧಿ ಅವರಿಂದ ಪ್ರಭಾವಿತರಾಗಿದ್ದಾರೆ. ವಿದ್ಯಾರ್ಥಿಗಳು ಗಾಂಧಿ ಕುರಿತ ಪುಸ್ತಕಗಳನ್ನು ಹೆಚ್ಚಾಗಿ ಅಧ್ಯಯನ ಮಾಡುವ ಮೂಲಕ ತಮ್ಮ ಬದುಕಿನಲ್ಲಿ ಬದಲಾವಣೆ ತಂದುಕೊಳ್ಳಬೇಕು ಎಂದು ಕರೆ ನೀಡಿದರು.

ಲಾಲ್ ಬಹದ್ದೂರ್ ಶಾಸ್ತ್ರೀಯವರು ಪ್ರಧಾನಿಯಾಗಿ ದೇಶವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಿದರು. ಬದುಕಿನುದ್ದಕ್ಕೂ ಶಾಸ್ತ್ರಿಯವರು ಅನುಸರಿಸಿದ ಸತ್ಯ, ನಿಷ್ಠೆ ಮತ್ತು ಪ್ರಾಮಾಣಿಕತೆಗಳ ಬಗ್ಗೆ ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ಆರ್. ನಳಿನಿ, ಐಕ್ಯೂಎಸಿ ಸಂಚಾಲಕ ಡಾ.ವಿ.ಮಂಜುನಾಥ್, ಸಾಂಸ್ಕೃತಿಕ ವೇದಿಕೆ ಸಂಚಾಲಕ ಎನ್. ನಾಗೇಂದ್ರ, ಖಜಾಂಚಿ ಬಿ.ಸುಜಾತ, ರಾಷ್ಟ್ರೀಯ ಸೇವಾ ಯೋಜನೆ ಸಂಚಾಲಕಿ ಡಾ.ಡಿ.ಶ್ರುತಿ, ಕಾಲೇಜಿನ ವ್ಯವಸ್ಥಾಪಕ ಬಸವರಾಜು, ವಿದ್ಯಾರ್ಥಿ ಪ್ರತಿನಿಧಿಗಳಾದ ಕು.ಗಗನ ಹಾಗೂ ಕು.ಪ್ರವಳಿಕ ಹಾಜರಿದ್ದರು.

ತರಬೇತಿ

ಮೈಸೂರು, ಅ.3–ಮೈಸೂರಿನ ಇಲವಾಲ ಹತ್ತಿರದ ಯಲಚಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಅ.9 ರಂದು ಬೆಳಗ್ಗೆ 10.30 ಗಂಟೆಗೆ ಶುಂಠಿ ಕೃಷಿಯ ನೂತನ ಮತ್ತು ಸುಧಾರಿತ ತಂತ್ರಜ್ಞಾನಗಳು ಕುರಿತಾದ ತರಬೇತಿ ಕಾರ್ಯಕ್ರಮವನ್ನು ರೈತರಿಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ನುರಿತ ವಿಜ್ಞಾನಿಗಳು ಹಾಗೂ ಅನುಭವಿ ಕೃಷಿಕರು, ಗುಣಮಟ್ಟದ ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಎದುರಿಸುವ ಹಲವಾರು ಸಮಸ್ಯೆ ಮತ್ತು ಅದರ ಪರಿಹಾರ ಕುರಿತು ರೈತರಿಗೆ ಮಾಹಿತಿ ನೀಡಲಿದ್ದಾರೆ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಇತರೆ ಜಿಲ್ಲೆಗಳಿಗೆ ಸೇರಿದ ಆಸಕ್ತ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಲು ಪೂರ್ವ ನೋಂದಣಿ ಮಾಡಿಸಬಹುದಾಗಿದೆ. ನೋಂದಣಿಗಾಗಿ 8147959226, 9341997297 ಅನ್ನು ಸಂಪರ್ಕಿಸಬಹುದಾಗಿದೆ.

ಗಾಂಧೀಜಿಯವರ ಕನಸು ನನಸು ಮಾಡಲು ಧರ್ಮಸ್ಥಳದ ಡಾ.ವೀರೇಂದ್ರ ಹೆಗ್ಗಡೆ ಯತ್ನ

ಶ್ರೀರಾಂಪುರದಲ್ಲಿ ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟಗಳ ಪದಗ್ರಹಣ

ಮೈಸೂರು, ಅ.3– ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ರಾಮರಾಜ್ಯದ ಕನಸನ್ನು ನನಸು ಮಾಡಲು ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಕಳೆದ ನಾಲ್ಕು ದಶಕಗಳಿಂದಲೂ ಶ್ರಮಿಸುತ್ತಿದ್ದಾರೆ ಎಂದು ಮಾನವ ಸಂಪನ್ಮೂಲ ಕೇಂದ್ರದ ಪ್ರಾಂಶುಪಾಲ ವಿನಯ್ ಪೂಜಾರಿ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಕುವೆಂಪುನಗರ, ಶ್ರೀರಾಂಪುರ ವಲಯ, ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟಗಳ ಪದಗ್ರಹಣ ಸಮಾರಂಭದಲ್ಲಿ ಮಂಗಳವಾರ ಮಾತನಾಡಿದ ಅವರು, ಮಹಿಳೆಯರು 10, 20 ರೂ. ಉಳಿಸುವ ಮೂಲಕ ಆರಂಭವಾದ ಈ ಯೋಜನೆ ಪ್ರಸ್ತುತ ಅವರ ಆರ್ಥಿಕ ಶಿಸ್ತಿಗೆ ಕಾರಣವಾಗಿದೆ ಎಂದರು.



ಜೀವನ ನಿರ್ವಹಣೆಗೆ ಪ್ರತಿಯೊಬ್ಬರಿಗೂ ಹಣದ ಅವಶ್ಯಕತೆ ಇದೆ. ಆದರೆ ಬ್ಯಾಂಕುಗಳಲ್ಲಿ ಸುಲಭವಾಗಿ ಸಾಲ ಸಿಗುವುದಿಲ್ಲ. ಸ್ವಂತ ಅಣ್ಣ– ತಮ್ಮ, ಬಂಧುಗಳು ಕೂಡ ಬ್ಯಾಂಕಿಗೆ ಖಾತರಿ ನೀಡಲು ಹಿಂದೇಟು ಹಾಕುತ್ತಾರೆ. ಆದರೆ ಧರ್ಮಾಧಿಕಾರಿಗಳು ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಸಾಲ ಕೊಡಿಸಿ, ನೆರವಾಗುತ್ತಿದ್ದಾರೆ ಎಂದರು.

ನಾನು ಎಂಬುದನ್ನು ಬಿಟ್ಟು ನಾವು ಎಂದಾಗ ಸಮಾಜ ಉದ್ಧಾರವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಸಂಘವನ್ನು ಉಳಿಸಿ, ಬೆಳೆಸಬೇಕು. ನಾವ್ಯಾರು ಶಾಶ್ವತವಾಗಿ ಭೂಮಿಯ ಮೇಲೆ ಇರುವುದಿಲ್ಲ ಎಂಬುದನ್ನು ಮನಗಂಡು ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಹಿಳಾ ಸಬಲೀಕರಣ ಆಗುತ್ತಿದೆ. ಪ್ರಸ್ತುತ ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಉಳಿತಾಯ ಮಾಡಿ, ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಕುಟುಂಬದ ಅಭಿವೃದ್ಧಿಗೆ ಕಾರಣಕರ್ತರಾಗುತ್ತಿದ್ದಾರೆ. ಹೀಗಾಗಿ ರಾಜ್ಯ ಸರ್ಕಾರ ಗೃಹಲಕ್ಷ್ಮಿ ಮತ್ತಿತರ ಯೋಜನೆಗಳ ಮೂಲಕ ಮಹಿಳೆಯರನ್ನೇ ಮನೆಯ ಯಜಮಾನಿ ಎಂದು ಪರಿಗಣಿಸಿ, ನೆರವು ನೀಡುತ್ತಿದೆ ಎಂದರು. ಮತ್ತೋರ್ವ ಮುಖ್ಯ ಅತಿಥಿ ಎಸ್‌ಬಿಐ ಪ್ರಾದೇಶಿಕ ಕಚೇರಿಯ ಉಪ ವ್ಯವಸ್ಥಾಪಕ ಕೆ.ಎನ್.ಶ್ರೀನಿವಾಸ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹತ್ತು ಹಲವು ಕಾರ್ಯಕ್ರಮಗಳಿಗೆ,ನಮ್ಮ ಬ್ಯಾಂಕ್ ಮೂಲಕ ಆರ್ಥಿಕ ನೆರವು ನೀಡಲಾಗಿದೆ. ಉಳಿತಾಯ ಖಾತೆ ಇಲ್ಲದವರು ಆಧಾರ್ ಮತ್ತು ಪ್ಯಾನ್ ಕಾರ್ಡ್ ಜೆರಾಕ್ಸ್ ನೀಡಿ, ಜನ್ ಧನ್ ಖಾತೆ ಮಾಡಿಸಿಕೊಳ್ಳಬಹುದು. ಪಿಎಂ ಸುರಕ್ಷಾ ಯೋಜನೆ, ಜೀವನ ಜ್ಯೋತಿ ವಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆಯ ಲಾಭ ಪಡೆಯಬಹುದು ಎಂದರು.

ಟ್ರಸ್ಟ್‌ನ ಕುವೆಂಪುನಗರ ಕ್ಷೇತ್ರ ಯೋಜನಾಧಿಕಾರಿ ಎನ್. ಶಕುಂತಳಾ ಪ್ರಾಸ್ತಾವಿಕ ಭಾಷಣ ಮಾಡಿ, ಕಳೆದ ನಾಲ್ಕು ದಶಕಗಳಲ್ಲಿ ಟ್ರಸ್ಟ್ ಮೂಲಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗಿದೆ. ಮಹಿಳಾ ಸಬಲೀಕರಣ ಆಗಿದೆ. ಯೋಜನೆಯ ಲಾಭ ಪಡೆದು, ಮಹಿಳೆಯರು ಆರ್ಥಿಕಾಭಿವೃದ್ಧಿಯ ಜೊತೆಗೆ ಮಕ್ಕಳಿಗೂ ಉತ್ತಮ ಶಿಕ್ಷಣ ಕೊಡಿಸಿದ್ದಾರೆ ಎಂದರು. ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಮುಖಂಡ ಪ್ರಸಾದ್, ದಡದ ಹಳ್ಳಿ ಗ್ರಾಪಂ ಸದಸ್ಯ ಹಾಗೂ ಡಿಸಿಸಿ ಹಿರಿಯ ಕಾರ್ಯದರ್ಶಿ ಮಹಾದೇವ್ ಮಾತನಾಡಿದರು. ಲಿಂಗಾಂಬುದಿ ಪಾಳ್ಯ ಗ್ರಾಪಂ ಮಾಜಿ ಸದಸ್ಯೆ ಯಶೋದಮ್ಮ, ಕೆಲ್ಲಹಳ್ಳಿ ಗ್ರಾಪಂ ಸದಸ್ಯ ಭೈರೇಶ್ ಮುಖ್ಯ ಅತಿಥಿಗಳಾಗಿದ್ದರು.

ಶ್ರೀರಾಂಪುರ ವಲಯ ಮೇಲ್ವಿಚಾರಕಿ ಎಸ್. ಅಮಿತಾ ಉಸ್ತುವಾರಿ ವಹಿಸಿದ್ದರು. ಮಮತಾ ಸ್ವಾಗತಿಸಿದರು. ಅನಿತಾ ವರದಿ ಓದಿದರು. ರಂಜಿತಾ ನಿರೂಪಿಸಿದರು. ಸೇವಾಕರ್ತೆಯರಾದ ಪಲ್ಲವಿ, ಸುನೀತಾ, ಲತಾ, ಶ್ರುತಿ, ಭವ್ಯಾ, ದಿವ್ಯಾ, ಪೂಜಾ. ಅರ್ಪಿತಾ ಮೊದಲಾದವರು ಇದ್ದರು.

ಮೈಸೂರು ಮಿತ್ರ

ಪೌರಕಾರ್ಮಿಕರು ಸ್ಥಳೀಯ ಸಂಸ್ಥೆಗಳ ಆಧಾರಸ್ತಂಭ

ಪೌರಕಾರ್ಮಿಕರ ಹಬ್ಬದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಶ್ಲಾಘನೆ



ನಂಜನಗೂಡು, ಅ.3– ಸಮಾಜ ನಿರ್ಮಾಣದಲ್ಲಿ ಮತ್ತು ಸ್ವಚ್ಛತಾ ಕಾರ್ಯದಲ್ಲಿ ಪೌರಕಾರ್ಮಿಕರ ಸೇವೆ ಅವಿಸ್ಮರಣೀಯವಾದದ್ದು, ಪೌರಕಾರ್ಮಿಕರ ಶ್ರಮಕ್ಕೆ ಸರಿಯಾದ ಗೌರವ ಸಲ್ಲುವಂತಾಗಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ನಗರಸಭಾ ಕಾರ್ಯಾಲಯ ಮತ್ತು ಪೌರಾಡಳಿತ ಇಲಾಖೆ ವತಿಯಿಂದ ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ಪೌರಕಾರ್ಮಿಕರ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಪ್ರಗತಿಯ ದ್ಯೋತಕ ಸ್ವಚ್ಛತೆ, ಅಂತಹ ಸ್ವಚ್ಛತಾ ಕಾರ್ಯದಲ್ಲಿ ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರು ನಮ್ಮ ನಗರಸಭೆಯ ಮತ್ತು ಸ್ಥಳೀಯ ಸಂಸ್ಥೆಗಳ ಆಧಾರಸ್ತಂಭವಾಗಿದ್ದಾರೆ ಎಂದರು.

ಅಂತೆಯೇ ದೇಶದ ಸಮಗ್ರ ಅಭಿವೃದ್ಧಿಗೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡುತ್ತಿರುವ ಪೌರಕಾರ್ಮಿಕರ ಶ್ರಮಕ್ಕೆ ಸರಿಯಾದ ರೀತಿಯ ಗೌರವ ಸಲ್ಲುವಂತಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕೂಡ ಪೌರಕಾರ್ಮಿಕರ ಸಬಲೀಕರಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಜೊತೆಗೆ ವಾರ್ಷಿಕ 7 ಸಾವಿರ ಪ್ರೋತ್ಸಾಹ ಧನವನ್ನು ವಿತರಿಸುತ್ತಿರುವುದು ಸಂತೋಷ ತಂದಿದೆ ಎಂದರು.

ಸದಾಕಾಲ ಸ್ವಚ್ಛತಾ ಕಾರ್ಯದಲ್ಲಿ ಸೇವೆ ಸಲ್ಲಿಸುವ ಪೌರಕಾರ್ಮಿಕರಿಗೆ ಗೌರವ ಸಲ್ಲಿಸುವ ಸಲುವಾಗಿ ಮತ್ತು ಪೌರಾಡಳಿತ ಇಲಾಖೆ ಪೌರಕಾರ್ಮಿಕರ ಹಬ್ಬ ಎಂಬ ವಿನೂತನ ಕಾರ್ಯಕ್ರಮವನ್ನು ಏರ್ಪಡಿಸಿ ಪೌರಕಾರ್ಮಿಕರ ಪ್ರತಿಭೆಯ ಅನಾವರಣಕ್ಕೆ ವೇದಿಕೆ ಕಲ್ಪಿಸಿದೆ. ಪೌರಕಾರ್ಮಿಕರು ಕೂಡ ತಮ್ಮ ಕೆಲಸದ ಜಂಜಾಟದ ನಡುವೆಯೂ ಸಹ ಆಟೋಟ ಸ್ಪರ್ಧೆಗಳಲ್ಲಿ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂತೋಷ ಪಟ್ಟಿರುವುದು ಖುಷಿ ತಂದಿದೆ. ನಾನು ಸಹ ಕ್ಷೇತ್ರದ ಶಾಸಕನಾಗಿ ಪೌರಕಾರ್ಮಿಕರ ಕುಂದು ಕೊರತೆಗಳ ನಿವಾರಣೆಗೆ ಕ್ರಮವಹಿಸಿ ಅವರ ಏಳಿಗೆಗಾಗಿ ಶ್ರಮಿಸುತ್ತೇನೆ ಎಂದರು.

ನಗರಸಭಾ ಸದಸ್ಯ ದೇವು, ನಗರಸಭೆಯ ಪರಿಸರ ಅಧಿಕಾರಿ ಮೈತ್ರಾದೇವಿ ಮಾತನಾಡಿದರು. ಇದಕ್ಕೂ ಮುನ್ನ ನಗರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪೌರಕಾರ್ಮಿಕರನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಕರೆತರಲಾಯಿತು.

ಕಾರ್ಯಕ್ರಮದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ಸೇವೆ ಸಲ್ಲಿಸುತ್ತಿರುವ 12 ಜನ ಉತ್ತಮ ಪೌರಕಾರ್ಮಿಕರನ್ನು ಗುರುತಿಸಿ ಸನ್ಮಾನಿಸಿ, ಗೌರವಿಸಲಾಯಿತು. ಶಾಸಕ ದರ್ಶನ್ ಧ್ರುವನಾರಾಯಣ್ ವೈಯಕ್ತಿಕವಾಗಿ ಎಲ್ಲಾ ಪೌರಕಾರ್ಮಿಕರಿಗೆ ರಾಮರಾಜ್ ಪಂಚೆ ಮತ್ತು ಬಟ್ಟೆ, ಮಹಿಳೆಯರಿಗೆ 2 ಸಾವಿರ ನಗದು ಹಣ ನೀಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ವಿಜಯ ಲಕ್ಷ್ಮಿ ಕುಮಾರ್, ಗಾಯತ್ರಿ, ಪ್ರದೀಪ್, ಖಾಲಿದ್, ಶ್ವೇತಲಕ್ಷ್ಮಿಸತೀಶ್, ಸಿದ್ದರಾಜು, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ಅಧಿಕಾರಿಗಳಾದ ವೆಂಕಟೇಶ್, ರೇಖಾ, ನಂದಿನಿ, ಮುಖಂಡರಾದ ಸಿ.ಎಂ. ಶಂಕರ್, ಕಳಲೆ ರಾಜೇಶ್, ನಾಗರಾಜು, ಕನಕ ನಗರ ಮಹದೇವ್ರು, ಎಂ.ಎನ್. ಮಂಜುನಾಥ್, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಚಂದ್ರಮುಖಿ–2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫರ್ಕಿ 3 (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಕಂದ (ತೆ)	4 ಪ್ರದರ್ಶನಗಳು
ಸಂಗಂ	
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಲಿಡೋ	
ಟೋಬಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇರೈವನ್(ತ)	4 ಪ್ರದರ್ಶನಗಳು
ಪ್ರಭಾ	
ಸ್ಕಂದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಣಸೂರು ಆಸ್ಪತ್ರೆಯಲ್ಲಿ ಮಕ್ಕಳ ವೈದ್ಯರಿಲ್ಲದೆ ಪರದಾಟ



ಹುಣಸೂರು.ಅ.3– ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಳೆದ ಒಂದೂವರೆ ತಿಂಗಳಿಂದ ಮಕ್ಕಳ ವೈದ್ಯರು ಇಲ್ಲದೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ.

ಖಾಸಗಿ ಆಸ್ಪತ್ರೆಗಳಿಗೆ ಹೋದರೆ ದುಬಾರಿ ಖರ್ಚಾಗುವುದರಿಂದ ಮಕ್ಕಳ ಪೋಷಕರು ಚಿಂತೆಗೆ ಈಡಾಗಿದ್ದಾರೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಮಕ್ಕಳ ವೈದ್ಯರನ್ನು ಹುಣಸೂರು ಆಸ್ಪತ್ರೆಗೆ ನೇಮಿಸಲು ಸಾರ್ವಜನಿಕರು ಹಾಗೂ ಆಟೋ ಚಾಲಕ ಸಂಘದ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಮಕ್ಕಳ ವೈದ್ಯರು ವರ್ಗಾವಣೆಯಾಗಿದ್ದು, ಆ ಜಾಗಕ್ಕೆ ಕೂಡಲೇ ಮತ್ತೊಬ್ಬರನ್ನು ನೇಮಿಸಬೇಕಾಗಿತ್ತಾದರೂ ಈವರೆಗೂ ನೇಮಿಸದಿರುವುದು ಮಕ್ಕಳ ಪೋಷಕರಿಗೆ ತೊಂದರೆಯಾಗಿದೆ ಎಂದು ದೂರಿರುವ ಸಾರ್ವಜನಿಕರು ಕೂಡಲೇ ಮಕ್ಕಳ ವೈದ್ಯರನ್ನು ನೇಮಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಕೆಲಸಕ್ಕೆ ಕುತ್ತು ತಂದ ಅನಾರೋಗ್ಯ

● ಹೆಚ್.ಡಿ.ಕೋಟೆ ಇಂದಿರಾ ಕ್ಯಾಂಟೀನ್‌ನಲ್ಲಿ ಅಮಾನವೀಯ ಘಟನೆ
● ಅಡುಗೆ ಸಹಾಯಕಿಯನ್ನು ಹೊರಗೆ ಹಾಕಿ ಗೇಟಿಗೆ ಬೀಗ ಜಡಿದ ಸಿಬ್ಬಂದಿ



ಹೆಚ್.ಡಿ.ಕೋಟೆ, ಅ.3– ಅನಾರೋಗ್ಯದ ಕಾರಣದಿಂದ ಇಂದಿರಾ ಕ್ಯಾಂಟೀನ್‌ನ ಅಡುಗೆ ಸಹಾಯಕಿಯನ್ನು ಕೆಲಸದಿಂದ ತೆಗೆದು ಹೊರ ಹಾಕಿದ ಗೇಟಿನ ಮುಂದೆ ಕಾಯುವಂತೆ ಮಾಡಿದ ಅಮಾನವೀಯ ಘಟನೆಯೊಂದು ಇಂದು ಪಟ್ಟಣದಲ್ಲಿ ಸಂಭವಿಸಿದೆ.

ಪಟ್ಟಣದ ಬಾಪೂಜಿ ವೃತ್ತದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಅಡುಗೆ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದ ಕೆ.ಆರ್.ನಗರ ತಾಲೂಕಿನ ಹೆಬ್ಬಾಳು ಗ್ರಾಮದ ಮಂಜುಳ ಎಂಬುವರನ್ನು ಇಂದಿರಾ ಕ್ಯಾಂಟೀನ್‌ನಿಂದ ಹೊರಹಾಕಿದ್ದು, ಆಕೆ ದಿನವಿಡೀ ಗೇಟಿನ ಮುಂದೆ ಕೆಲಸಕ್ಕಾಗಿ ಕಾದು ಕುಳಿತಿದ್ದಿದ್ದು, ಕುಳು ಹಿಂಡುವಂತಿತ್ತು.

ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಿದ್ದಾರೆ ಎಂಬ ಕಾರಣ ನೀಡಿ ಆ ಮಹಿಳೆಯನ್ನು ಇಂದಿರಾ ಕ್ಯಾಂಟೀನ್ ಒಳಗಡೆ ಬಿಡದೆ ಗೇಟಿಗೆ ಬೀಗ ಹಾಕಿ ಯಾವುದೇ ಚಿಕಿತ್ಸೆ ಕೊಡಿಸುವ ಸೌಜನ್ಯವನ್ನು ತೋರದೆ ಇರುವ ಬಗ್ಗೆ ಇಂದಿರಾ ಕ್ಯಾಂಟೀನ್ ವ್ಯವಸ್ಥಾಪಕ ವಿರುದ್ಧ ಪಟ್ಟಣದಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದೆ.

ಮಂಗಳವಾರ ಬೆಳಗ್ಗೆ 6 ಗಂಟೆಗೆ ಕೆಲಸಕ್ಕೆ ಬಂದ ಮಹಿಳೆ ಗೇಟಿಗೆ ಬೀಗ ಹಾಕಿದ್ದ ಹಿನ್ನೆಲೆಯಲ್ಲಿ ಗೇಟಿನ ಬಳಿಯೇ ಕುಳಿತು, ತಿಂಡಿ, ಊಟ ಇಲ್ಲದೆ ನರಳಾಡಬೇಕಾಯಿತು. ಈಕೆ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ತಿಳಿದಿದ್ದರೂ ಇಂದಿರಾ ಕ್ಯಾಂಟೀನ್ ವ್ಯವಸ್ಥಾಪಕರು ಕಂಡು ಕಾಣದ ಹಾಗೆ ಈ ಮಹಿಳೆ ಚಿಕಿತ್ಸೆಗೆ ಮುಂದಾಗದೆ ಇರುವುದನ್ನು ಕಂಡ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ತಕ್ಷಣ ಸಾರ್ವಜನಿಕರು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಅವರಿಗೆ ದೂರವಾಣಿ ಕರೆ ಮಾಡಿದಾಗ, ಸ್ಥಳಕ್ಕೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳೊಡನೆ ಆಗಮಿಸಿದ ರವಿಕುಮಾರ್ ಅವರು, ಇಂದಿರಾ ಕ್ಯಾಂಟೀನ್ ಗೇಟ್ ಬೀಗ ತೆರೆಸಿ ಆ ಮಹಿಳೆಯನ್ನು ಕ್ಯಾಂಟೀನ್ ಒಳಗಡೆ ಕೂರಿಸಿ ವಿಚಾರಣೆ ನಡೆಸಿ ಬಳಿಕ ಆರೋಗ್ಯ ತಪಾಸಣೆ ನಡೆಸಿದರು.

ನಂತರ ಪುರಸಭಾ ಮುಖ್ಯಾಧಿಕಾರಿ ಸುರೇಶ್ ಅವರಿಗೆ ದೂರವಾಣಿ ಕರೆ ಮಾಡಿ ಕ್ಯಾಂಟೀನ್ ಬಳಿ ಬರುವಂತೆ ತಿಳಿಸಿದಾಗ ಸ್ಥಳಕ್ಕೆ ಆಗಮಿಸಿದ ಮುಖ್ಯಾಧಿಕಾರಿ ಸುರೇಶ್ ಅವರ ಜೊತೆ ಮಾತನಾಡಿ, ಈ ಮಹಿಳೆಗೆ ಆರೋಗ್ಯದಲ್ಲಿ ವ್ಯತ್ಯಾಸ ಕಂಡಿದೆ. ಆದ್ದರಿಂದ ಅವರ ಸಂಬಂಧಿಕರಿಗೆ ತಿಳಿಸಿ ಎಂದರು.

ನಂತರ ಮುಖ್ಯಾಧಿಕಾರಿ ಸುರೇಶ್ ಅವರು ಇಂದಿರಾ ಕ್ಯಾಂಟೀನ್ ವ್ಯವಸ್ಥಾಪಕರೊಂದಿಗೆ ಮಾತನಾಡಿ, ಈ ಮಹಿಳೆಯನ್ನು ಅವರ ಗ್ರಾಮಕ್ಕೆ ಕಳುಹಿಸಿ ಸಂಬಂಧಿಕರಿಗೆ ವಿಚಾರ ತಿಳಿಸಿ ಸೂಕ್ತ ಚಿಕಿತ್ಸೆ ಕೊಡಿಸಿ ಅವರ ಕುಟುಂಬಕ್ಕೆ ನೆರವು ನೀಡಬೇಕು ಎಂದು ತಿಳಿಸಿದರು.

ರಾಜ್ಯ ಸರ್ಕಾರ ಇಂದಿರಾ ಕ್ಯಾಂಟೀನ್ ತೆರೆದಿದೆ. ಆದರೆ ಅಲ್ಲಿ ಅಡುಗೆ ಮಾಡುವ ಮಹಿಳೆಯೊಬ್ಬರು ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಿದ್ದಾರೆ ಎಂಬ ಮಾಹಿತಿ ವ್ಯವಸ್ಥಾಪಕರಿಗೆ ತಿಳಿದಿದ್ದರೂ, ಬೆಳಗ್ಗಿನಿಂದ ಬೀಗ ತೆಗೆಯದೆ ರಸ್ತೆ ಬದಿ ಬಿಟ್ಟಿರುವುದು ನಿಜಕ್ಕೂ ದುರಂತ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದರು.

ಇಂದಿರಾ ಕ್ಯಾಂಟೀನ್ ವ್ಯವಸ್ಥಾಪಕರಾದ ಪ್ರಕಾಶ್ ಮತ್ತು ವೆಂಕಟೇಶ್ ಅವರುಗಳು ಇಂದಿರಾ ಕ್ಯಾಂಟೀನ್ ಬಳಿ ಸಾರ್ವಜನಿಕರು ಮಹಿಳೆ ವಿಚಾರ ಕುರಿತು ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಮಾನಸಿಕ ಅಸ್ವಸ್ಥ ಮಹಿಳೆಯನ್ನು ಮಂಗಳವಾರ ಸಂಜೆ ಸರಿಸುಮಾರು 6 ಗಂಟೆ ಸಮಯದಲ್ಲಿ ಕರೆದುಕೊಂಡು ಹೋಗಿ ಅವರ ಕುಟುಂಬದವರೊಡನೆ ಚರ್ಚಿಸಿ ಸೂಕ್ತ ಚಿಕಿತ್ಸೆ ಕೊಡಿಸುವ ಕೆಲಸದಲ್ಲಿ ಮುಂದಾದರು.

ಸಿಡಿಲು ಮಲ್ಲಿಕಾರ್ಜುನಸ್ವಾಮಿ ರಥಗಳು ಪುನರ್ ನಿರ್ಮಾಣ

ದಾನಿಗಳಿಗೆ ಸಂಪೂರ್ಣ ಸಹಕಾರ: ತಹಸೀಲ್ದಾರ್



ಬೆಟ್ಟದಪುರ, ಅ.3– ಶಿಥಿಲಗೊಂಡಿರುವ ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ರಥಗಳನ್ನು ಹೊಸದಾಗಿ ನಿರ್ಮಾಣ ಮಾಡಲು ದಾನಿಗಳು ಮುಂದೆ ಬಂದಿದ್ದು, ಸರ್ಕಾರದಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ತಹಸೀಲ್ದಾರ್ ಕುಂಞ ಅಹಮದ್ ಭರವಸೆ ನೀಡಿದ್ದಾರೆ.

ತಾಲೂಕಿನ ಬೆಮ್ಮತ್ತಿ ಗ್ರಾಮದ ಕ್ರಷರ್ ಮಾಲೀಕರಾದ ಸುರೇಶ್, ಬಸವರಾಜ್, ಮಹೇಶ್ ಅವರುಗಳು ಗ್ರಾಮಸ್ಥರು ಹಾಗೂ ಮಲ್ಲಿಕಾರ್ಜುನ ಸ್ವಾಮಿ ಮನೆ ದೇವರ ಕುಟುಂಬಸ್ಥರೊಂದಿಗೆ ಸೇರಿ ಸುಮಾರು 50 ಲಕ್ಷ ವೆಚ್ಚದಲ್ಲಿ ದೇವಸ್ಥಾನದ ಬಸವೇಶ್ವರ ಹಾಗೂ ಗಣಪತಿ ರಥಗಳನ್ನು ದುರಸ್ತಿಗೊಳಿಸಲು ಮುಂದಾಗಿದ್ದು, ಬೆಟ್ಟದಪುರದಲ್ಲಿ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಅವರು ಈ ಭರವಸೆ ನೀಡಿದರು.

ದಾನಿಗಳು ರಥವನ್ನು ನಿರ್ಮಿಸಲು ಮುಂದೆ ಬಂದಿರುವುದರಿಂದ ಸರ್ಕಾರದಿಂದ ಬೇಕಾದ ಧನಸಹಾಯ ಹಾಗೂ ಸಹಕಾರವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಬೆಟ್ಟದಪುರದ ಚನ್ನಬಸವ ದೇಶೀಕೇಂದ್ರ ಸ್ವಾಮೀಜಿ ಅವರು ಮಾತನಾಡಿ, ನಮ್ಮ ಊರಿನ ರಥ ನಿರ್ಮಾಣಕ್ಕೆ ಧನ ಸಹಾಯ ಮತ್ತು ಮರಗಳನ್ನು ನೀಡಲು ಮುಂದೆ ಬಂದಿರುವ ಸುರೇಶ್ ಅವರ ಕಾರ್ಯ ಮೆಚ್ಚುವಂತದ್ದು, ಅವರ ಈ ಕಾರ್ಯಕ್ಕೆ ಗ್ರಾಮಸ್ಥರು ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡಿ ಮೂಲಸೌಕರ್ಯಗಳನ್ನು ಒದಗಿಸಿಕೊಡುವುದು ಗ್ರಾಮಸ್ಥರ ಕರ್ತವ್ಯ. ಆದುದರಿಂದ ಈ ಕಾರ್ಯ ಯಶಸ್ವಿಯಾಗಲಿ ಎಂದು ತಿಳಿಸಿದರು.

ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಮಾತನಾಡಿ, ಬೆಟ್ಟದಪುರದ ರಥಕ್ಕೆ ಬೇಕಾದ ಎಲ್ಲಾ ಸಹಕಾರಗಳನ್ನು ನಮ್ಮ ತಂದೆ ಸಚಿವ ವೆಂಕಟೇಶ್ ಅವರ ಜೊತೆ ಮಾತನಾಡಿ ಕೊಡಿಸುವುದಾಗಿ ತಿಳಿಸಿದರು.

ದಾನಿಗಳಾದ ಸುರೇಶ್ ಮಾತನಾಡಿ, ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ನಮ್ಮ ಮನೆದೇವರಾಗಿದ್ದು, ನಮ್ಮ ಹಾಗೂ ಎಲ್ಲರ ಸಹಕಾರದೊಂದಿಗೆ ಎರಡು ರಥಗಳನ್ನು ನಿರ್ಮಿಸಲು ಮರ ಹಾಗೂ ಧನ ಸಹಾಯ ನೀಡುವುದಾಗಿ ಭರವಸೆ ನೀಡಿದರು.

ತಾಪಂ ಸದಸ್ಯರಾದ ಕುಂಜಪ್ಪ ಕಾರ್ನಾಡ್, ರೈತ ಮುಖಂಡ ಬಿಜೆ ದೇವರಾಜ್, ಅನಿತಾ ತೋಟಪ್ಪ ಶೆಟ್ಟಿ, ಗ್ರಾಮದ ಮುಖಂಡರಾದ ನಾಗರಾಜ ಶೆಟ್ಟಿ, ಬಿ.ಸಿ.ಮಹಾದೇವ್, ಬಿ.ಸಿ. ರಾಜೇಂದ್ರ, ಬಿ.ಎಸ್.ಮಹದೇವಪ್ಪ, ಯಜಮಾನ್ ಮಲ್ಲಯ್ಯ ನಾರಾಯಣ್, ಮಲ್ಲೇಶ್, ಉಪ್ಪಾರ ಸಮಾಜದ ಸೆರೆದಾರ್, ಪ್ರಧಾನ ಅರ್ಚಕ ಸತೀಶ್ ಕಶ್ಯಪ, ಲೋಕೇಶ್, ಚನ್ನೇಗೌಡನಕೊಪ್ಪಲು ದೀಪು, ಸೋಮಶೇಖರ್ ಸೇರಿದಂತೆ ಎಲ್ಲಾ ಸಮಾಜದ ಮುಖಂಡರು ಹಾಜರಿದ್ದರು.

ರೈತರ ಜಮೀನಿಗೆ ಭೇಟಿ ನೀಡಿದ ಶಾಸಕ ದರ್ಶನ್ ಧ್ರುವನಾರಾಯಣ್

ಕಾಡಾನೆಗಳಿಂದ ರೈತರು ಫಸಲು ರಕ್ಷಿಸಲು ಪಡುವ ಕಷ್ಟ ಕಣ್ಣಾರೆ ಕಂಡ ಶಾಸಕರು



ಮಲ್ಲುಂಡಿ, ಅ.3– ಸಮೀಪದ ಸಿದ್ದೇಗೌಡನಹುಂಡಿ, ಮಲ್ಲಹಳ್ಳಿ, ದೇಪೆಗೌಡನಪುರ ಗ್ರಾಮದ ರೈತರ ಜಮೀನಿಗೆ ಶನಿವಾರ ರಾತ್ರಿ ಶಾಸಕ ದರ್ಶನ್ ಧ್ರುವನಾರಾಯಣ್ ಭೇಟಿ ನೀಡಿ, ರೈತರ ಜಮೀನಿಗೆ ಕಾಡಾನೆಗಳು ಲಗ್ಗೆ ಇಡುವ ಬಗ್ಗೆ ಮಾಹಿತಿ ಪಡೆದುಕೊಂಡರು.

ಚುನಾವಣೆ ಸಂದರ್ಭದಲ್ಲಿ ಕಾಡಂಚಿನ ಗ್ರಾಮಗಳಿಗೆ ಭೇಟಿ ನೀಡಿದ್ದ ವೇಳೆ ಕಾಡಾನೆಗಳ ಹಾವಳಿ ಹೆಚ್ಚಾಗಿ ರೈತರ ಫಸಲುಗಳನ್ನು ನಾಶ ಮಾಡುತ್ತಿವೆ ಎಂದು ರೈತರು ಹೇಳಿಕೊಂಡಿದ್ದರು. ಶಾಸಕರಾದ ನಂತರ ಅವರು ರೈತರ ಜಮೀನಿಗೆ ಭೇಟಿ ನೀಡಿ, ರೈತರು ಕಾಡಾನೆಗಳಿಂದ ತಮ್ಮ ಫಸಲುಗಳನ್ನು ರಕ್ಷಣೆ ಮಾಡುವುದನ್ನು ಕಂಡು ಸ್ಥಳಕ್ಕೆ ಅರಣ್ಯ ಅಧಿಕಾರಿಗಳನ್ನು ಕರೆಯಿಸಿ ರೈತರ ಫಸಲುಗಳನ್ನು ಕಾಡಾನೆಗಳು ನಾಶ ಮಾಡದಂತೆ ಕಾಪಾಡುವ ಜವಾಬ್ದಾರಿ ನಿಮ್ಮದಾಗಿದೆ ಎಂದರು.

ನಾನು ಈಗಾಗಲೇ ಅರಣ್ಯ ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. 19 ಕಿ ಮೀ ರೈಲ್ವೆ ಕಂಬಿಗಳು ನಿರ್ಮಾಣ ಮಾಡಿದರೆ ಆನೆಗಳ ಹಾವಳಿ ತಪ್ಪಲಿದೆ ಅರಣ್ಯ ಇಲಾಖೆಗೆ ಹೆಚ್ಚಿನ ಸಿಬ್ಬಂದಿಗಳನ್ನು ಅಯೋಜಿಸಲು ಮನವಿ ಮಾಡಿದ್ದೇನೆ ಎಂದು ತಿಳಿಸಿದರು.

ಕಾಡಂಚಿನ ಗ್ರಾಮಗಳಲ್ಲಿ ರೈತರು ಕಷ್ಟಪಟ್ಟು ಬೆಳೆದ ಫಸಲು ನಾಶವಾದರೆ ರೈತ ಬದುಕುವುದು ಕಷ್ಟವಾಗುತ್ತದೆ. ನಾನು ಚುನಾವಣೆ ಸಂದರ್ಭದಲ್ಲಿ ಭೇಟಿ ನೀಡಿದ್ದಾಗ ನೀಡಿದ ಭರವಸೆಯಂತೆ ರೈತರ ಸಮಸ್ಯೆಗಳನ್ನು ಆಲಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿ ಮಧ್ಯರಾತ್ರಿ ತಮ್ಮ ನಿವಾಸಕ್ಕೆ ತೆರಳಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ ಜಿ ಮಹೇಶ್, ಅರಣ್ಯ ಅಧಿಕಾರಿಗಳು ಹಾಗೂ ರೈತರು ಸಾಥ್ ನೀಡಿದರು.

ಎನ್‌ಎಸ್‌ಎಸ್ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ



ಹೆಚ್.ಡಿ. ಕೋಟೆ ಅ.3– ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ಮೂರು ಮಂದಿಯ ಜೀವವನ್ನು ಉಳಿಸಿಕೊಳ್ಳಬಹುದು ಎಂದು ಲಯನ್ಸ್ ಕ್ಲಬ್‌ನ ಅಧ್ಯಕ್ಷ ಈರೇಗೌಡ ತಿಳಿಸಿದ್ದಾರೆ.

ಎನ್‌ಎಸ್‌ಎಸ್ ದಿನಾಚರಣೆಯ ಅಂಗವಾಗಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಪದವಿ ಪೂರ್ವ ಕಾಲೇಜು, ಲಯನ್ಸ್ ಸಂಸ್ಥೆ ಮತ್ತು ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದಲ್ಲಿ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರವನ್ನು ಉದ್ದೇಶಿಸಿ ಮಾತನಾಡಿದ ಅವರು, ರಕ್ತದಾನದ ಮೂಲಕವೂ ಸಹ ಎನ್.ಎಸ್.ಎಸ್ ಶಿಬಿರಾರ್ಥಿಗಳು ಗುರುತಿಸಿಕೊಂಡಿದ್ದಾರೆ. ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ಮೂರು ಮಂದಿಯ ಜೀವವನ್ನು ಉಳಿಸಿಕೊಳ್ಳಬಹುದು ಎಂದರು.


ನಮ್ಮ ಸಂಸ್ಥೆಯು ಹಲವು ಸಮಾಜ ಸೇವೆಗಳನ್ನು ಮಾಡುತ್ತಾ ಬಂದಿದೆ. ಅದೇ ರೀತಿ ಇಂದು ರಕ್ತದಾನ ಸೇರಿದಂತೆ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತಿದೆ. ಇದರ ಸದುಪಯೋಗವನ್ನು ತಾಲೂಕಿನ ಜನತೆ ಪಡೆದುಕೊಳ್ಳುವಂತೆ ಕೋರಿದರು.

ಇದೇ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ವತಿಯಿಂದ ಅಂಬೇಡ್ಕರ್ ಭವನದ ಆವರಣದಲ್ಲಿ ವಾಕ್ ಮತ್ತು ಶ್ರವಣ ಸಂಬಂಧ ಆರೋಗ್ಯ ತಪಾಸಣೆಯನ್ನು ನಡೆಸಲಾಯಿತು, ಈ ತಪಾಸಣೆಯಲ್ಲಿ ಸುಮಾರು 98 ಜನ ಭಾಗಿಯಾಗಿದ್ದು 60 ಮಂದಿಗೆ ಉಪಕರಣಗಳನ್ನು ಉಚಿತವಾಗಿ ನೀಡಲಾಯಿತು. ಸುಮಾರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಕಾರ್ಯಕ್ರಮದಲ್ಲಿ ಕ್ಲಬ್ಬಿನ ಕಾರ್ಯದರ್ಶಿ ನಾರಾಯಣಗೌಡ, ಬಸವರಾಜು, ಸುರೇಂದ್ರ ಡಿ ಗೌಡ, ಯೋಗನರಸಿಂಹೇಗೌಡ, ನಾಗಣ್ಣ ವೈಟಿ. ಮಹೇಶ್, ವೀರಪ್ಪ ನಟರಾಜು, ರಾಜೇಶ, ಗಿರೀಶ್ ಮೂರ್ತಿ, ಮಹದೇವ್ರು, ಮೈಸೂರು ವಿಶ್ವವಿದ್ಯಾಲಯ ಪರೀಕ್ಷಾಂಗ ವಿಭಾಗದ ಉಪ ಕುಲಸಚಿವ ಮಂಜುನಾಥ್, ಮೈಸೂರು ಮಹಾರಾಜ ಕಾಲೇಜಿನ ವಿಶ್ರಾಂತ ಪ್ರೊ. ಚಂದ್ರೇಗೌಡ, ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಸೋಮಣ್ಣ ಪರಿಮಳಾ, ಮುಖ್ಯೋಪಾಧ್ಯಾಯಿನಿ ನಂದಿನಿ, ಭೈರೇಗೌಡ, ಪ್ರಾಂಶುಪಾಲರಾದ ಭೈರೇಗೌಡ ರಾಮಚಂದ್ರ ಸಿದ್ದೇಗೌಡ, ಕ್ಲೇಶ್ ಗೌಡ, ರಾಜೇಶ್, ಜಿ.ಎನ್. ವೆಂಕಟೇಶ್, ರವಿಕುಮಾರ್ ಹಾಜರಿದ್ದರು.

ಆರೋಗ್ಯ ಭಾಗ್ಯ ಯೋಜನೆಗೆ ಆಗ್ರಹಿಸಿ ದಸಂಸ ಪ್ರತಿಭಟನೆ

ಖಾಸಗಿ ಕ್ಲಿನಿಕ್ ನಡೆಸುತ್ತ ಸುಲಿಗೆ ಮಾಡುತ್ತಿರುವ ಸರ್ಕಾರಿ ವೈದ್ಯರ ವಿರುದ್ಧ ಕ್ರಮಕ್ಕೆ ಆಗ್ರಹ



ತಿ.ನರಸೀಪುರ, ಅ.3– ಖಾಸಗಿ ಕ್ಲಿನಿಕ್ ತೆರೆದು ಬಡವರಿಂದ ಹಣ ಸುಲಿಗೆ ಮಾಡುತ್ತಿರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದರೊಂದಿಗೆ 6 ನೇ ಗ್ಯಾರಂಟಿಯಾಗಿ ಆರೋಗ್ಯ ಭಾಗ್ಯ ಯೋಜನೆ ಜಾರಿಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯ ಟಿ.ನರಸೀಪುರ ತಾಲೂಕು ಸಮಿತಿಯ ಸದಸ್ಯರು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗ ಪ್ರತಿಭಟನಾ ಧರಣಿ ನಡೆಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗದಲ್ಲಿ ಜಮಾವಣೆಗೊಂಡ ಸಮಿತಿಯ ಸದಸ್ಯರು ಸರ್ಕಾರಿ ವೈದ್ಯರಾಗಿರುವ ಕೆಲ ವೈದ್ಯರು ಕಾನೂನುಬಾಹಿರವಾಗಿ ಕ್ಲಿನಿಕ್ ತೆರೆದು ಸಾರ್ವಜನಿಕರನ್ನು ಸುಲಿಗೆ ಮಾಡುತ್ತಿದ್ದಾರೆಂದು ಆರೋಪಿಸಿ ಅವರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ಮಾತನಾಡಿ, ಸ್ಥಳೀಯ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿರುವ 100 ಹಾಸಿಗೆ ಆಸ್ಪತ್ರೆಯನ್ನು 200 ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಬೇಕೆಂದು ಒತ್ತಾಯಿಸಿದರು. ಸಾರ್ವಜನಿಕ ಆಸ್ಪತ್ರೆಯ ಕೆಲವೊಂದು ಪರೀಕ್ಷೆ ಮತ್ತು ನುರಿತ ವೈದ್ಯರು ಹಾಗೂ ಇತರೆ ಸೌಲಭ್ಯ ಇಲ್ಲದ ಕಾರಣ ಮೈಸೂರಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಆರ್ಥಿಕ ತೊಂದರೆಯಲ್ಲಿರುವ ಕಡು ಬಡವರು ತುಂಬಾ ತೊಂದರೆ ಅನುಭವಿಸುತ್ತಿರುವುದರಿಂದ ಸದರಿ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ ತಾಯಿ–ಮಗು ಆಸ್ಪತ್ರೆಗೆ ಕ್ರಮ ಕೈಗೊಳ್ಳಬೇಕಿದೆ ಎಂದರು.

ಕಿಡ್ನಿ ತೊಂದರೆಯಿರುವ ರೋಗಿಗಳು ಹೆಚ್ಚಿನ ಸೌಲಭ್ಯ ಇಲ್ಲದ್ದರಿಂದ ಡಯಾಲಿಸಿಸ್ ಮಾಡಿಸಲು ಜಿಲ್ಲಾ ಮತ್ತು ಖಾಸಗಿ ಆಸ್ಪತ್ರೆಗೆ ತೆರಳಿ 15 ರಿಂದ 20 ಸಾವಿರ ರೂ.ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ.ಉಳ್ಳವರು ಚಿಕಿತ್ಸೆ ಪಡೆದರೆ ಹಣವಿಲ್ಲದ ಬಡವರು ಹೆಣವಾಗುತ್ತಿದ್ದಾರೆ.ಹಾಗಾಗಿ ತಾಲೂಕು ಆಸ್ಪತ್ರೆಯಲ್ಲಿ ಪ್ರತಿಯೊಬ್ಬ ರೋಗಿಗೂ ಚಿಕಿತ್ಸೆ ದೊರಕುವಂತೆ ಮಾಡಬೇಕೆಂದು ಅವರು ಒತ್ತಾಯಿಸಿದರು.

ಸಮಿತಿಯ ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು ಮಾತನಾಡಿ, ಸರ್ಕಾರಿ ಆಸ್ಪತ್ರೆಯಲ್ಲಿ ಶವಾಗಾರ ಇದ್ದು ಇಲ್ಲದಂತಾಗಿದೆ. ಮೂರ್ನಾಲ್ಕು ಸಾವುಗಳು ಒಮ್ಮೆಲೆ ಬಂದರೆ ಮೃತದೇಹವನ್ನು ಆಸ್ಪತ್ರೆಯ ಬಯಲು ಆವರಣದಲ್ಲೇ ಇಡುವಂತಹ ಅಮಾನವೀಯ ಸ್ಥಿತಿ ಇದೆ ಹಾಗೂ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸಾಗಿಸುವಂತಹ ವ್ಯವಸ್ಥೆ ನಡೆದಿದೆ ಎಂದು ಆರೋಪಿಸಿದರು. ಸಿಟಿ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಸೇರಿದಂತೆ ಎಲ್ಲ ಬಗೆಯ ಪರೀಕ್ಷೆ ಲ್ಯಾಬ್ ಪರಿಕರಣೆಗಳನ್ನು ಮಂಜೂರು ಮಾಡಬೇಕು, ಸಿಎಂಓ ವೈದ್ಯರನ್ನು ನೇಮಕ ಮಾಡಬೇಕು,24/7 ಅರವಳಿಕೆ ವೈದ್ಯರು ಹಾಗೂ ಎಕ್ಸರೇ ವಿಭಾಗ ಕರ್ತವ್ಯ ನಿರ್ವಹಿಸಬೇಕು ಎಂದು ರಾಜು ಒತ್ತಾಯಿಸಿದರು.

ಸಮಿತಿಯ ಜಿಲ್ಲಾ ವಿಭಾಗೀಯ ಸಂಚಾಲಕ ಕನ್ನಾಯಕನಹಳ್ಳಿ ಮರಿಸ್ವಾಮಿ, ಮನೋಜ್ ಕುಮಾರ್, ಸೋಮನಾಥಪುರ ಗೋವಿಂದ ರಾಜು, ಎಲ್.ರಾಜಶೇಖರ್, ಚೌಹಳ್ಳಿ ಪರಶುರಾಮು, ಎಡದೊರೆ ಚಂದ್ರಪ್ಪ, ಕೊಳತ್ತೂರು ಪ್ರಭಾಕರ್, ಮಾರನಪುರ ಕೇಶವಮೂರ್ತಿ, ಮಹದೇವಸ್ವಾಮಿ, ಕೇಶವಮೂರ್ತಿ, ಜಯಣ್ಣ, ಕೂಡ್ಲೂರು ಶಿವನಂಜು, ರವಿಕಾಂತ್,ಉಮೇಶ್, ಮಂಚಯ್ಯ, ಮಹದೇವಸ್ವಾಮಿ, ಬೆನಕನಹಳ್ಳಿ ಸ್ವಾಮಿ ಭಾಗವಹಿಸಿದ್ದರು.

ಮುಡಾ ನಿವೇಶನ ಕೊಡಿಸುವುದಾಗಿ ವಂಚನೆ ಪ್ರಕರಣ

ನಿವೃತ್ತ ಡಿವೈಎಸ್ಪಿ ವಿಜಯ್‌ಕುಮಾರ್ ಬಂಧನ

ಮೈಸೂರು, ಅ.3– ಮುಡಾ ನಿವೇಶನ ಕೊಡಿಸುವುದಾಗಿ ಬೀದಿಬದಿ ವ್ಯಾಪಾರಿಗೆ ವಂಚಿಸಿದ ಪ್ರಕರಣದ ಎರಡನೇ ಆರೋಪಿಯಾಗಿರುವ ನಿವೃತ್ತ ಡಿವೈಎಸ್ಪಿ ವಿಜಯ್‌ಕುಮಾರ್ ಅವರನ್ನು ಲಕ್ಷ್ಮೀಪುರಂ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಈ ಪ್ರಕರಣದ ಪ್ರಮುಖ ಆರೋಪಿ, ಮಾಜಿ ಕಾರ್ಪೊರೇಟರ್ ಆರ್.ಸೋಮಸುಂದರ್ ಅವರನ್ನು ಸೆ.28ರಂದು ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು ವಂಚನೆಗೆ ಸಹಕರಿಸಿದ ಆರೋಪವಿರುವ ನಿವೃತ್ತ ಡಿವೈಎಸ್ಪಿ ವಿಜಯ್‌ಕುಮಾರ್ ತಲೆ ಮರೆಸಿಕೊಂಡಿದ್ದರು. ಮುಡಾ ನಿವೇಶನ ಕೊಡಿಸುವುದಾಗಿ ಭರವಸೆ ನೀಡಿ, ನಕಲಿ ದಾಖಲೆ ಸೃಷ್ಟಿಸಿ, ನನ್ನಿಂದ 12 ಲಕ್ಷ ರೂ. ಹಣ ಪಡೆದು ವಂಚಿಸಿರುವುದಾಗಿ ಮೈಸೂರಿನ ಬೋಗಾದಿ ಬ್ಯಾಂಕ್ ಕಾಲೋನಿ ನಿವಾಸಿ ಪುಟ್ಟರಾಜೇಗೌಡರ ಮಗ ವೆಂಕಟರಾಜು ನೀಡಿದ ದೂರಿನ ಮೇರೆಗೆ ಆರ್.ಸೋಮಸುಂದರ್ ಮತ್ತು ವಿಜಯಕುಮಾರ್ ವಿರುದ್ಧ ಲಕ್ಷ್ಮೀಪುರಂ ಠಾಣೆಯಲ್ಲಿ ಸೆ.25ರಂದು ಎಫ್‌ಐಆರ್ ದಾಖಲಾಗಿತ್ತು

ನೇಪಾಳದಲ್ಲಿ ಒಂದು ಗಂಟೆಯಲ್ಲಿ 4 ಪ್ರಬಲ ಭೂ ಕಂಪನ;

ದೆಹಲಿ, ಎನ್‌ಸಿಆರ್ ಸೇರಿ ಉ.ಭಾರತದಲ್ಲಿ ಕಂಪಿಸಿದ ಭೂಮಿ

ನವದೆಹಲಿ, ಅ.3– ನೆರೆಯ ನೇಪಾಳದಲ್ಲಿ ಇಂದು ಪ್ರಬಲ ಭೂಕಂಪನ ಸಂಭವಿಸಿದ್ದು, ಕೇವಲ ಒಂದು ಗಂಟೆ ಅವಧಿಯಲ್ಲಿ ಸತತ 4 ಭೂಕಂಪನಗಳು ವರದಿಯಾಗಿವೆ.

ಪಶ್ಚಿಮ ನೇಪಾಳದಲ್ಲಿ 10 ಕಿಲೋ ಮೀಟರ್ ಆಳದಲ್ಲಿ ಮಧ್ಯಾಹ್ನ 2:25 ಕ್ಕೆ 4.6 ತೀವ್ರತೆಯ ಮೊದಲ ಭೂಕಂಪ ಸಂಭವಿಸಿದೆ, ನಂತರ ಮೊದಲ ಕಂಪನ ಸಂಭವಿಸಿದ 25 ನಿಮಿಷಗಳಲ್ಲಿ ಅಂದರೆ 2:51 ಕ್ಕೆ 6.2 ತೀವ್ರತೆಯ 2ನೇ ಕಂಪನ ಸಂಭವಿಸಿದೆ. ಭೂಕಂಪದ ಕೇಂದ್ರ ಬಿಂದುವು ನೇಪಾಳದ Lat: 29.39 ಮತ್ತು Long: 81.23ರಲ್ಲಿ 5 ಕಿ.ಮೀ. ಆಳದಲ್ಲಿ ಕೇಂದ್ರಬಿಂದು ದಾಖಲಾಗಿತ್ತು ಭೂಕಂಪಶಾಸ್ತ್ರದ ರಾಷ್ಟ್ರೀಯ ಕೇಂದ್ರ (ಎನ್‌ಸಿಎಸ್) ಮಂಗಳವಾರ ತಿಳಿಸಿದೆ.

ಇದಾದ ಬಳಿಕ ಮತ್ತೆ ಅರ್ಧ ಗಂಟೆಯ ಅವಧಿಯಲ್ಲಿ ಇನ್ನೂ ಎರಡು ಕಂಪನಗಳು ದಾಖಲಾಗಿದ್ದು, ಮಧ್ಯಾಹ್ನ 3:06ರಲ್ಲಿ 3.6 ತೀವ್ರತೆಯೊಂದಿಗೆ 15ಕಿಮೀ ಆಳದಲ್ಲಿ 3ನೇ ಕಂಪನ ದಾಖಲಾಗಿದೆ. ಇದಾದ ಕೇಲವೇ ನಿಮಿಷಗಳ ಅಂತರದಲ್ಲಿ 4ನೇ ಕಂಪನ 3.1 ತೀವ್ರತೆಯಲ್ಲಿ 10 ಕಿ.ಮೀ. ಅಳದಲ್ಲಿ ದಾಖಲಾಗಿದೆ. ಈ ನಾಲ್ಕು ಭೂಕಂಪನಗಳು ನೇಪಾಳದಲ್ಲಿ ವ್ಯಾಪಕ ಭೀತಿ ಉಂಟು ಮಾಡಿದ್ದು, ಪ್ರಬಲ ಭೂಕಂಪನದ ಕೇಂದ್ರಬಿಂದು ಉತ್ತರಾಖಂಡದ ಜೋಶಿಮಠದ ಆಗ್ನೇಯಕ್ಕೆ 206 ಕಿ.ಮೀ. ಮತ್ತು ಉತ್ತರ ಪ್ರದೇಶದ ರಾಜಧಾನಿ ಲಕ್ನೋದ ಉತ್ತರಕ್ಕೆ 284 ಆಗಿದೆ.

ನೇಪಾಳ ಮಾತ್ರವಲ್ಲದೇ ದೆಹಲಿ–ಎನ್‌ಸಿಆರ್ ಸೇರಿದಂತೆ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಕಂಪನಗಳು ದಾಖಲಾಗಿದೆ.

44 ಇನ್ಸ್‌ಪೆಕ್ಟರ್‌ಗಳ ವರ್ಗಾವರ್ಗಿ

ಮೈಸೂರು, ಅ.3(ಎಸ್‌ಬಿಡಿ)– ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ 40ಕ್ಕೂ ಹೆಚ್ಚು ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಲಾಗಿದೆ.

ಮೈಸೂರು ಮಹಿಳಾ ಪೊಲೀಸ್ ಠಾಣೆಯ ವಿ.ಡಿ.ಮಮತಾ ದೇವರಾಜ ಸಂಚಾರ ಠಾಣೆಗೆ, ದಕ್ಷಿಣ ವಲಯ ಐಜಿಪಿ ಕಚೇರಿಯಲ್ಲಿದ್ದ ಜೆ.ಹೆಚ್.ಗಣೇಶ್ ಮಹಿಳಾ ಠಾಣೆಗೆ, ಡಿಸಿಆರ್‌ಇನಿಂದ ಮುಸ್ತಾಕ್ ಪಾಷಾ ಸಿಸಿಆರ್‌ಬಿಗೆ, ಸ್ಥಳ ನಿರೀಕ್ಷಣೆಯಲ್ಲಿದ್ದ ಎಸ್.ಡಿ.ಸುರೇಶ್ ಕುಮಾರ್ ವಿಜಯನಗರ ಠಾಣೆಗೆ, ಎನ್.ಎಂ.ಪೂಣಚ್ಚ ಮೈಸೂರು ನಗರ ಸಿಸಿಬಿ–1ಗೆ, ಎ.ಮಲ್ಲೇಶ ಹೆಬ್ಬಾಳ ಠಾಣೆಗೆ, ಬಿ.ಎಸ್.ರವಿಶಂಕರ್ ಲಕ್ಷ್ಮೀಪುರಂ ಠಾಣೆಗೆ, ರಾಮಕುಮಾರ್ ಸುಣಗಾರ್ ಎಂ ಡಿಸಿಆರ್‌ಇಗೆ, ಧನಂಜಯ ತಿ.ನರಸೀಪುರ ಠಾಣೆಗೆ, ಪಿ.ಪಿ.ಸಂತೋಷ್ ಕೆ.ಆರ್.ನಗರ ಠಾಣೆಗೆ, ಎಂ.ಕೆ.ದೀಪಕ್ ಬೈಲಕುಪ್ಪೆ ವೃತ್ತಕ್ಕೆ, ಹೆಚ್.ಡಿ.ಅನಿಲ್ ಕುಮಾರ್ ರಾಜ್ಯ ಗುಪ್ತವಾರ್ತೆಗೆ, ಚೆಸ್ಕಾಂ ಜಾಗೃತ ದಳ ಮಂಡ್ಯಕ್ಕೆ ವರ್ಗಾವಣೆ ಆದೇಶದಲ್ಲಿದ್ದ ಎಂ.ಸುನೀಲ್ ಕುಮಾರ್ ನಂಜನಗೂಡು ಗ್ರಾಮಾಂತರ ಠಾಣೆಗೆ ವರ್ಗಾವಣೆಯಾಗಿದ್ದಾರೆ.

ಇನ್ನೂ ಸ್ಥಳ ನಿರೀಕ್ಷಣೆಯಲ್ಲಿದ್ದ 25 ಮಂದಿ ಸೇರಿ ಒಟ್ಟು 44 ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ ಮಾಡಿ, ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಆದರ ಮಾಲೀಕರಾದ ಮೈಸೂರು ನಗರ, ವಿನಾಯಕನಗರ, 7ನೇ ಅಡ್ಡ ರಸ್ತೆ, 8ನೇ ಮುಖ್ಯರಸ್ತೆ, ಮನೆ ನಂ. 25/1ಬಿ ರಲ್ಲಿ ವಾಸವಾಗಿರುವ ಶ್ರೀ ಮಂಜುನಾಥ ಬಿ.ರವರ ಧರ್ಮಪತ್ನಿಯಾದ ಶ್ರೀಮತಿ ವಿಜಯ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಹೊಸಹಳ್ಳಿ ಮನೆ ನಂ. 39 ರಲ್ಲಿ ವಾಸವಾಗಿರುವ ಶ್ರೀ ಪುಟ್ಟರಾಜು ರವರ ಮಗ ಶ್ರೀ ಸುನೀಲ್ ಕುಮಾರ್ ಪಿ.ಟಿ. ಹಾಗೂ ಮಂಡ್ಯ ತಾಲ್ಲೂಕು, ಕೀಳಘಟ್ಟ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಕಾಳೇಗೌಡರವರ ಮಗನಾದ ಶ್ರೀ ಕೆ. ರವೀಂದ್ರ ರವರುಗಳಿಂದ ಶುದ್ಧ ಕ್ರಯಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 7(ಏಳು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನಮ್ಮ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಂಗಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 130 ರ ಒಟ್ಟು ವಿಸ್ತೀರ್ಣ 1 ಎಕರೆ 06 ಗುಂಟೆ ಪೈಕಿ 24 ಗುಂಟೆ, ಸರ್ವೆ ನಂ. 131 ರ ವಿಸ್ತೀರ್ಣ 2 ಎಕರೆ 5 ಗುಂಟೆ, ಸರ್ವೆ ನಂ. 133 ವಿಸ್ತೀರ್ಣ 5 ಎಕರೆ 4 ಗುಂಟೆ, ಸರ್ವೆ ನಂ. 142 ರ ವಿಸ್ತೀರ್ಣ 8 ಎಕರೆ 07 ಗುಂಟೆ ಒಟ್ಟು ವಿಸ್ತೀರ್ಣ 16 ಎಕರೆ ಜಮೀನಿಗೆ ಚೆಕ್ಕುಬಂಧಿ: ಪೂರ್ವಕ್ಕೆ : ರಸ್ತೆ ಹಾಗೂ ನಾಲೆ, ಪಶ್ಚಿಮಕ್ಕೆ : ಸರ್ವೆ ನಂ. 142 ಕ್ಕೆ ಹೊಂದಿಕೊಂಡಂತೆ ನಾಲೆ ಹಾಗೂ ರಸ್ತೆ, ಉತ್ತರಕ್ಕೆ: ಸರ್ವೆ ನಂ. 133 ಕ್ಕೆ ಹೊಂದಿಕೊಂಡಂತೆ ನಾಲೆ ಹಾಗೂ ರಸ್ತೆ, ದಕ್ಷಿಣಕ್ಕೆ : ಸರ್ಕಾರಿ ರಸ್ತೆ.

Sd/- J.M. AIYANNA B.Sc., LL.B,
Advocate, KAR No. 1635/1995
1143/1E, 1st Floor, Chanakya Circle, Geetha Road, Chamarajapuram, Mysuru-570005
Ph: 0821-4287199, Mob: 9845113628
ದಿನಾಂಕ: 03.10.2023, ಸ್ಥಳ: ಮೈಸೂರು.

IN THE COURT OF THE HON'BLE SECOND ADDITIONAL SENIOR CIVIL JUDGE AT MYSURU

[Original Jurisdiction]
In the Matter Of Original Suit In O.S. No. 942 of 2022

Between: Smt. Mary Philomena M.S And Others — Plaintiffs

And: Mr. Xaviar Francis And Another — Defendants

2. Miss. Vijaya Daughter of Late Shri. Swaminathan Aged about 75 years Residing No. 3338, Lourd nagara, church main Road, Lakshar Mohalla, Mysuru

SUMMONS TO THE RESPONDENT,

Whereas the above named Plaintiff has instituted the above Original Suit against you, for the relief of Division of Property in O.S. No. 942 of 2022 on the file of the Hon'ble Second Additional Senior Civil Judge at Mysuru, and you being the respondent, you are hereby summoned to appear in this Court in person or by a pleader on the 23/11/2023 day of 2023 at 11.00 'O' Clock, to answer the same, failing which the suit will be disposed of ex parte.

Given Under my hand and the seal of the Court this Court on 26 September 2023

By Order of Court

Sd/- Chief Administrative Officer, Second Additional Senior Civil Judge Mysuru

Advocate, Shri. Rohith PP, Himanshi Law Associates, Attorneys at Law & Corporate Consultants, Ground Floor No. 529, 9th Cross, Near Ravi Clinic Tank Road, N. R. Mohalla Mysuru

ಪ್ರಕಟಣೆ

ದೇವಾಂಗ ಉದ್ಯೋಗಸ್ಥರ ಬಳಗ (ರಿ) ದ ಕಾರ್ಯಕಾರಿ ಮಂಡಳಿಯ 11 (ಹನ್ನೊಂದು) ನಿರ್ದೇಶಕರುಗಳ ಸ್ಥಾನಕ್ಕೆ ದಿನಾಂಕ: 08–10–2023 ರ ಭಾನುವಾರದಂದು ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 04.00 ಗಂಟೆಯವರೆಗೆ ನಂ: ಸಿ.ಎ.01, ವಿಜಯನಗರ 2ನೇ ಹಂತದ ದೇವಾಂಗ ಉದ್ಯೋಗಸ್ಥರ ಬಳಗದ ಕಾಲೇಜು ಕಟ್ಟಡದ ಕೊಠಡಿಯಲ್ಲಿ ಚುನಾವಣೆ ನಡೆಸಲು ಕಾರ್ಯಕಾರಿ ಮಂಡಳಿ ತೀರ್ಮಾನಿಸಿರುತ್ತದೆ. ಆದರಂತೆ, ಈ ಬಳಗದ ಸದಸ್ಯರು ಸದರಿ ದಿನಾಂಕದಂದು ಸಮಯಕ್ಕೆ ಸರಿಯಾಗಿ ಆಗಮಿಸಿ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸುವಂತೆ ತಮ್ಮನ್ನು ಕೋರುತ್ತೇವೆ.

ತಮ್ಮ ವಿಶ್ವಾಸಿ,
ಲಕ್ಷ್ಮಣಪ್ಪ ಕೆ.ಜಿ
ಪ್ರಧಾನ ಕಾರ್ಯದರ್ಶಿ
ದೇವಾಂಗ ಉದ್ಯೋಗಸ್ಥರ ಬಳಗ (ರಿ)
ವಿಜಯನಗರ 2ನೇ ಹಂತ, ಮೈಸೂರು

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ
ನೀಸಸಿಒಚ (ಪಶ್ಚಿಮ) ವಿಭಾಗ, ಪಾವನೀಸ ಅವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ/ಕಾಇಂ/ನೀಸಸಿಒಚ(ಪಶ್ಚಿಮ)/ಟಿಎನ್–6/1087/2023–24 ದಿನಾಂಕ: 03–10–2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ (ಸಂಜೆ 5:30 ಗಂಟೆ ನಂತರ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಸಂಜೆ 5:30 ಗಂಟೆ ಒಳಗೆ)	ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಂಜೆ 5:45 ಗಂಟೆಯ ನಂತರ)
1	Kw-1 (ಅಲ್ಪಾವಧಿ ಟೆಂಡರ್‌ಗಳು)	2 ಸಂಖ್ಯೆ	20.00	04-10-2023	11-10-2023	12-10-2023
2	Kw-1	3 ಸಂಖ್ಯೆ	31.50	04-10-2023	19-10-2023	20-10-2023
3	Goods Tenders	2 ಸಂಖ್ಯೆ	83.66	04-10-2023	19-10-2023	20-10-2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ನೀಸಸಿಒಚ(ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸ್ಥಾಪನೆ : 1916

ದಿ–ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.

ಶ್ರೀ ಹರ್ಷ ರಸ್ತೆ, ಮೈಸೂರು – 570001, ದೂ.: 2520026

ಹರಾಜು ಮಾರಾಟ

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅನ್ವಯ ಬ್ಯಾಂಕಿಗೆ ಆಧಾರ ಮಾಡಿರುವ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊಬಲಗು + ಅಸಲು+ಬಡ್ಡಿ+ಇತರೆ	ಮೀಸಲು ಬೆಲೆ ಲಕ್ಷ ರೂ.ಗಳಲ್ಲಿ	ಹರಾಜಿನ ದಿನಾಂಕ ಮತ್ತು ಸಮಯ	ಬ್ಯಾಂಕಿಗೆ ಆಧಾರವಾಗಿರುವ ಸ್ಥಿರಾಸ್ತಿಯ ಸ್ವತ್ತಿನ ವಿವರಗಳು
1	ಶಿವರಾಂ S/o ಮಂಚಶೆಟ್ಟಿ ಮತ್ತು ಎಂ.ಎಸ್.ಯಾದವ್ ಅಕೌಂಟ್ ನಂ: 978 ಮತ್ತು 385	1462000	3300000	26.10.2023 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ದೇವರಾಜ ಮೊಹಲ್ಲಾ, ಹೆಬ್ಬಾಳು 2ನೇ ಹಂತ, ಮನೆ ನಂ.497 ಅಳತೆ ಪೂ+ಪ 9 ಮೀ, ದ+ಉ 6 ಮೀ. ಪೂರ್ವಕ್ಕೆ – ರಸ್ತೆ, ಪಶ್ಚಿಮಕ್ಕೆ – ಮುಡಾ ನಿವೇಶನ, ಉತ್ತರಕ್ಕೆ 496ನೇ ಸ್ವತ್ತು, ದಕ್ಷಿಣಕ್ಕೆ 498ನೇ ಸ್ವತ್ತು.
2	ಬಿ.ಪ್ರಸನ್ನ S/o ಕೆ.ಬೈರಪ್ಪ ಮತ್ತು ಕೆ.ಆರ್.ಸ್ಮೃತಿ ಅಕೌಂಟ್ ನಂ: 998 ಮತ್ತು 428	1287000	2000000	26.10.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ದೇವರಾಜ ಮೊಹಲ್ಲಾ ವಿನಾಯಕ ನಗರ 2ನೇ ಮೇನ್, 3ನೇ ಕ್ರಾಸ್, ಮನೆ ನಂ.2495/1, ಅಳತೆ ಪೂ+ಪ 33ಅಡಿ. ದ+ಉ 40 ಅಡಿ, ಪೂರ್ವಕ್ಕೆ –ಜೋರಯ್ಯರವರ ಸ್ವತ್ತು, ಪಶ್ಚಿಮಕ್ಕೆ–ಖಾಸಗಿ ಸ್ವತ್ತು, ಉತ್ತರಕ್ಕೆ–ಖಾಸಗಿ ಸ್ವತ್ತು ಮತ್ತು ಕಾಮನ್ ಪ್ಯಾಸೇಜ್, ದಕ್ಷಿಣಕ್ಕೆ ದಾಸಪ್ಪರ ಸ್ವತ್ತು
3	ಎಂ.ಚೇತನ್ S/o ಎಂ.ಸಿ.ಮಂಜುನಾಥ ಅಕೌಂಟ್ ನಂ: 1053 ಮತ್ತು 479	1619000	2200000	27.10.2023 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ,ಕೆ.ಆರ್.ಮೊಹಲ್ಲಾ ಕ್ಷೇತ್ರಯ್ಯ ರಸ್ತೆ, 5ನೇ ಕ್ರಾಸ್, # 262/1ಎ, ಕೆ–1, ಅಳತೆ ಪೂ+ಪ 16 ಅಡಿ, ದ+ಉ 28 ಅಡಿ, ಪೂರ್ವಕ್ಕೆ–ಪುಟ್ಟಸ್ವಾಮಿ ಸ್ವತ್ತು, ಪಶ್ಚಿಮಕ್ಕೆ–5ನೇ ಕ್ರಾಸ್, ಉತ್ತರಕ್ಕೆ–ಕೃಷ್ಣಪ್ಪರವರ ಸ್ವತ್ತು, ದಕ್ಷಿಣಕ್ಕೆ ಮನೆ ನಂ.262/1
4	ಮಹದೇವ S/o ಮಲ್ಲಯ್ಯ ಅಕೌಂಟ್ ನಂ: 1074	1077000	1700000	27.10.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಎನ್.ಆರ್.ಮೊಹಲ್ಲಾ, ಓಡಿ.ಬ್ಲಾಕ್, ಕೆಸರೆ ಕೆಹೆಚ್‌ಬಿ ಕಾಲೋನಿ, ಮನೆ ನಂ.60/1, ಅಳತೆ ಪೂ+ಪ 7ಮೀ, ದ+ಉ 36ಮೀ ಪೂರ್ವಕ್ಕೆ–ಸದರಿ ಸ್ವತ್ತಿನ ಉಳಿಕೆ ಭಾಗ, ಪಶ್ಚಿಮಕ್ಕೆ–59 ನಂಬರಿನ ಸ್ವತ್ತು, ಉತ್ತರಕ್ಕೆ–53 ನಂಬರಿನ ಸ್ವತ್ತು, ದಕ್ಷಿಣಕ್ಕೆ ರಸ್ತೆ.
5	ಎನ್.ಆನಂದ S/o ಆರ್.ನಾರಾಯಣ ಅಕೌಂಟ್ ನಂ: 1098	1620000	5100000	27–10–2023 ಸಂಜೆ 4 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ನಜರಬಾದ್ ಮೊಹಲ್ಲಾ ಗಿರಿಯಾಬೋವಿ ಪಾಳ್ಯ ಮನೆ ನಂ.1821/1. 41/ಬಿ, ಅಳತೆ ಪೂ+ಪ 28 ಅಡಿ, ದ+ಉ 66 ಅಡಿ, ಪೂರ್ವಕ್ಕೆ–ನಂಜುಂಡಯ್ಯನವರ ಸ್ವತ್ತು ಪಶ್ಚಿಮಕ್ಕೆ –ಕಮಲಮ್ಮನವರ ಸ್ವತ್ತು, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ–ಖಾಸಗಿ ಸ್ವತ್ತು
6	ಎಂ.ನಾಗರಾಜ S/o ಮಹದೇವ ಅಕೌಂಟ್ ನಂ: 1073	1345000	2700000	31.10.2023 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ನಜರಬಾದ್ ಮೊಹಲ್ಲಾ ಇಟ್ಟಿಗೆಗೂಡು ಹೊಸಬೀದಿ, 3ನೇ ಕ್ರಾಸ್, ಮನೆ ನಂ.1202/1, ಅಳತೆ ಪೂ+ಪ–13.6 ಅಡಿ, ದ+ಉ 27.6 ಅಡಿ, ಪೂರ್ವಕ್ಕೆ–ರಂಗಪ್ಪರವರ ಮನೆ, ಪಶ್ಚಿಮಕ್ಕೆ –ಗೋಪಾಲರವರ ಮನೆ, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ:ಸುಶೀಲರವರ ಮನೆ.
7	ಖತೀಜಾ ಬಾಯಿ ಮತ್ತು ರೇಷ್ಮಾ ಜಬೀನ್ ಅಕೌಂಟ್ ನಂ: 1079	1945000	3200000	31.10.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಲಷ್ಕರ್ ಮೊಹಲ್ಲಾ, CITB Colony Hudco North-East of Mahadevapura Extn. ಮನೆ ನಂ.LIG-30, ಅಳತೆ ಪೂ+ಪ 7.40 ಮೀ, ದ+ಉ 8.40 ಮೀ, ಪೂರ್ವಕ್ಕೆ LIG-30/A, ಪಶ್ಚಿಮಕ್ಕೆ LIG-29,ಉತ್ತರಕ್ಕೆ LIG-31, ದಕ್ಷಿಣಕ್ಕೆ–ರಸ್ತೆ

ಹರಾಜಿನ ನಿಯಮ ಮತ್ತು ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವವರು ರೂ. 25000 ಗಳನ್ನು ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ಇವರ ಪರವಾಗಿ ಪಡೆದ ಡಿ.ಡಿ. ಅಥವಾ ನಗದು ರೂಪದಲ್ಲಿ ಠೇವಣಿಯಾಗಿ ಇಡಬೇಕು. ಹರಾಜಿನ ನಂತರ ಈ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ಪಡೆಯಬಹುದು.
2. ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅದೇ ದಿನ ಬಿಡ್ ಮೊಬಲಗಿನ ಶೇ. 25 ರಷ್ಟು ಹಣವನ್ನು ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಮೂಲಕ ಪಾವತಿಸಬೇಕು ಮತ್ತು ಉಳಿದ ಶೇ. 25 ರಷ್ಟು ಹಣವನ್ನು 15 ದಿನಗಳೊಳಗೆ ಸಂದಾಯ ಮಾಡಬೇಕಾಗಿರುತ್ತದೆ.
3. ಯಶಸ್ವಿಯಾದ ಬಿಡ್‌ದಾರರು ಕಾನೂನು / ಪ್ರಸಂಗಿಕ ಖರ್ಚು – ವೆಚ್ಚಗಳಾದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ನೀರು, ವಿದ್ಯುತ್ ಇತ್ಯಾದಿ ಎಲ್ಲವನ್ನೂ ತಾವೇ ಭರಿಸಬೇಕಾಗಿರುತ್ತದೆ.
4. ಸದರಿ ಹರಾಜು ಸ್ವತ್ತು ಹೇಗಿದೆಯೋ ಹಾಗೆಯೇ ಹರಾಜು ಮಾಡಲಾಗುತ್ತದೆ.
5. ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಬಿಡ್‌ಅನ್ನು ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
6. ಸ್ವತ್ತಿನ ಪರಿಶೀಲನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್‌ದಾರರು ಕೆಲಸದ ಯಾವುದೇ ದಿನದಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಾಯಂಕಾಲ 4.30 ಗಂಟೆಯಿಂದ 6.30 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ದೂರವಾಣಿ : 2520026 / 2420829
ದಿನಾಂಕ: 03/10/2023, ಸ್ಥಳ : ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು